ಇನ್ನೆಂದೂ ಆ ಚೇತನ ವಿಷಯಾನಂದಕ್ಕೆ ಮರುಳಾಗದು. ಜೊತೆಗೆ ಬ್ರಹ್ಮಾನಂದದಲ್ಲೇ ತನ್ಮಯವಾಗಿರಲು ಹಾತೊರೆಯದಿರದು.

ನೀಡು ದಿನಂ ನಿಜಾತ್ಮನನೆ ಭಾವಿಸಿ ಸಂಸ್ಕೃತನಾದಮೇಲೆ ತಾಂ |
ನೋಡುವುದಲ್ಲಿಯೇ ತಿಳಿವುದಲ್ಲಿಯೆ ಪೊರ್ದುವುದಲ್ಲಿಯೇ ಪ್ರಿಯಂ ||
ಮಾಡುವುದಲ್ಲಿಯೇ ಸುಖಿವುದಲ್ಲಿಯೆ ಅರ್ಚಿಪುದಲ್ಲಿಯೇ ಮರ |
ಲ್ದಾಡುವುದಲ್ಲಿಯೇ ಪೊರಗೆ ಮೆಚ್ಚನಲಾ ಅಪರಾಜಿತೇಶ್ವರಾ || ೧೦೬ ||

ಆತ್ಮಾನುಸಂಧಾನ ಅಭ್ಯಾಸವಾದ ಮೇಲೆ ಲೌಕಿಕವ್ಯವಹಾರ ಸಾಧಕನಿಗೆ ರುಚಿಸದು. ಆತ್ಮದ ಅನಂತಸಿರಿಯನ್ನು ನೋಡುತ್ತ ದಿನವೆಲ್ಲ ಕಳೆದುಬಿಡುವನು! ಆತ್ಮನ 'ಅನಂತಜ್ಞಾನ'ದಲ್ಲಿ ತನ್ಮಯನಾಗಿಬಿಡುವನು. ಸರ್ವಶಕ್ತನಾದ ಆತ್ಮನಲ್ಲಿ ಆಶ್ರಯ ಪಡೆದು ಆನಂದಿಸುವನು. ಆತ್ಮದೊಡನೆ ನೋಟ, ಬೇಟ ಹಾಗೂ ಕೂಟಗಳ್ನಾಡುತ್ತ ಓಲಾಡುವನು. ತನ್ನಾತ್ಮನಿಗೇನೆ ಸಕಲಪೂಜೆಯನ್ನು ಸಲ್ಲಿಸಿಬಿಡುವನು. ಏನಾದರೂ ವಿನೋದಪಡುವುದಾದರೆ ತನ್ನಾತ್ಮದೊಡನೆ ಸರಸವಾಡುವನು. ಬಾಹ್ಯಜಗತ್ತು ಇಂತ ಹಂಸಾನುಭವಿಗೆ ಬೇಡವಾಗುವುದು—ನಿಜವಾದ ಸ್ವಾವಲಂಬನೆಯೆಂದರೆ ಹೀಗಿರಬೇಕು. ಸ್ವರ್ಗದ ದೇವಾಧಿದೇವತೆಗಳೂ ಪರಾವಲಂಬಿಗಳೆ! ಆತ್ಮಜ್ಞಾನಿ ಮಾತ್ರ ಸ್ವಾವಲಂಬಿ! "ಜ್ಞಾನಿ ತನ್ನ ಅಂತರ್ಯದಲ್ಲಿ ಭಗವದಾನಂದವನ್ನು ಅನುಭವಿಸುತ್ತಾನೆ; ಸಮುದ್ರ ಮಟ್ಟದಿಂದ ಎತ್ತರದಲ್ಲಿ ಹರಿವ ಗಂಗೆಯ ಹಾಗೆ ಅದು ಒಂದೇ ದಿಕ್ಕಿಗೆ ಹರಿಯುತ್ತದೆ. ಅವರ ದೃಷ್ಟಿಯಿಂದ ಎಲ್ಲವೂ ಸ್ವಪ್ನದ ಹಾಗೆ; ಯಾವಾಗಲೂ ಸ್ವಸ್ವರೂಪದಲ್ಲೇ ನೆಲೆಸಿರುತ್ತಾರೆ. ಆದರೆ ಭಕ್ತನ ಮನಸ್ಸು ಯಾವಾಗಲೂ ಒಂದೇ ದಿಕ್ಕಿನದಲ್ಲ. ಆತನ ಭಗವದ್ಭಾವನೆಯಲ್ಲಿ ಉಬ್ಬರವಿಳಿತಗಳಿವೆ. ಸಾಗರದಲ್ಲಿ ಹಿಮಗಡ್ಡೆ ಮುಳುಗಿ ಎದ್ದು ತೇಲಾಡುವುದಿಲ್ಲವೆ, ಹಾಗೇ ಆತ ಭಗವದಾನಂದದ ಸಾಗರದಲ್ಲಿ ಕೆಲ ವೇಳೆ ಈಜು ಹೊಡೆಯುತ್ತಾನೆ, ಇನ್ನೂ ಕೆಲವು ವೇಳೆ ಮುಳುಗುತ್ತಾನೆ; ಮತ್ತೆ ಕೆಲವು ವೇಳೆ ಏಳುತ್ತಾನೆ"[೧] ಎಂದು ಶ್ರೀ ರಾಮಕೃಷ್ಣ ಪರಮಹಂಸರು ಜ್ಞಾನಿಯ ಹಾಗೂ ಭಕ್ತನ ಲಕ್ಷಣವನ್ನು ವಿವರಿಸಿರುವರು.

ಸಿರಿಯೊಳಗಂತದೇ ಸಿರಿ ಸುಖಕ್ಕದೆ ಸೌಖ್ಯವನೇಕ ತತ್ವದಾ |
ತಿರುಳದೆ ತಾನೆ ಕಟ್ಟಕಡೆ ಸರ್ವವಿಚಾರಕೆ ಯೆಂತೆನಲ್ಕೆಸ ||
ದ್ಗುರುಗಳುಮೈವರಿರ್ದರದರೊಳ್ವರದರ್ಶನಬೋಧ ವೃತ್ತಿಗಳ್ |
ಪರಮತಪಂಗಳಲ್ಲಿ ನೆಲೆಗೊಂಡುದರಿಂದಪರಾಜಿತೇಶ್ವರಾ || ೧೦೭ ||

ಆತ್ಮಸ್ವರೂಪವೇ ಐಶ್ವರ್ಯಗಳಿಗೆಲ್ಲ ಐಶ್ವರ್ಯ; ಇದೇ ಸುಖದಲ್ಲೆಲ್ಲ ಸುಖ! ಸರ್ವವಿಚಾರದ ಕಟ್ಟಕಡೆಯೇ ಆತ್ಮಸ್ವರೂಪ! ನಾನಾ ತತ್ವಗಳ ಸಾರವೇ ಇದು! ರತ್ನತ್ರಯದ ತೌರುಮನೆಯೂ ಆತ್ಮಸ್ವರೂಪವೇ ! ಪರಮತಪಸ್ಸು ಇದರಲ್ಲೇ ನೆಲೆಗೊಂಡಿದೆ. ಹೀಗಿರುವುದರಿಂದಲೇ 'ಪಂಚಪರಮೇಷ್ಠಿ'ಗಳೈವರೂ ಆತ್ಮಸ್ವರೂಪದಲ್ಲಿ ಅಂತರ್ಗತರಾಗಿರುವರು!"—ಹಿಂದಾಗಲೇ ರತ್ನಾಕರ ಇದೇ ಅಭಿಪ್ರಾಯವನ್ನು ಶಾಸ್ತ್ರೋಕ್ತವಾಗಿ ವಿವರಿಸಿರುವನು: 'ವರಗುರು

೧. ಶ್ರೀ ರಾ. ಕೃ. ವ. ವೇ, ಪೂ. ಪು. ೩೮೨.

ಪಂಚಕಂ....ನಿಟ್ಟಿಸೊಳಗೆಂದೆಯಲಾ.'[೧] ಈಗ ಅದನ್ನೇ ಭಾವವೇಶದಿಂದ ಕಾವ್ಯವಾಗಿ ಕುಣಿಸುತ್ತಿರುವನು.

ಯೋಗದೊಳಾತ್ಮತತ್ವವೆ ಕಡೆ ದಶವಿಧ | ಭೋಗಕಂಗನೆ ಕಡೆಯೆಂದು ||
ಯೋಗಶಾಸ್ತ್ರವ ಭೋಗಶಾಸ್ತ್ರವನೆರಡನು | ತೂಗಿ ತೋರ್ಪಡಿಸಿ ಪಾಡಿದಳು[೨] ||

'ಮೈಯೊಳಡಗಿರ್ದ ಬಯಲರೂಪನನು ನಡುನೆತ್ತಿಯಿಂದಡಿಮುಟ್ಟ ಕಂಡನು ಕಟ್ಟಕಡೆಯಕಾಂಬಂತೆ ತತ್ವಗಳಾ'[೩] ಶತಕಕ್ಕೂ ಭರತೇಶವೈಭವಕ್ಕೂ ಅಭಿಪ್ರಾಯದಲ್ಲಿ ಎಂಥ ಐಕ್ಯತೆಯಿದೆಯೆಂಬುದನ್ನು ಗಮನಿಸಬಹುದು.

ಬಹುವಚನಂಗಳೇಕೆ ಭುವನತ್ರಯ ಸಾರಮಿದಾತ್ಮತತ್ವಮು |
ತ್ಸಹಪರನಾಗಿ ತಾನದನೆ ಭಾವಿಸುತಿರ್ದೊಡೆ ಮುಕ್ತಿಯೆಯ್ದುಗುಂ ||
ಸಹಜಮಿದೊಂದೆ ಇನ್ನುಳಿದುವೆಲ್ಲವವೇಂ ವ್ಯವಹಾರವಾತ್ಮನಂ |
ವಹಿಸಿ ಭವಂಗಳೊಳ್ಬರಿಸುತಿರ್ಪುವಲಾ ಅಪರಾಜಿತೇಶ್ವರಾ || ೧೦೮ ||

"ಮೂರುಲೋಕದಲ್ಲೆಲ್ಲ ಆತ್ಮತತ್ವವೊಂದೇ ಸಾರಭೂತವಾದುದು! ಉತ್ಸಾಹಪೂರ್ಣರಾಗಿ ಯಾರು ಅದನ್ನೇ ಭಾವಿಸುವರೋ ಅಂಥವರು ಮುಕ್ತರಾಗುವರು! ಲೋಕದಲ್ಲಿ ಹಂಸಕಲೋಪಾಸನೆಯೊಂದೇ ಸಹಜವಾದುದು! ಉಳಿದವುಗಳಿಂದ ಏನು ತಾನೆ ಆದೀತು? ಈ ಪುದ್ಗಲಮಯ ಜಗತ್ತು ಆತ್ಮನೊಡನೆ ಸಖ್ಯ ಬೆಳೆಸಿ ಅದನ್ನು ಭವಭವಗಳಲ್ಲೂ ಅಂಡಲೆಸುತ್ತಿದೆಯಲ್ಲ!

ಮೂರುದಿವಸ ಮೂರುಗಳಿಗೆಯಾಗಿದ್ದುದು | ತೋರಿತಿಲ್ಲುದರಾಗ್ನಿ ನೃಪಗೆ ||
ಮೂರುಲೋಕದ ಸಾರವೆನಿಪಾತ್ಮ ಸುಖದೊಳಾ | ನೀರನೋಲಾಡಿ ತಣಿದನು[೪] ||

ಮೂರುಲೋಕದ ಸಾರವೆನಿಪ ಆತ್ಮಸುಖದಲ್ಲಿ ಭರತೇಶನನ್ನೂ ರತ್ನಾಕರ ಮುಳುಗಿಸಿರುವನು!

ಆವತಪಂಗಳುಂ ಶ್ರುತಮುಮಾಚರಣಂಗಳುಮುಕ್ಕೆ ತನ್ನ ಚಿ |
ದ್ಭಾವದ ನೋಟದೊಳ್ಪುದಿದು ಬಂದೊಡೆ ನಿರ್ಜರೆ ಮಾಳ್ಕುಮಷ್ಟಕ ||
ರ್ಮಾವಳಿಯಂ ಬಳಿಕ್ಕೆ ಶಿವಮಪ್ಪುದು ತಾನೆಯದಲ್ಲದಿರ್ದೊಡಾ |
ಜೀವಕೆ ಪುಣ್ಯಬಂಧವನೆ ಮಾಳ್ಪುದಲಾ ಅಪರಾಜಿತೇಶ್ವರಾ || ೧೦೯ ||

"ತಪವಾಗಲಿ, ಶ್ರುತವಾಗಲಿ, ಆಚರಣೆಯಾಗಲಿ ಹಂಸಕಲೆಯ ಒಪ್ಪವನ್ನು ಪಡೆದಾಗ 'ಕರ್ಮನಿರ್ಜರೆ'ಯಾಗುವುದು; 'ಕರ್ಮಾಷ್ಟಕ'ಗಳೂ ಕರಗಿ ಕೈವಲ್ಯ ಲಭಿಸುವುದು. ಅಂತಲ್ಲದೆ ಅವು ಸಕಾಮದಿಂದ ಕೂಡಿದ್ದರೆ (ವ್ಯವಹಾರ ಧರ್ಮಧ್ಯಾನ, ವ್ಯವಹಾರ ಶುಕ್ಲಧ್ಯಾನ) ಪುಣ್ಯಬಂಧವಾಗದಿರದು."

೧. ಅ. ಶ. ೭೪.
೨. ಭ. ವೈ. ೧೧ನೇ ಸಂ. ೨೬.
೩. ಭ. ವೈ. ೧೮ನೇ ಸಂ, ೨೮.
೪. ಭ. ವೈ. ೨೪ನೇ ಸಂ., ಪ. ೨೫.

ತ್ರಿಭುವನಸಾರ ದಿವ್ಯಧ್ವನಿಸಾರ ಮ | ತ್ತಭಿನವ ತತ್ವಾರ್ಥಸಾರಾ ||
ವಿಭವೈಕಸಾರ ವಿದ್ಯಾಸಾರ ಮತಿದೋರು | ಪ್ರಭುವೆ ನಿರಂಜನಸಿದ್ಧಾ[1] || ೧ ||
ಯೋಗವಾಗಲಿ ಭೋಗವಾಗಲಿ ನಿನ್ನಸಂ | ಯೋಗವಾದರೆ ತಾನೆ ಮುಕ್ತಿ ||
ಶ್ರೀಗುರುನಾಥ ನನ್ನೆದೆಯೊಳಿರೆಲೆ ಮಹಾ | ಭೋಗಿ ಚಿದಂಬರಪುರುಷಾ[2] || ೯೭ ||

ಭರತೇಶವೈಭವದ ನಿರಂಜನಸ್ತುತಿಯಲ್ಲಿ ರತ್ನಾಕರ ಭಕ್ತಿಯೋಗವನ್ನೂ ಜ್ಞಾನಯೋಗವನ್ನೂ ಒಟ್ಟಿನಲ್ಲಿ ಜೈನದರ್ಶನವನ್ನೂ ಮುಪ್ಪುರಿಗೊಳ್ಳುವಂತೆ ಬೆಸೆದು ಕಲೆಯ ಮೆರುಗಿತ್ತಿರುವನು!

ವ್ಯವಹಾರ ಹಾಗೂ ನಿಶ್ಚಯಧ್ಯಾನವನ್ನು ರತ್ನಾಕರ ಮತ್ತೆ ಮತ್ತೆ ವಿವರಿಸುವನು.

ಭವ್ಯನಭವ್ಯನಿರ್ವರು ಮುದಗ್ರತಪೋಗ್ರತ ಶಾಸ್ತ್ರದೊಳ್ಸಮಾ |
ನವ್ಯವಸಾಯರಪ್ಪರದರಿಂ ಸುರಸಂಪದಮಪ್ಪುದಲ್ಲದೆ ||
ಅವ್ಯಯಸಿದ್ಧಿಯಾಗದದು ತನ್ನಯ ಚಿತ್ತವನಾತ್ಮ ರೂಪದೊಳ್ |
ಭವ್ಯತಪಸ್ವಿ ಯೋಜಿಸಿದೊಡಪ್ಪುದಲಾ ಅಪರಾಜಿತೇಶ್ವರಾ || ೧೧೦ ||

'ಭವ್ಯ' ಮತ್ತು 'ಅಭವ್ಯ'ರಿಬ್ಬರೂ ಉಗ್ರತಪಸ್ಸನ್ನಾಚರಿಸಬಹುದು; ಶಾಸ್ತ್ರಾಧ್ಯಯನದಲ್ಲಿ ಇಬ್ಬರೂ ಪಾರಂಗತರಾಗಬಹುದು. ಇದರಿಂದ ಸುರಪದವಿ ಲಭಿಸೀತೆ ವಿನ ಮೋಕ್ಷ ಪ್ರಾಪ್ತಿಯಾಗದು. ಭವ್ಯನಾದ ಮಹರ್ಷಿ ಮಾತ್ರ ತನ್ನ ಮನವನ್ನು ಸ್ವಸ್ವರೂಪದಲ್ಲಿ ಲೀನಗೊಳಿಸುವುದರಿಂದ ಕರ್ಮಕ್ಷಯವಾಗಿ ಕೈವಲ್ಯಲಕ್ಷ್ಮಿ ಆತನಿಗೊಲಿದು ಬರುವಳು!

ಬೂರಿಶಾಸ್ತ್ರವನೋದಿ ತಪಸುಮಾಡಿಯು ಧ್ಯಾನ | ದೂರವಾದರೆ ಮುಕ್ತಿಯಿಲ್ಲ ||
ಸಾರಭವ್ಯರ ಕೃತ್ಯವಿದು ನಿತ್ಯಧ್ಯಾನಾಲಂ | ಕಾರನಾಗೆಲೆ ಭವ್ಯಯೆಂದಾ[3] ||

ಪ್ರಥಮ ಚಕ್ರೇಶನಿಗೆ ಆದಿಬ್ರಹ್ಮ ಬ್ರಹ್ಮೋಪದೇಶ ಮಾಡುತ್ತಾ ಆತ್ಮಧ್ಯಾನದ ಮಹತ್ವವನ್ನು ವಿವರಿಸಿರುವನು.

ಮನೆಯೊಳೆ ಪೂಳ್ದ ತನ್ನೊಡವೆಯಂ ತೆಗೆದುಣ್ಬೊಡೆ ಪುಣ್ಯಮಿಲ್ಲದಂ |
ಧನಿಕರಪೊರ್ದಿ ಬೇಡಿದೊಡೆ ಈವರೆ? ಇತ್ತೊಡುಣಲ್ಕೆಸಾಲ್ವನೇ ? ||
ತನುವಿನೊಳಿರ್ದ ತನ್ನನುರೆ ಕಾಣ್ಬೊಡೆ ಭವ್ಯತೆಯಿಲ್ಲದಿರ್ದವಂ |
ಮುನಿಮತವೆಯ್ದಿಯುಂ ಶಿವನೆಯ್ದುವನೇ ಅಪರಾಜಿತೇಶ್ವರಾ || ೧೧೧ ||

"ಮನೆಯಲ್ಲಿ ಹೂತಿಟ್ಟಿರುವ ಸಂಪತ್ತನ್ನೇ ತೆಗೆದು ಭೋಗಿಸುವ ಪುಣ್ಯವಿಲ್ಲದ ನಿರ್ಭಾಗ್ಯ, ಧನಿಕರ ಬಳಿ ಹೋಗಿ ಬೇಡಿದರೆ ಅವರು ಇತ್ತಾರೆ? ಒಂದು ಪಕ್ಷ ಕೊಟ್ಟರೂ ಅನುಭವಿಸುವ ಯೋಗ ಇವನಿಗಿರಬೇಕಲ್ಲ! ತನ್ನೊಳಗೇ ಇರುವ ಆತ್ಮವನ್ನು ನೋಡುವ ಅರ್ಹತೆಯಿಲ್ಲದ ಅಭವ್ಯರು ಮುನಿಯಿಂದ ಉಪದೇಶವೊಂದಿದ್ದರೂ ಅಥವಾ ತಾವೂ ಯತಿದೀಕ್ಷೆಯಾಂತರೂ ಕೈವಲ್ಯ ಪಡೆಯಲಾರರು!"

೧. ಭ. ವೈ. ೬೮ನೇ ಸಂ.
೨. ಭ. ವೈ. ೬೨ನೇ ಸಂ.
೩. ಭ. ವೈ. ೭೨ನೇ ಸಂ., ಪ. ೩೪.

[1]ಒಳಗಿದ್ದ ಚಿದ್ರೂಪ ನೋಡದೆ ಜಗವೆಲ್ಲ | ಬಳಲುತಿಹುದು ಹೊರಗಾಡಿ || ೧೦೩ ||
ಮನೆಯಲ್ಲಿ ಹೂಳಿದ್ದ ನಿಧಿಯ ಕಾಣದೆ ಹೋಗಿ | ಧನಿಕರ ಯಾಚಿಸುವಂತೆ
ತನುವಿನೊಳಿದ್ದಾತ್ಮರೂಪ ನಿಟ್ಟಿಸದೆ ಮೇ | ದಿನಿಯ ತೊಳಲಿ ನೋಡುತಿಹರು || ೧೦೪ ||
"ಒಡಲೊಳಿದ್ದಾತ್ಮನ ನೋಡಲೊಲ್ಲದೆ ಮೂರು | ಪೊಡವಿಯ ಚಿಂತಿಸುತಿಹರು"[1] || ೧೦೭ ||

ಭರತೇಶವೈಭವದಲ್ಲೂ ರತ್ನಾಕರ ಜನಸಾಮಾನ್ಯರ ಮರುಳುತನಕ್ಕಾಗಿ ಮರುಗಿರುವನು.

ಅಶುಭ ಶುಭಂಗಳೆಂಬೆರಡು ಯೋಗಮಿವವ್ರತ ಸುವ್ರತಂಗಳೊಳ್ |
ವಿಶದಮಿವಿಂತು ಸಂಸ್ಸೃತಿಯ ಮಾಳ್ಪುವು ದುಃಖಸುಖ ಸ್ವರೂಪದೊಳ್ ||
ಅಶುಭವನೊಲ್ಲದಾ ಶುಭದೊಳಿರ್ದದನುಂ ತೊರೆದಾತ್ಮನೊಳ್ಮನೋ |
ವಶನೆನೆ ಶುದ್ಧಯೋಗಮಿದು ಸಿದ್ಧಿಯಲಾ ಅಪರಾಜಿತೇಶ್ವರಾ || ೧೧೨ ||

"ಕಟ್ಟುಪಾಡಿಲ್ಲದೆ ಬಾಳ್ವೆಯನ್ನು ನಡೆಸಿದಾಗ **'ಅಶುಭೋಪಯೋಗ'**ವಾಗಿ ದುಃಖವನ್ನು ಬುತ್ತಿ ಕಟ್ಟಿಕೊಂಡಂತಾಗುವುದು. ಸುವ್ರತಗಳನ್ನಾಚರಿಸಿದಾಗ **'ಶುಭೋಪಯೋಗ'**ವಾಗಿ ಸುಖವನ್ನು ಸೂರೆಗೊಂಡಂತಾಗುವುದು. ದುಃಖವಾಗಲಿ ಸುಖವಾಗಲಿ ಇವೆರಡೂ ಜೀವವನ್ನು ಸಂಸಾರಕ್ಕೆ ಸಿಲ್ಕಿಸುವುವು. ಮೊಟ್ಟಮೊದಲು 'ಅಶುಭೋಪಯೋಗ'ವನ್ನು ತ್ಯಜಿಸಿ 'ಶುಭೋಪಯೋಗ'ಕ್ಕೆ ದಾರಿ ಮಾಡಿಕೊಳ್ಳಬೇಕು. ಅನಂತರ ಇದನ್ನೂ ತ್ಯಜಿಸಿ ಮನಸ್ಸು ಆತ್ಮನಲ್ಲಿ ಒಂದಾಗಿ ಹೋದರೆ **'ಶುದ್ಧಯೋಗ'** (ಶುಭಾಶುಭೋಪಯೋಗರಹಿತ)ವುಂಟಾಗಿ ಕೈವಲ್ಯ ಲಭಿಸುವುದು."

[2]ಕೆಸರ ಲೇಪಿಸಿದರು ಗಂಧವ ತಂದು ಲೇ | ಪಿಸಿದರು ಕನ್ನಡಿ ಕುರುಡು ||
ಅಸಿಯಳೆ ಪಾಪಪುಣ್ಯವು ಲೇಪವಾತ್ಮನ | ಮಸುಳಿಸಿಕೊಂಡಿಹುವಲ್ತೆ || ೭೨ ||
ಮೊದಲಿಷ್ಟು ಪುಣ್ಯ ಲೇಸಹದು ಶುದ್ಧಾತ್ಮಯೋ | ಗದೊಳು ನಿಂದವಗೆ ಲೇಸಲ್ಲ ||
ಅದರಿಂದ ಪುಣ್ಯಪಾಪವ ಸರಿಗಾಣೆಂದೆ | ಯಿದು ಜಿನವಾಕ್ಯ ನಂಬಬಲೆ || ೭೭ ||
ಪಾಪಪುಣ್ಯವನಾತ್ಮಯೋಗದಿ ಕಳೆಯೆ ಚಿ | ದ್ರೂಪನೊಪ್ಪಿಹನು ಮುಕ್ತಿಯೊಳು ||
ಆ ಪಂಕಗಂಧವತೊಳೆಯೆ ಕನ್ನಡಿ ಪ್ರಭೆ | ವ್ಯಾಪಿಸಿ ತೋರುವಂದದೊಳು[2] || ೭೩ ||

ಪಾಪಪುಣ್ಯದ ವಿವೇಚನೆಯನ್ನು ರತ್ನಾಕರ ಮತ್ತೆ ಮತ್ತೆ ಮಾಡುತ್ತಿರುವನು. ವ್ಯವಹಾರ ಹಾಗೂ ನಿಶ್ಚಯದೃಷ್ಟಿಗಳಿಂದ ಇವನ್ನು ಒರೆಹಚ್ಚಿ ಯಾವುದರ ಬೆಲೆ ಎಷ್ಟೆಂದು ಖಚಿತಪಡಿಸಿರುವನು. ಜೈನ ಪರಂಪರೆಯಲ್ಲಿ ರೂಢಮೂಲವಾಗಿ ಬಂದಿರುವ ವಿಚಾರವನ್ನು ಜನಸಾಮಾನ್ಯರಿಗೆ ವಿವರಿಸುವಾಗ ಸಂದರ್ಭಕ್ಕೆ ತಕ್ಕಂತೆ ಯುಕ್ತಿಗೊಪ್ಪುವಂತೆ ಬಣ್ಣಿಸಿರುವನು.

ವ್ರತತತಿಯಿಲ್ಲದಂದು ಪವಣಿಲ್ಲ ಮನಕ್ಕದರಿಂದೆ ಪಾಪಮಾ ||
ವ್ರತತತಿಯುಳ್ಳೊಡಂತದನೆ ಪಾಲಿಪೆನವ್ರತಮಂ ಕೆಡಿಪ್ಪೆನೆಂ ||
ಬತಿಮತಿಯುಳ್ಳನಂ ಸುಕೃತಮಕ್ಕುಮದುಂ ಭವಬೀಜಮೀ ಮನಃ |
ಕ್ಷತಿ ಕಿಡೆ ತನ್ನೊಳಿರ್ದೊಡೆ ಸಿದ್ಧಿಯಲಾ ಅಪರಾಜಿತೇಶ್ವರಾ || ೧೧೩ ||

೧. ಭ. ವೈ. ೧ನೇ ಸಂ.
೨. ಭ. ವೈ. ೧೭ನೇ ಸಂ.

"ವ್ರತಗಳನ್ನಾಚರಿಸದೆ ಹೋದರೆ ಮನಸ್ಸಿನ ದಾರ್ಢ್ಯ ಕುಂಟಿತವಾಗುವುದು. ಚಿತ್ತ ಚಾಂಚಲ್ಯದಿಂದ ಪಾಪವನ್ನು ರಾಶಿ ಮಾಡಿಕೊಳ್ಳುವೆವು. ಅದರಿಂದ ಸ್ವೇಚ್ಛಾಚಾರವನ್ನು ತಡೆಗಟ್ಟುವುದಕ್ಕಾಗಿ ವ್ರತಗಳನ್ನಾಚರಿಸುವೆನೆಂಬ ಭಾವನೆಯಿರುವ ತನಕ 'ಪುಣ್ಯಬಂಧ'ವಾಗುತ್ತಾ ಹೋಗುವುದು. ಇದೂ ಸಂಸಾರವೃಕ್ಷಕ್ಕೆ ಪೋಷಣೆಯಾದಂತಾಗುವುದು. ಈ ಮನೋವಿಕಲ್ಪ ನಾಶವಾಗಿ ಚಿತ್ತ ಸಂಪೂರ್ಣವಾಗಿ ಆತ್ಮನಲ್ಲೇ ಲೀನವಾದರೆ ಮುಕ್ತಿಯುಂಟಾಗುವುದು."

ಅಧ್ಯಯನಂಗಳಿಂ ವ್ರತಚಿಂತನೆಯಿಂ ಸ್ತುತಿಯಿಂ ಪ್ರಬೋಧೆಯಿಂ |
ಸಾಧ್ಯಮನಸ್ಕನಾಗಿ ನಿಜರೂಪನಪ್ಪಿದವಂಗೆ ಬೇರೆ ಮ ||
ತ್ತಧ್ಯಯನಾದಿಗಳ್ಮೆರೆಯವಾದ ವಿಕಲ್ಪಮುಮಿಲ್ಲ ಲೋಕಕಾ |
ರಾಧ್ಯನವಂಗೆ ಪೂಜ್ಯಗುಣರಿಲ್ಲವಲಾ ಅಪರಾಜಿತೇಶ್ವರಾ || ೧೧೪ ||

"ಆಗಮಗಳನ್ನು ಅಧ್ಯಯನ ಮಾಡಿ, ವ್ರತಗಳನ್ನಾಚರಿಸಿ, ಜಿನಸ್ತುತಿ ಮಾಡಿ, ಸಮ್ಯಕ್ತ್ವ ಸಂಪನ್ನನಾಗಿ ಮನೋನಿಗ್ರಹವಾದ ಮೇಲೆ ತನ್ನ ರೂಪನ್ನು ಕಂಡುಕೊಂಡ ನಂತರ ಅಲ್ಲಿಗೆ ಸಾಧನೆ ಮುಗಿದಂತೆ. ಅನಂತರ ಅಧ್ಯಯನಾದಿಗಳ ಆವಶ್ಯಕತೆ ಮುಗಿದಂತೆ. ಆ ಸಾಧಕ ನಿರ್ವಿಕಲ್ಪನಾಗಿ ಲೋಕಕ್ಕಾರಾಧ್ಯನಾಗುವನು. ಅಂಥವನು ಮತ್ತಾರನ್ನೂ ಪೂಜಿಸಬೇಕಾಗಿಲ್ಲ." ಕ್ರಮಬದ್ಧವಾದ ಸಾಧನೆಯನ್ನು ರತ್ನಾಕರ ಇಲ್ಲಿ ನಿರೂಪಿಸಿರುವನು. ಸ್ವಸ್ವರೂಪದ ಅರಿವಾದರೆ ಅರಹಂತನಾದಂತೆಯೆ! ಆತ್ಮೋದ್ಧಾರ ಪೂರ್ಣವಾದಂತಾಗುವುದು.

ಪಗರಣದಾಟಮೆಂದು ಜಗಮಂ ಸಲೆನೋಡುತೆ ದುರ್ವಿಕಲ್ಪಮಂ |
ತೆಗೆದು ಬಿಸಾಡುತಂ ನಿಜಚಿದಾತ್ಮನನೀಕ್ಷಿಸುತಂ ವಿಶೋಧಿಯೊಳ್ ||
ಮಿಗೆಮುಳುಗಾಡುತಂ ಶಮರಸಾಮೃತಮಂ ಸವಿಯುತ್ತೆ ತನ್ನತಾ |
ನಗುತೆ ವಿಳಾಸದಿಂ ತಪಿಸುವಂಗೆಣೆಯಾರಪರಾಜಿತೇಶ್ವರಾ || ೧೧೫ ||

"ಲೋಕವ್ಯಾಪಾರವನ್ನು ಒಂದು ನಾಟಕವೆಂದು ಭಾವಿಸಿ ಮನೋವಿಕಾರವನ್ನು ನಿಗ್ರಹಿಸಿ ತನ್ನ ಚಿದಾತ್ಮನನ್ನು ಸದಾ ನೋಡಿಕೊಂಡು ಕರ್ಮಮಲರಹಿತವಾದ ಆನಂದಾವಸ್ಥೆಯಲ್ಲಿ ಮುಳುಗಾಡಿ ಶಾಂತಿರಸಾಮೃತವನ್ನು ಸವಿಯುತ್ತ ತನಗೆ ತಾನೆ ನಗಾಡಿಕೊಳ್ಳುತ್ತವಿನೋದದಿಂದ ವ್ಯವಹರಿಸುವ ಮಹರ್ಷಿಗೆ ಎಣೆಯುಂಟೆ?" ಅನುಭಾವಿಯ ಅಂತರಂಗವನ್ನು ರತ್ನಾಕರ ನಮ್ಮ ಮುಂದಿಟ್ಟಿರುವನು; ಭೇದವಿಜ್ಞಾನಿಯ ಬಣ್ಣವನ್ನು ಬಯಲುಮಾಡಿರುವನು! ಅನುಭಾವಿ, ಲೋಕವನ್ನು ಬಿಟ್ಟೋಡಬೇಕಾಗಿಲ್ಲ. ನಾಟಕವನ್ನು ನೋಡುವಂತೆ ಸಾಕ್ಷೀಭೂತನಾಗಿ ಬಾಳಿಕೊಂಡು ಅನಾಸಕ್ತನಾಗಿ ಅಡ್ಡಾಡಿಕೊಂಡು ಭೇದವಿಜ್ಞಾನಿಯಾಗಿ ಆಮೋದಗೊಂಡು ವ್ಯವಹರಿಸುತ್ತಿರಬಹುದು!

[೧]ಭಂಡಾರ ಬೊಕ್ಕಸ ಮನೆಗಳ ನೋಳ್ಪನಾ | ಭಂಡಾರಿಗಳು ನೋಡುವಂತೆ ||
ಕಂಡವರೆಲ್ಲರೀ ನೃಪನದೆಂಬರು ಬೇರು | ಗಂಡೆನಿಸುವನು ತಾನೊಳಗೆ || ೩೩ ||
ಷಡುಖಂಡಪದವ ನಿಟ್ಟಿಸುವನು ಪುಣ್ಯಸಂ | ಗಡಿಸೆ ಜಾತ್ರೆಯ ನೋಡುವಂತೆ ||
ಅಡುಗೂಲಿ ಮನೆಯಲ್ಲಿ ಮಿಂದುಂಬನಂತೆ ಬೇ | ರ್ಪಡಿಸಿ ನೋಡಿ ಭೋಗಿಸುತಿರ್ದಾ[೧] || ೩೪ ||

೧. ಭ. ವೈ. ೭೫ನೇ ಸಂ.

[೧]ಧರಿಸಿದ ದೇಹ ಬೇರೆಂಬನವನಿನ್ನು | ಪರವಸ್ತುರತಿಗೆ ಸಿಕ್ಕುವನೆ ||
ಪರಮಾತ್ಮರಸಿಕನ ಬಗೆಯನಾರ್ಬಲ್ಲರಂ | ತಿರುತಿರ್ದನಾ ಭಾವಿತಾತ್ಮಾ || ೩೫ ||
ಪುಣ್ಯಫಲವ ನುಂಡು ತೀರಿಸುತಾತ್ಮಲಾ | ವಣ್ಯವನೊಳಗೆ ನಿಟ್ಟಿಸುತ ||
ಗಣ್ಯವೆ ಮುಕ್ತಿಯೆಂದೆಂಬಭಿಪ್ರಾಯವ | ರೇಣ್ಯದೊಳಿರ್ದನಾ ಕುಶಲಾ[೧] || ೩೬ ||

ಅಪರಾಜಿತಶತಕದಲ್ಲಿ ಸರ್ವಸಂಗ ಪರಿತ್ಯಾಗಿಯಾದ ದಿಗಂಬರಯತಿಯ ಭೇದವಿಜ್ಞಾನವನ್ನು ಬಣ್ಣಿಸಿದರೆ ಭರತೇಶವೈಭವದಲ್ಲಾದರೋ ಸಾಭರಣಾಂಕಿತ ಪರಮಾತ್ಮರಸಿಕನ ವಿಲಕ್ಷಣವಾದ ಭೇದವಿಜ್ಞಾನವನ್ನು, ಅನ್ಯಾದೃಶವಾದ ಅನುಭಾವವನ್ನು ರತ್ನಾಕರ ಚಿತ್ರಿಸಿರುವನು!

ಮೂರು ಶರೀರದೊಳ್ತಡೆಯದಂತರದಾತ್ಮನೊಳೈಕ್ಯಮಾಗಿ ಬಂ|
ದೇರುವ ದುಷ್ಪರೀಷಹವದಂಗಕೆನತ್ತುಪಶಾಂತನಪ್ಪುದುಂ ||
ಜಾರುಗುಮೊಯ್ಯನೊಯ್ಯನೆ ಚಿದಾವರಣಾದಿಗಳಾತ್ಮಸಿದ್ಧಿ ಮೆ |
ಯ್ದೋರುಗುಮೊಯ್ಯನೊಯ್ಯನಿದೆ ಯುಕ್ತಿಯಲಾ ಅಪರಾಜಿತೇಶ್ವರಾ || ೧೧೬ ||

"ಮನಸ್ಸನ್ನು ಸಾಧಕ 'ದೇಹತ್ರಯ'ದ ವ್ಯವಹಾರದಿಂದ ಪಾರುಗಾಣಿಸಿ ಅಂತರಾತ್ಮನಲ್ಲಿ ಐಕ್ಯಗೊಳಿಸಬೇಕು; ಬಂದೊದಗುವ ಪರೀಷಹಗಳೆಲ್ಲ ದೇಹವನ್ನು ತಿಂದಾವೆ ಹೊರತು ನನ್ನನ್ನೇನೂ ಮಾಡುವು ಎಂದು ಭಾವಿಸಿಕೊಳ್ಳಬೇಕು; ಆಗ 'ಜ್ಞಾನಾವರಣಾದಿ ಕರ್ಮಗಳು' ಮೆಲ್ಲನೆ ಕಾಲ್ತೆಗೆಯುವುವು! ಕರ್ಮಗಳು ಕರಗಿದಂತೆ ಆತ್ಮಸಿದ್ಧಿ ತುಸತುಸುವಾಗಿ ಕಣ್ದೆರೆಯುವುದು (ಕಾಣಿಸಿಕೊಳ್ಳುವುದು.)

[೨]ಎಷ್ಟೆಷ್ಟು ನೋಡಿದರಷ್ಟಷ್ಟು ಕರ್ಮಾಳಿ | ನಷ್ಟವಪ್ಪುದು ಕ್ಷಣಕ್ಷಣಕೆ ||
ಅಷ್ಟಷ್ಟಕಾಗಾಗ ಪರಮಾತ್ಮ ಗುಣಗಳು | ತ್ಪುಷ್ಟವಪ್ಪುವು ಧ್ಯಾನಸುಖಿಗೆ || ೪೭ ||
ಕಿರಿಕಿರಿದಾಗಿ ಖಂಡಿಸಿ ಕರ್ಮ ಕೆಡೆ ಮನೆ | ತೆರಪಹುದಾತ್ಮಗಾತ್ಮನೊಳು ||
ಕಿರುಚೇಣದಿಂದೊಬ್ಬ ಮೆಲ್ಲಮೆಲ್ಲನೆ ಕಲ್ಲ | ತರಿದಲ್ಲಿ ಮನೆಮಾಡುವಂತೆ[೨] || ೪೮ ||

ಕರ್ಮದ ಕಾರ್ಮೋಡ ಪಕ್ಕನೆ ಬಂದು ಪಕ್ಕನೆ ಹೋಗುವಂಥದಲ್ಲ. ಜನ್ಮಜನ್ಮಾಂತರದಿಂದ ಅಷ್ಟೇಕೆ ಅನಂತಕಾಲದಿಂದ ಅನಂತರೀತಿಯಲ್ಲಿ ಈ ಕರ್ಮ ನಮ್ಮಾತ್ಮವನ್ನು ಬಂದು ಕವಿದಿದೆ. ಇದನ್ನು ಉಪಾಯವಾಗಿ ತೊಲಗಿಸಬೇಕಾದರೂ ಸಾಕಷ್ಟು ಕಾಲ ಹಾಗೂ ಶ್ರಮ ಅತ್ಯಾವಶ್ಯಕ. ಎಷ್ಟೆಷ್ಟು ಕರ್ಮದ ಒತ್ತಡ ತಗ್ಗುವುದೋ ಅಷ್ಟಷ್ಟು ನಮ್ಮ ಪರಮಾತ್ಮತ್ವ ವ್ಯಕ್ತವಾಗುತ್ತಾ ಹೋಗುವುದು. ನಾವು ನಿಜವಾದ ಸಾಧಕರಾದಂದು ಆತ್ಮಸೂರ್ಯನ ಅರುಣೋದಯವಾದಂತೆ! ಒಂದೊಂದಾಗಿ ಮುಂಬೆಳಗಿನ ಚಿಹ್ನೆಗಳು ಕಾಣಿಸಿಕೊಳ್ಳುವುವು.

ನೋಡುವ ನೋಡಿ ಲಾಲಿಸುವ ಲಾಲಿಸುತಾತ್ಮ ಸುಖಿಕೆ ವಿಸ್ಮಯಂ |
ಮಾಡುವ ಮಾಡಿ ಮೆಚ್ಚುವ ನಿಜಾತ್ಮನೊಳಾಗಲೆ ಮೆಚ್ಚುತೈಕ್ಯದಿಂ ||

೧. ಭ. ವೈ. ೭೫ನೇ ಸಂ.
೨. ಭ. ವೈ. ೧೪ನೇ ಸಂ.

ಕೂಡುವ ಕೂಡಿ ಮೆಯ್ಮರೆವ ತನ್ಮಯನಾಗುತೆ ತಾನೆ ತನ್ನೊಳೋ |
ಲಾಡುವ ಜೋಗಿಯೇ ಅಮೃತಭಾಗಿಯಲಾ ಅಪರಾಜಿತೇಶ್ವರಾ || ೧೧೭ ||

"ಮಹರ್ಷಿ ಸದಾ ತನ್ನ ಸ್ವಸ್ವರೂಪವನ್ನು ನೋಡುವನು! ನೋಡುತ್ತಾ ಆತ್ಮಸ್ವರೂಪವನ್ನು ಲಾಲಿಸುವನು! ಲಾಲಿಸುತ್ತಾ ಆತ್ಮಸುಖಕ್ಕೆ ಅಚ್ಚರಿಗೊಳ್ಳುವನು! ತನ್ನ ರೂಪಕ್ಕೆ ತಾನೇ ವಿಸ್ಮಯಗೊಂಡು ಮೆಚ್ಚಿ ಅದರೊಡನೊಂದಾಗಿ ರಮಿಸುವನು! ರಮಿಸುತ್ತಾ ಮೈಮರೆತು ಬಿಡುವನು! ಸ್ವಸ್ವರೂಪದಲ್ಲಿ ತನ್ಮಯನಾಗಿ ಓಲಾಡಿಬಿಡುವನು! ಇಂಥ ಜೋಗಿ ಖಂಡಿತ ವಾಗೂ ಅಮೃತಭಾಗಿ!" ಅನುಭಾವಿಯಾದ ರತ್ನಾಕರ ಇಲ್ಲಿ ಬ್ರಹ್ಮಾದ್ವೈತ ನಾಟ್ಯವನ್ನಾಡಿ ರುವನು. ಆತ್ಮಾನಂದವೆಂಬ ಶಿಶುವನ್ನು ಓಂಕಾರದ ತೊಟ್ಟಿಲಲ್ಲಿಟ್ಟು ರತ್ನಾಕರಯೋಗಿ ತೂಗುತ್ತಿರುವಂತೆ ಇದೆ ಇಲ್ಲಿಯ ಛಂದಸ್ಸಿನ ವಿಲಾಸ! ಜೊತೆಗೆ ಇದರ ಓಟ ಸಾಂಗತ್ಯದ ನಡಗೆಯನ್ನು ಅನುಕರಿಸುವಂತಿದೆ.

ಇಂಗಡಲೊಳ್ಮುಂಗಿದವೊಲಿರ್ಪುದು ಮೇಘವಡಂಗಿದಚ್ಚವೆ |
ಳ್ದಿಂಗಳ ಕಾಂತಿಯೊಳ್ಬೆರಿಸಿದಂತೆವೊಲಿರ್ಪುದು ಸಿದ್ಧರಾಶಿಯೊಳ್ ||
ಸಂಗತವಾದವೊಲ್ಮರೆವುದಾತ್ಮನೊಳಾತ್ಮನನಾತ್ಮನಿಂದೆ ಕಂ |
ಡಂಗರಿಪಂದದಿಂ ನುಡಿಯಲೆನ್ನಳವೇ ಅಪರಾಜಿತೇಶ್ವರಾ || ೧೧೮ ||

"ಆತ್ಮನಲ್ಲಿ ಆತ್ಮವನ್ನು ಆತ್ಮನಿಂದ ನೋಡಿದ್ದೇ ಆದರೆ ಕ್ಷೀರಸಾಗರದಲ್ಲಿ ಮುಳುಗಿದಂ ತಾಗುವುದು! ಮೋಡವಿಲ್ಲದೆ ನಿರ್ಮಲವಾದ ಅಚ್ಚಬೆಳದಿಂಗಳ ಬೆಳ್ಳಂಬೆಳಕಿನಲ್ಲಿ ಬೆರತು ಹೋದಂತಾಗುವುದು! ಸಿದ್ಧರ ಗುಂಪಿನಲ್ಲಿ ಸೇರಿಹೋದಂತಾಗುವುದು! ಇಂಥ ಬ್ರಹ್ಮಾನಂದ ವನ್ನು ಬಾಯಿಮಾತಿನಲ್ಲಿ ಹೇಳಲಾದೀತೆ?"—ರತ್ನಾಕರ ತನ್ನ ಅನುಭಾವವನ್ನೇ ಹೇಳಿಕೊಂಡಂ ತಿದೆ. ಉಂಡವನು ತೇಗಿದಂತೆ ಆತ್ಮವನ್ನು ಕಂಡವನು ಆಡಿದಂತಿದೆಯಲ್ಲವೆ? ಇಂಥ ಅನುಭಾವ ಭರತೇಶವೈಭವದಲ್ಲಿ ಹೆದ್ದೊರೆಯಾಗಿ ಪ್ರವಹಿಸಿದೆ!

[೧]ತನ್ನಲ್ಲಿ ತನಗಾಗಿ ತನ್ನನಿಲಿಸಿ ತಾನು | ತನ್ನಿಂದ ತನ್ನನೆ ನೋಡಿ ||
ತನ್ನೊಳುಮ್ಮಿದ ನಿಜಸುಖದ ಸುಖಿಸುತ್ತ ನಿ | ಷ್ಪನ್ನನಿದ್ದನು ವಿಭವದೊಳು || ೭೫ ||
ತನುವ ಸಂಗ್ರಂಥದೊಳಿರಿಸಿ ನಿರ್ವಾಣವ | ವಿನುತಾತ್ಮನೊಡಗೂಡಿ ನೋಡಿ ||
ಜನಿಸಿದ ಸುಖದಿಂದ ಪರಿಪೂರ್ಣನಾಗಿ ಬಿ | ಮ್ಮನೆ ಬಿಗುಹೇರಿರ್ದನಾಗ || ೭೧ ||
ಸುತ್ತಲು ಪ್ರಭೆಯಾಗಿ ಸುತ್ತಲು ಸುಖವಾಗಿ | ಸುತ್ತಲು ಸುಜ್ಞಾನವಾಗಿ ||
ಚಿತ್ತದೊಳಾತ್ಮ ತೋರುವನೊಂದು ಜ್ಯೋತಿಯ | ಪುತ್ತಳಿಯಂತೆ ಮೈತುಂಬಿ || ೩೪ ||
ಬಯಲನೋಳ್ಪಂತೆ ಭಾವದಿ ನೋಡುವನು ಕೂಡೆ | ಬಯಲನಪ್ಪುವವೊಲಪ್ಪುವನು ||
ಜಯಲೊಳು ಚಿತ್ರವ ಬರೆವಂತೆ ಬರೆದು ಚಿ | ನ್ಮಯಗವಯವ ಶೋಬೆಮಾಳ್ಪಾ || ೩೫ ||
ಬಯಲೊಳು ಮುಳುಗುವಂತೊಳಗೆ ಮುಳುಗುವನು | ಬಯಲೊಳು ನಿಲುವಂತೆ ನಿಲುವಾ ||
ಬಯಲಪಾಲ್ದೊರೆಯ ಪೀರ್ವಂತೆ ಪೀರ್ದೊಂದರ | ಬಯಕೆಯಿಲ್ಲದೆ ತಣಿದಿಹನು[೧] || ೩೬ ||
[೨]ಪಳುಕಿನ ಕೊಡದಲ್ಲಿ ತುಂಬಿದ ಪಾಲ ನಿ | ರ್ಮಲತೆಯ ನಗುತ ದೇಹದೊಳು ||
ಜಳಜಳಿಸುವ ವಿಮಲಾತ್ಮನೊಳಗೆ ಮೂಡಿ | ಮುಳುಗಾಡುತಿರ್ದನಾ ಸ್ವಾಮಿ[೨] || ೧೫ ||

೧. ಈ ಚಿಹ್ನೆಯ ಪದ್ಯಗಳನ್ನು ಭ. ವೈ. ೧೮ನೇ ಸಂ.ಯಿಂದ ಆರಿಸಿದೆ. ೨. ಭ. ವೈ. ೭೪ನೇ ಸಂ.

[೧]ಬೆಳಗನೆ ಮೀವಂತೆ ಬೆಳಗನೆ ಪಾಯ್ವಂತೆ | ಬೆಳಗಿನೋಕುಳಿಯಾಡುವಂತೆ ||
ಬೆಳಗಿನೊಳೋಲಾಡಿ ತೇಕಾಂಡುವಂತೆ ತ | ನ್ನೊಳಗೆ ತಾನಿರ್ದನಾ ಪರಮಾ[೧] || ೨೨ ||

ಹಂಸಕಲೆಯನ್ನು ಕೇಳಿದರೆ ರತ್ನಾಕರನ ಬಾಯಲ್ಲಿ ಕೇಳಬೇಕು. ರತ್ನಾಕರನ ಸೊಬಗನ್ನು ಕಾಣಬೇಕಾದರೆ ಮೊದಲನೆಯದು ಹಂಸಕಲೆ; ಎರಡನೆಯದು ಭೇದ ವಿಜ್ಞಾನ! ಇವೆರಡರಲ್ಲಿ ಯಾವುದು ಮೊದಲು ಯಾವುದು ಕೊನೆ ಎಂದು ನಿರ್ಧರಿಸುವುದೂ ಕಷ್ಟ! ಜೈನಕವಿಗಳಲ್ಲಿ (ಜಿನಸೇನರಿಂದ ಮೊದಲುಗೊಂಡು ಇಂದಿನ ತನಕ) ಯಾರೊಬ್ಬರೂ ಹಂಸೋಪಾಸನೆಯ ಸೊಬಗನ್ನಾಗಲಿ ಭೇದವಿಜ್ಞಾನದ ಬೆಡಗನ್ನಾಗಲಿ ರತ್ನಾಕರನಂತೆ ಕಾವ್ಯಮಯವಾಗಿ ಬಣ್ಣಿಸಿಲ್ಲ!

ಅವನ ಬರ್ದುಂಕೆ ತಾಂ ಬರ್ದುಕು ಜನ್ಮವದೇ ಸಫಲಂ ವಿಶಿಷ್ಟ ಲಾ |
ಭವುಮದೆ ಸರ್ವಸಿದ್ಧಿಗದು ಮೊತ್ತಮೊದಲ್ಸುವಿಚಾರಕೋಟಿಗೆ ||
ಲ್ಲವರೊಳದೊಂದೆ ಕಟ್ಟಕಡೆ ತನ್ನೊಳೆ ತನ್ನನೆ ತಾನೆ ಕಂಡು ಬಾ ||
ಹ್ಯವನುಳಿದಿರ್ದವಂಗೆ ಭವವೆತ್ತಣದಿನ್ನಪರಾಜಿತೇಶ್ವರಾ || ೧೧೯ ||

"ಅನುಭಾವಿಯ ಬದುಕೇ ಬದುಕು! ಅವನ ಜನ್ಮವೊಂದೇ ಸಫಲವಾದುದು! ಬದುಕಿನ ಮೂಲ ಹಾಗೂ ಚೂಲ ಎರಡೂ ಹಂಸಾನುಭವವೆ! ಎಲ್ಲ ಸಿದ್ಧಿಗಳ ಆಸ್ತಿವಾರ ಈ ಹಂಸ ಕಲೋಪಾಸನೆ! ವಿಚಾರಗಳೆಲ್ಲಕ್ಕೂ ಮುಕ್ತಾಯ ಹಾಡುವ ಕಟ್ಟಕಡೆಯ ವಿಚಾರ ಇದು! ತಾನೇ ತನ್ನಲ್ಲಿ ತನ್ನನ್ನು ನೋಡಿಕೊಂಡು ಉಳಿದುದನ್ನೆಲ್ಲ ಮರೆವ ಅನುಭಾವಿಗೆ ಮರುಭವವೆಲ್ಲಿ ಯದು?"

"ವೇದಾಂತದ ಸಪ್ತಭೂಮಿಕೆಗಳಿಗೂ ಯೋಗಶಾಸ್ತ್ರದ '**ಷಟ್‌ಚಕ್ರ**'ಗಳಿಗೂ ಬಹಳವಾಗಿ ಹೊಂದಿಕೆಯಿದೆ. ವೇದಾಂತದ ಮೊದಲು ಮೂರು ಭೂಮಿಕೆಗಳೇ ಯೋಗದ '**ಮೂಲಾಧರ**', '**ಸ್ವಾಧಿಷ್ಠಾನ**', '**ಮಣಿಪುರ**' ಚಕ್ರಗಳು. ಸಾಮಾನ್ಯರ ಮನಸ್ಸು ಈ ಮೂರು ಭೂಮಿಕೆಗಳಲ್ಲಿ ಅಂದರೆ ಗುಹ್ಯ, ಲಿಂಗ, ನಾಭಿ ಇವುಗಳಲ್ಲಿ ನೆಲೆಸಿರುತ್ತದೆ. ಮನಸ್ಸು ಚತುರ್ಥ ಭೂಮಿಕೆಗೆ, ಅಂದರೆ '**ಅನಾಹತಪದ್ಮಚಕ್ರ**'ಕ್ಕೆ ಹತ್ತಿದರೆ ಜೀವಾತ್ಮ ದೀಪಶಿಖೆಯ ಹಾಗೆ ಕಾಣಬರುತ್ತದೆ. ಇದೂ ಅಲ್ಲದೆ ಜ್ಯೋತಿದರ್ಶನವೂ ಆಗುತ್ತದೆ. ಆಗ ಸಾಧಕ ವಿಸ್ಮಿತನಾಗಿ ಹೇಳುತ್ತಾನೆ: 'ಅಹ! ಏನಿದು ಅಹ! ಏನಿದು' 'ಐದನೆ ಭೂಮಿಕೆ, ಮನಸ್ಸು ಹತ್ತಿದಾಗ ಕೇವಲ ಭಗವತ್ಕಥೆ ಕೇಳಲು ಮಾತ್ರ ಇಚ್ಛೆಯಾಗುತ್ತದೆ.' ಇದೇ ಯೋಗದ '**ವಿಶುದ್ಧಚಕ್ರ.**' ಆರನೆ ಭೂಮಿಕೆ ಮತ್ತು '**ಆಜ್ಞಾಚಕ್ರ**' ಎಂಬುವು ಎರಡೂ ಒಂದೇ. ಇಲ್ಲಿಗೆ ಮನಸ್ಸು ಹತ್ತಿದಾಗ ಅದಕ್ಕೆ ಭಗವಂತನ ದರ್ಶನವಾಗುತ್ತದೆ. ಆದರೆ ಇದು ಲಾಟೀನಿನ ಒಳಗಿರುವ ಬೆಳಕನ್ನು ಗಾಜಿನ ಚಿಮ್ಣಿಯ ದೆಸೆಯಿಂದ ಮುಟ್ಟಲಾಗದ ಹಾಗೆ....ಷಟ್ಚಕ್ರಗಳನ್ನು ಭೇದಿಸಿದ ನಂತರ ಸಾಧಕ ಏಳನೆ ಭೂಮಿಯನ್ನು ಮುಟ್ಟುತ್ತಾನೆ. ಮನಸ್ಸು ಅಲ್ಲಿಗೆ ಬಂದೊಡನೆಯೆ ಅದು ಬ್ರಹ್ಮನಲ್ಲಿ ಲಯ ಹೊಂದಿಬಿಡುತ್ತದೆ. ಜೀವಾತ್ಮ, ಪರಮಾತ್ಮ ಒಂದಾಗಿ ಬಿಡುವರು. ಸಾಧಕ ಸಮಾಧಿಸ್ಥ ನಾಗಿ ಬಿಡುವನು. ದೇಹಬುದ್ಧಿ ಹೊರಟುಹೋಗಿ ಬಿಡುತ್ತದೆ. ಬಾಹ್ಯಜ್ಞಾನ ಶೂನ್ಯವಾಗಿ ಬಿಡುತ್ತದೆ. ನಾನಾತ್ವದ ಜ್ಞಾನ ಹೊರಟು ಹೋಗುತ್ತದೆ. ವಿಚಾರ ನಿಂತುಹೋಗಿಬಿಡುತ್ತದೆ.[೨]"

೧. ಭ. ವೈ. ೭೪ನೇ ಸಂ. ೨. ಶ್ರೀ ರಾ. ಕೃ. ವ. ವೇ., ಪೂ., ಪು. ೩೨೦-೨೧.

ಹಿಂದೂದರ್ಶನದ ರೀತಿ ಶ್ರೀ ರಾಮಕೃಷ್ಣ ಪರಮಹಂಸರು ಧ್ಯಾನಿಯ ನಾನಾ ಹಂತಗಳನ್ನು ಮನಮುಟ್ಟುವಂತೆ ವಿವರಿಸಿರುವರು. ಆಧ್ಯಾತ್ಮಿಕ ಮಹದನುಭವಗಳನ್ನು ಸರಳವಾಗಿ, ಸಹಜವಾಗಿ ಇದರ ಮೇಲೆ ಸುಂದರವಾಗಿ ಶ್ರೀ ರಾಮಕೃಷ್ಣ ಪರಮಹಂಸರು ಬಣ್ಣಿಸಿರುವರು. ಅಂತರಂಗದ ಅನುಭಾವವನ್ನು ಭಕ್ತರ ಹೃದಯಗಮ್ಯವಾಗುವಂತೆ ಬಣ್ಣಿಸುವುದರಲ್ಲಿ ಶ್ರೀ ರಾಮಕೃಷ್ಣ ಪರಮಹಂಸರು ರತ್ನಾಕರನಷ್ಟೇ ಸಿದ್ಧಹಸ್ತರು! ನಾನಾ ಸಂದರ್ಭದಲ್ಲಿ ಇವರಿಬ್ಬರೂ ನುಡಿದಿರುವ ಅನುಭಾವ ವಿಚಾರದಲ್ಲಿ ಐಕ್ಯತೆ ತುಂಬ ಇದೆ. ಇವರಿಬ್ಬರ ಅಂತರಂಗದ ಅವಸ್ಥೆ ಒಂದೇ ಮಟ್ಟದ್ದೋ ಏನೋ?

ತನುವಿನೊಳಿರ್ದ ಸಿದ್ಧಸದೃಶಾತ್ಮನನೀಕ್ಷಿಸುತಂ ವಿಶೋಧಿ ಸಂ |
ಜನಿತದೊಳೇನನಾಡಿದನದೆಲ್ಲವುಮಾಗಮಮೆಲ್ಲರಿಚ್ಚೆ ಹ ||
ಚ್ಚಿನ ಕಳೆ ಕರ್ಮನಿರ್ಜರೆ ಜಗತ್ರಯವಲ್ಲಭನಪ್ಪ ಕಜ್ಜವಿ |
ನ್ನಿನಿತಿನಿತೆಂದದರ್ಕೆ ಮಿತಿಮಾಡುವರಾರಪರಾಜಿತೇಶ್ವರಾ || ೧೨೦ ||

"ತನ್ನ ದೇಹದಲ್ಲೇ ಇರುವ ಸಿದ್ಧಸದೃಶನಾದ ಆತ್ಮನನ್ನು ದರ್ಶಿಸಿದ ಮೇಲೆ ಅಂತರಂಗ ಪರಮ ಪರಿಶುದ್ಧವಾಗುವುದು. ಅಂಥವರ ಬಾಯಿಂದ ಹೊರಬಂದುದೆಲ್ಲ ಆಗಮವಾಗಿ ಬಿಡುವುದು. ಈ ಆತ್ಮದರ್ಶನ ಯಾರಿಗೆ ಬೇಡ? ಇದರಿಂದ ಪರಂಜ್ಯೋತಿ ರೂಪ ಲಭಿಸುವುದು! ಕರ್ಮವಿಧ್ವಂಸನ ಕಾರ್ಯವಿದು! ಈ ಕಾಯಕದಿಂದ ತ್ರಿಲೋಕನಾಥನೆನಿಸಬಹುದು! ಇಂಥ ಮಹತ್ಕಾರ್ಯಕ್ಕೆ ಇತಿಮಿತಿ ಹೇಳಲಾದೀತೆ?

ರವಿ ನಡೆದತ್ತಲೆಲ್ಲ ಬೆಳಗಲ್ಲದೆ ಕತ್ತಲೆಯುಂಟೆ ಯಾತ್ಮತ !
ತ್ವವೆ ಮನದಲ್ಲಿ ನಟ್ಟು ನುಡಿವಾತನ ಮಾತುಗಳೆಲ್ಲ ಮೋಕ್ಷಮಾ ||
ರ್ಗವೆ ಯವನೆಲ್ಲಿ ನಿಂದನದು ತೀರ್ಥವವಂ ನಡೆದತ್ತ ಸರ್ವರು |
ತ್ಸವಮಿದು ನಿನ್ನಮಾರ್ಗದರಹಸ್ಯವಲಾ ಅಪರಾಜಿತೇಶ್ವರಾ || ೧೨೧ ||

"ಸೂರ್ಯ ಎತ್ತ ಸಾಗಿದರತ್ತ ಬೆಳಕೂ ಸಾಗುವುದು, ಜೊತೆಗೆ ಕತ್ತಲು ಕರಗಿ ಹೋಗುವುದು! ಅಂತೆ ಆತ್ಮವಿಜ್ಞಾನಿಯಾಗಿ ನುಡಿವಾತನ ಮಾತೆಲ್ಲ ಮೋಕ್ಷಮಾರ್ಗವೆ! ಅಂಥವನು ತಂಗಿದ ತಾಣ ಪಾವನ ತೀರ್ಥಕ್ಷೇತ್ರವಾಗುವುದು! ಆತ ಅಡಿಯಿಟ್ಟೆಡೆ ಪರಮೋತ್ಸವದ ಬೀಡಾಗುವುದು! ಅಪರಾಜಿತ, ಇದೆಲ್ಲ ನಿನ್ನ ಮಾರ್ಗದ ರಹಸ್ಯವಲ್ಲವೇನಯ್ಯ?"

ಶರಣನಿದ್ರೆಗೆಯ್ದರೆ ಜಪ, ಕಾಣಿರೊ,
ಶರಣನೆದ್ದು ಕುಳಿತರೆ ಶಿವರಾತ್ರಿ, ಕಾಣಿರೋ;
ಶರಣ ನಡೆದುದೇ ಪಾವನ ಕಾಣಿರೊ,
ಶರಣ ನುಡಿದುದೆ ಶಿವತತ್ತ್ವ, ಕಾಣಿರೋ !
ಕೂಡಲಸಂಗನ ಶರಣನ ಕಾಯವೇ ಕೈಲಾಸ, ಕಾಣಿರೋ![1]

ಭಕ್ತಿಭಂಡಾರಿ ಬಸವಣ್ಣನವರ ಭಾಂಡಾಗಾರದಲ್ಲಿರುವ ಅನುಭಾವ ಸಂಪದ ಎಂಥದೋ ರತ್ನಾಕರನ ಹಂಸಾನುಭವ ಸಂಪದವೂ ಅಂಥದೆ. ಎರಡರ ತೂಕ, ಎರಡರ ಬಣ್ಣ ಒಂದೇ!

೧. ಬ. ವ. ೮೭೨.

ರತ್ನಾಕರನನ್ನೂ ಅಣ್ಣಗಳೆಂದು ಕರೆದುದು ಸಾರ್ಥಕವಾಯಿತು!

ಕ್ಷತ್ರಿಯ ವಂಶಜನೆಂದು ಕರ್ಣಾಟ ಸು | ಕ್ಷೇತ್ರ ನೆಂದಣ್ಣಗಳೆಂದು ||
ಧಾತ್ರಿ ನುಡಿವುದವು ನನ್ನಸೊಮ್ಮಲ್ಲೆನ್ನ | ಗಾತ್ರದ ಸೊಮ್ಮೆಂಬೆ ನಾನು[1] ||

ಕಂದಾಚಾರವನ್ನು ಬಸವಣ್ಣನವರು ಎದುರಿಸಿದಂತೆ ಈ ರತ್ನಾಕರಣ್ಣಗಳೂ ಎದುರಿಸಿರುವರು. ಜಾತಿಮದವನ್ನು ಬಸವಣ್ಣನವರು ಖಂಡಿಸಿದಂತೆ ರತ್ನಾಕರಣ್ಣಗಳೂ ಖಂಡಿಸಿರುವರು. ಅನಾಚಾರಿಯಾದ ಜಂಗಮನನ್ನು 'ಸಗಣಿಯ ಬೆನಕಂಗೆ ಸಂಪಗೆಯರಳಲ್ಲಿ ಪೂಜಿಸಿದರೆ ರಂಜನೆಯಲ್ಲದೆ ಅದರ ಗಂಜಳ ಬಿಡದಣ್ಣ'[2] ಎಂದು ಬಸವಣ್ಣನವರು ವಿಡಂಬನೆ ಮಾಡಿದರೆ ಇತ್ತ 'ಮೈಯ ಬತ್ತಲೆಮಾಡಿ ಮನವ ಕತ್ತಲೆಮಾಡಿ ಹುಯ್ಯಲಿಡುತ ಸುತ್ತುತಿಹರು!'[3] ಎಂದು ರತ್ನಾಕರಣ್ಣಗಳು ದ್ರವ್ಯಲಿಂಗಿ ದಿಗಂಬರಮುನಿಗಳನ್ನು ಪರಿಹಾಸ್ಯ ಮಾಡಿರುವರು. ನಾನಾದೃಷ್ಟಿಗಳಿಂದ ನಾವು ನೋಡಿದಾಗ ರತ್ನಾಕರನೂ ಬಸವಣ್ಣನವರಂತೆ ವಿಶ್ವಕಲ್ಯಾಣಕ್ಕಾಗಿ ಕಾಯಕವೆಸಗಿದ ಕಾರಣಪುರುಷ!

ಆರಿದನೊಲ್ದು ಕೈವಿಡಿದಾರಾರಿದನೀಕ್ಷಿಸಿದರ್ ಯಥಾರ್ಥದಿಂ |
ದಾರಿದರಲ್ಲಿಯೇ ಲಯವನೆಯ್ದಿ ನಿಜಂಬಡೆದರ್ ಜಗಕ್ಕಿದಂ ||
ಆರನುಶಾಸನಂಗೊಳಿಸಿದರ್ ಜಿನನೀನೆ ಜಗತ್ರಯೈಕವಿ |
ಸ್ತಾರಿತವಸ್ತುವಂ ಬೆಳಗಿದ್ದೆ ಕೃಪೆಯಿಂದಪರಾಜಿತೇಶ್ವರಾ || ೧೨೨ ||

"ದೇವ, ಆತ್ಮಸ್ವರೂಪವನ್ನು ಒಲವಿಂದ ಕೈವಿಡಿದವರಾರು? ಇದು ಹೇಗಿದೆಯೋ ಹಾಗೆ ಕಂಡುಕೊಂಡವರಾರು? ಇದರಲ್ಲೇ ಕರಗಿಹೋಗಿ ಕೈವಲ್ಯವನ್ನು ಪಡೆದವರಾರು? ಲೋಕಕ್ಕೆ ಈ ಆತ್ಮತತ್ತ್ವವನ್ನು ಬೋಧಿಸಿದವರಾರು? ಜಿನೇಂದ್ರ, ತ್ರಿಭುವನಸಾರವಾರ ಆಧ್ಯಾತ್ಮವನ್ನು ಅನುಕಂಪೆಯಿಂದ ನೀನೇ ಲೋಕಕ್ಕೆ ಅನುಗ್ರಹಿಸಿದೆಯಲ್ಲ!"

ರತ್ನಾಕರನ ಪ್ರಾರ್ಥನೆ

ಚೆಲುವರ ಚೆಲ್ವ ಚೆನ್ನಿಗರಚೆನ್ನ ಸುವೀರರ ವೀರ ಸತ್ಕಲಾ |
ಬಲರ ಬಲಾಢ್ಯ ಬಲ್ಲಿದರ ಬಲ್ಲಹ ದೇವರ ದೇವ ನೀತಿ ನಿ ||
ರ್ಮಲರ ನಿಧಾನ ನಿಚ್ಚ ಮದುವಕ್ಕಳ ಮಾಣಿಕಕಾಂತಿ ಶಾಂತಿ ಶೀ |
ತಲರ ಶಿರೋಮಣೀ ನಿನಗೆ ಪಾಸಟಿಯಾರಪರಾಜಿತೇಶ್ವರಾ || ೧೨೩ ||

"ಅಪರಾಜಿತ, ನೀನು ಚೆಲುವರಲ್ಲಿ ಚೆಲುವನಯ್ಯ! ಚೆನ್ನಿಗರಲ್ಲಿ ಚೆನ್ನಿಗ! ವೀರರಲ್ಲಿ ಮಹಾವೀರ! ಕಲಾವಂತರಲ್ಲಿ ಕುಶಲ! ಜ್ಞಾನಿಗಳಲ್ಲಿ ನೀನು ಕೇವಲಜ್ಞಾನಿ! ನೀತಿವಂತರ ಹಾಗೂ ನಿರ್ಮಲಾತ್ಮರ ನೆಲೆ ನೀನು! ಭವ್ಯಾತ್ಮರ ಪಾಲಿಗೆ ನೀನು ಮಾಣಿಕ್ಯದ ಕಾಂತಿಯಾಗಿರುವೆ! ಶಾಂತ ಮನೋಭಾವದ ಕ್ಷಮಾಶೀಲರ ಶಿರೋಮಣಿ ನೀನು! ನಿನಗೆ ಸಾಟಿಯುಂಟೆ

೧. ಭ. ವೈ. ೮ನೇ ಸಂ., ಪ. ೧೦೮.
೨. ಬ. ವ. ೯೩.
೩. ಭ. ವೈ. ೮ನೇ ಸಂ., ೧೦೮.

ದೇವ?"—ಈ ಪದ್ಯವನ್ನೋದಿದಾಗ ಭರತೇಶವೈಭಾವಾಂತರ್ಗತ ನಿರಂಜನಸ್ತುತಿಯ ನೆನಪಾಗದಿರದು. ಇಲ್ಲಿಯ ನಡುಗೆಯೂ ಸಾಂಗತ್ಯದ ಓಟದಂತಿದೆ. ಜಿನಶಿಶುವಿನ ಜನ್ಮಾಭಿಷೇಕ ಕಲ್ಯಾಣದಲ್ಲಿ ಮಗುವನ್ನು ತೊಟ್ಟಿಲಲ್ಲಿಟ್ಟು ದೇವಕನ್ಯೆಯರು ಜೋಗುಳ ಹಾಡಿದಂತಿದೆ ಇಲ್ಲಿಯ ಮಂಜುಳನಾದ !

ಚೆನ್ನಿಗರರಸ ಚೆಲ್ವರದೇವ ಸೊಬಗರ | ರನ್ನ ಲಾವಣ್ಯಾಂಗರೊಡೆಯಾ ||
ಬಿನ್ನಣಿಸೆನಗೆ ಸನ್ಮತಿಯನು ಸೌಖ್ಯಸಂ | ಪನ್ನಾ ನಿರಂಜನಸಿದ್ಧಾ[1] ||
ಭಕ್ತರೊಡೆಯ ಭವ್ಯರೊಡೆಯ ನವೀನ ವಿ | ರಕ್ತರೊಡೆಯ ವೀರರೊಡೆಯ ||
ಶಕ್ತರೊಡೆಯ ಶಾಂತರೊಡೆಯ ಸನ್ಮತಿದೋರು | ಮುಕ್ತಾ ನಿರಂಜನಸಿದ್ಧಾ[2] ||
ಬಡವರಾಧಾರ ಬಲ್ಲಿದರ ಮನೋಹರ | ಕಡುಚದುರರ ಮೆಚ್ಚುಕಾರಾ ||
ತಡವೇನು ಮತಿದೋರು ಷರುಷಮುಟ್ಟಿಯು ಪರ್ವ | ಗಡನೆ ನಿರಂಜನಸಿದ್ಧಾ[3] ||
ಈವರ ದೇವ ಕಾವರ ದೇವ ನಿಜಭವ್ಯ | ಜೀವರ ದೇವ ಮನ್ಮತಿಗೆ ||
ಪೀವರದೇವ ಸನ್ಮತಿದೋರು ದೇವರ | ದೇವ ನಿರಂಜನಸಿದ್ಧಾ[4] ||
ಚಾರು ಚಿಂತಾರತ್ನ ಗುಣರತ್ನ ದೇವಶಿ | ರೋರತ್ನ ತ್ರಿಭುವನರತ್ನಾ ||
ತ್ರೈರತ್ನರೂಪ ಸನ್ಮತಿದೋರು ಸಹಜಶ್ರಂ | ಗಾರ ನಿರಂಜನಸಿದ್ಧಾ[5] ||

ಮಾದರಿಗಾಗಿ ನಿರಂಜನಸ್ತುತಿಯ ಕೆಲವು ಪದ್ಯಗಳನ್ನು ಇಲ್ಲಿ ಕೊಟ್ಟಿದೆ. ಇವಕ್ಕೂ 'ಚೆಲುವರ ಚೆಲ್ವ' ಎಂಬ ಶ್ಲೋಕಕ್ಕೂ ಹೋಲಿಸಿ ನೋಡಬಹುದು. ಸಾಂಗತ್ಯವೇ ವೃತ್ತವನ್ನನುಕರಿಸಲು ಹೊರಟಂತಿದೆ. ಅಂಶಗಣ, ಅಕ್ಕರಗಣದ ವೇಷವನ್ನು ತೊಟ್ಟಂತೆ ಭಾಸವಾಗುವುದು! ಕನ್ನಡ ಜೈನಸಾಹಿತ್ಯದಲ್ಲಿ ಭಕ್ತಿ ಸೆಲೆಯೊಡೆದು ಭೋರ್ಗರೆದುದು ರತ್ನಾಕರನ ಕೃತಿಗಳಲ್ಲೇ![6] ಶಿವಶರಣರ ಹಾಗೂ ಹರಿದಾಸರ ಪ್ರಭಾವ, ಒಟ್ಟಿನಲ್ಲಿ ಭಕ್ತಿಯುಗದ ಪ್ರಭಾವ, ರತ್ನಾಕರನ ಮೇಲೆ ಸಾಕಷ್ಟು ಆಗಿದೆ.

ಜಡಮತಿಯ್ಕೆಸೆ ನಾಂ ಪರಮ ನಿನ್ನಗುಣಂಗಳನ್ನೆಲ್ಲಮಂ ಮನಂ |
ಬಿಡಿಯೆ ಸಮರ್ಥನಲ್ಲೆನದರಿಂ ಕಿರಿದಂ ಪಿಡಿದಿರ್ಪೆನೆಂತೆನಲ್ ||
ಕೊಡದೊಳಗೆಷ್ಟು ನಿಲ್ಬುದು ಸಮುದ್ರಜಲಂ ವರಕಾಂಚನಾದ್ರಿ ಕ |
ನ್ನಡಿಯೊಳಗೆಷ್ಟು ತೋರ್ಪುದವಧಾರಿಸು ನೀನಪರಾಜಿತೇಶ್ವರಾ || ೧೨೪ ||

"ಅಪರಾಜಿತ, ಅನಂತಚತುಷ್ಟಯನಾದ ನಿನ್ನ ಸರ್ವಗುಣಗಳನ್ನೂ ಜಡಮತಿಯಾದ ನಾನು ಗ್ರಹಿಸಲು ಸಮರ್ಥನೆ? ಮಹಾಸಾಗರದಿಂದ ಕೊಡದಲ್ಲಿ ಎಷ್ಟು ನೀರು ತುಂಬಿ ತರಬಹುದೋ, ಮೇರುಪರ್ವತವನ್ನು ಕನ್ನಡಿಯಲ್ಲಿ ಎಷ್ಟು ಕಾಣಿಸಬಹುದೋ ಅಷ್ಟೇ ನಾನು ಕೂಡ ನಿನ್ನನ್ನು ಅಲ್ಪಸ್ವಲ್ಪ ಗ್ರಹಿಸಿರುವೆನು"—ರತ್ನಾಕರ ಎಂಥ ಅಪ್ರತಿಮ ಪ್ರತಿಭಾಶಾಲಿಯಾದರೂ

೧. ಭ. ವೈ. ಸಂ. ೫೮.   ೨. ಭ. ವೈ. ಸಂ. ೬೨.   ೩. ಭ. ವೈ. ಸಂ. ೭೫.
೪. ಭ. ವೈ. ಸಂ. ೭೬.   ೫. ಭ. ವೈ. III, ಧ್ಯಾ. ಸಾ. ಸಂ. ೧.
೬. ಉಳಿದ ಕವಿಗಳಲ್ಲಿ 'ಭಕ್ತಿ' ಇಲ್ಲವೇ ಇಲ್ಲವೆಂದು ನನ್ನ ಅಭಿಪ್ರಾಯವಲ್ಲ. ಅಲ್ಲೆಲ್ಲ ಆಗೊಮ್ಮೆ ಈಗೊಮ್ಮೆ ಅದು ಮಿಂಚಿದರೆ ರತ್ನಾಕರನಲ್ಲಿ ನಿರರ್ಗಳ ಪ್ರವಾಹವಾಗಿ ಬಂದಿದೆ.

ಕೇವಲಜ್ಞಾನಿಯಿದಿರು ಒಂದು ಹಸುಗೂಸಿದ್ದಂತೆ! ಆದರೆ ಜನಸಾಮಾನ್ಯರ ಮುಂದೆ ನಿಂತಾಗ ಈ ರತ್ನಾಕರ ನಿಜವಾಗೂ ರತ್ನಾಕರನೆ!

[1]ಅಂತಸ್ತವೊಂದುಂಟು ಸೂಚಿಸುವೆನು ಸುಸಿ | ದ್ಧಾಂತವ ಕಂಡದರೊಳಗಾ ||
ಭ್ರಾಂತಿಯ ಲೋಕಕೆ ಹರುಹದೆ ನಾನೆ ಯೇ | ಕಾಂತದೊಳಾಚರಿಸುವೆನು || ೧೧೧ ||
ಚರಿತೆಯೊಳೊರೆದುವಿವಧಿಕವಲ್ಲಿವು ಒಚ್ಚ | ತರದ ರಹಸ್ಯಗಳಿನ್ನು ||
ಪರಮರಹಸ್ಯವುಂಟಾತ್ಮನ ಮಹಾತ್ಮ್ಯ | ಪರಿಮಿತವಲ್ಲದಂತಿರಲಿ || ೧೧೨ ||

ನಿಗೂಢವಾದ ಎಷ್ಟೋ ರಹಸ್ಯಗಳನ್ನು ರತ್ನಾಕರ ಲೋಕಕ್ಕೆ ಹೇಳದೆ ತನ್ನೊಳಗೇ ಇಟ್ಟುಕೊಂಡಿರುವನಂತೆ. ಹಂಸನ ನಾನಾ ರಹಸ್ಯಗಳನ್ನೂ ಮಹಾತ್ಮ್ಯವನ್ನೂ ಸಾಮಾನ್ಯರು ಅರಿಯಲಾರರೆಂದು ಈ ಅನಭಾವಿ ಉಚಿತಕ್ಕೆ ಎಷ್ಟು ಬೇಕೋ ಅಷ್ಟನ್ನು ಅನುಗ್ರಹಿಸಿರುವನು. ಇಂಥ ಮಹಾಯೋಗಿಯಾಗಿದ್ದೂ ತನ್ನನ್ನು ಜಡಮತಿಯೆಂದು ಕರೆದುಕೊಂಡಿರುವನಲ್ಲ! ರತ್ನಾಕರ ನಿಜವಾಗೂ ವಿನಯ ರತ್ನಾಕರ!

ಬಂದೊಲವಿಂದೆ ನಿನ್ನಿದಿರೊಳೊಪ್ಪದೆ ನಿಂದು ಕರಂಗಳಂ ನೊಸ |
ಲ್ಗೊಂದಿಸಿ ದೇವದೇವ ಕರುಣಾಕರ ಬಿನ್ನಪವಾತ್ಮಸಿದ್ಧಿಯಿ ||
ನ್ನೆಂದೆನಗಪ್ಪುದೆಂದೊಡೆಲೆ ಕಂದ ಕಡಂಗದಿರಿಂದು ನಾಳೆ ಯೆ |
ಮ್ಮಂದವೆ ಯಪ್ಪೆಯೆಂಬ ನುಡಿಗೇಳ್ವೆನದೆಂದಪರಾಜಿತೇಶ್ವರಾ || ೧೨೫ ||

ದೇವ, ಪ್ರೇಮದಿಂದ ಬಂದು ನಾನು ನಿನ್ನಿದಿರಲ್ಲಿ ಒಪ್ಪವಾಗಿ ನಿಂತು ಕೈಮುಗಿದು ದೇವದೇವ, ಕರುಣಾಕರ, ನನಗೆ ಆತ್ಮಸಿದ್ಧಿ ಯಾವಾಗ ಎಂದು ಪ್ರಾರ್ಥಿಸುವೆನು. "ಲೋ ಮಗು, ಆತುರವೇಕಯ್ಯ? ಇಂದೊ ನಾಳೆಯೊ ನಮ್ಮಂತೆ ಆಗುವೆಯಲ್ಲ!" ಎಂಬ ಮಾತನ್ನು ನಿನ್ನ ಬಾಯಿಂದ ಎಂದಿಗೆ ಕೇಳೇನೋ ತಂದೆ?"—ಇಲ್ಲಿ ರತ್ನಾಕರ, ಜಿನೇಂದ್ರನ ಮನಕರಗುವಂತೆ ಪ್ರಾರ್ಥಿಸಿರುವನು. ಇದರಲ್ಲಿ ಸಹಜ ಸೌಂದರ್ಯ ಹಾಗೂ ಮಗುವಿನಂಥ ನಿಷ್ಪೃಹತೆ ತುಂಬಿತುಳುಕಿದೆ!

ಮುನ್ನಮನೇಕರಂ ಭವದಿನೆತ್ತಿ ಯಶೋನಿಧಿಯಾದೆಯಾದೊಡೇಂ |
ನಿನ್ನ ದಯಾಗುಣಕ್ಕದು ವಿಶೇಷಮೆ? ಮೂರ್ಖನನಾರ್ತ ರೌದ್ರನಂ ||
ನನ್ನ ಪವಿತ್ರಮಾಡಿದೊಡೆ ದೊಡ್ಡಪೆಸರ್ಪುನಕೀರ್ತಿ ದೇವ ಭೂ |
ತೆನ್ನದಿರೊಪ್ಪುಗೊಳ್ಳಗದಿರ್ಕೆ ಶರಣಾಗಪರಾಜಿತೇಶ್ವರಾ || ೧೨೬ ||

ಅಪರಾಜಿತ, ಹಿಂದೆಲ್ಲ ಎಷ್ಟೋ ಜನರನ್ನು ಭವಸಾಗರದಿಂದುದ್ಧರಿಸಿ ನೀನೇನೋ ಯಶೋನಿಧಿಯಾಗಿರುವೆ! ಆದರೆ ನಿನ್ನ ದಯಾಗುಣಕ್ಕೆ ಇದುವರಿವಿಗೂ ನೀನು ಮಾಡಿರುವ ಉದ್ಧಾರಕಾರ್ಯ ಅಂಥ ದೊಡ್ಡದೇನಲ್ಲ! ಮೂರ್ಖನೂ 'ಆರ್ತರೌದ್ರಧ್ಯಾನ'ದಲ್ಲಿ ಮುಳುಗಿರುವವನೂ ಆದ ನನ್ನನ್ನು ಪಾವನಗೊಳಿಸಿದರೆ ನಿನಗೆ ಬರುವ ಹೆಸರು ಮತ್ತು ಕೀರ್ತಿ ಅಂತಿಂಥದಲ್ಲ! ಸ್ವಾಮಿ, ಉತ್ಪ್ರೇಕ್ಷೆಯಲ್ಲಯ್ಯ ನಾನು ಹೇಳುತ್ತಿರುವುದು, ನಗದೆ ಸುಮ್ಮನೆ ಒಪ್ಪಿಕೊ!"—ರತ್ನಾಕರ, ಅಪರಾಜಿತನನ್ನೂ ಮರುಳುಗೊಳಿಸುತ್ತಿರುವನು! ವೀತರಾಗನಾದ

೧. ಭ. ವೈ. ೮೦ನೇ ಸಂ.

ಜಿನೇಂದ್ರ ಇಂಥ ಸದ್ಭಕ್ತನಿದಿರು ತಾಯ್ಗರುಳಾಗಿ ಕರಗಿರಬೇಕು!

> ಮೃಢನೀಂ ಕಲ್ಲೊಳಗೇಕೆ ಪೊಕ್ಕುಸುರದಂತಿರ್ದಪ್ಪೆ ಭಕ್ತರ್ಗೆ ನೀಂ |
> ಕೊಡೆನಿನ್ನಿಲ್ಲೆನೆ ಸಾಲದೇನಡಗಲೇಕಿಲ್ಲೆಂಬುದಂ ಬಲ್ಲೆವಿ ||
> ಟ್ಟೊಡಲಿಂಗಿಲ್ಲದೆ ಮೇಣ್ ಪರಾನ್ನದುಣಿಸಿಂ ದಾರಿದ್ರ ನೀನಾವಗಂ |
> ಬಡವಂ ಬಲ್ಲೆವು ಬೇಡೆವಂಜದಿರಲೇ ಪಂಪಾಪುರಾಧೀಶ್ವರಾ[1] || ೧೦೨ ||

"ಕಲ್ಲಲ್ಲಿ ಹೊಕ್ಕು ಮಾತಾಡದೆ ಈ ರೀತಿ ಏಕಿರುವೆ ಮೃಢ? 'ನನ್ನಲ್ಲಿ ಏನೂ ಉಳಿದಿಲ್ಲ, ಇನ್ನು ಕೊಡಲಾರೆ' ಎಂದಾದರೂ ಹೇಳದೆ ತಲೆಮರೆಸಿಕೊಂಡಿರುವೆಯಲ್ಲ! ನಿನ್ನ ಬಂಡವಾಳ ನಮಗೂ ಗೊತ್ತು. ಹೊಟ್ಟೆಗೇನೆ ಇನ್ನೊಬ್ಬರ ಬಳಿ ಬೇಡುವ ದಟ್ಟದರಿದ್ರ ನೀನು! ಎಂದು ನೋಡಿದರೂ ನೀನು ಕಡುಬಡವನೆ! ಖಂಡಿತ ನಮಗೇನೂ ಕೊಡಬೇಡ. ನಾವೂ ಕೇಳುವುದಿಲ್ಲ. ಈಗಾದರೂ ಹೆದರದೆ ಮುಖ ತೋರಿಸಯ್ಯ ವಿರೂಪಾಕ್ಷ!"—ಹರಿಹರ, ದೇವರನ್ನು ದಬಾಯಿಸುತ್ತಿರುವನು! ಈತನದು ರಾಜಸ ಭಕ್ತಿ! ಆರ್ಭಟ ಆವೇಶ ಹೆಚ್ಚು. ಹರಿಹರನನ್ನು ಹಟಯೋಗಿಯೆಂದರೂ ಒಪ್ಪೀತು! ಪರಮಾತ್ಮನನ್ನು ಕಾಣಲು ಇದೂ ಒಂದು ಮಾರ್ಗ. ಹೇಗೋ ಅವನನ್ನು ಬಯಲಿಗೆಳೆಯುವುದು ಮುಖ್ಯ! ಮನಕರಗಿಸಿ ಮರುಳು ಮಾಡಿ, ವಿನಯ ತೋರಿ ಕೊನೆಗೆ ಗೋಗರೆದು ರತ್ನಾಕರ ಪರಮಾತ್ಮನನ್ನು ಸಂದರ್ಶಿಸಿದರೆ, ಹರಿಹರನಾದರೂ ಒಮ್ಮೆ ಅತ್ತರೆ ಇನ್ನೊಮ್ಮೆ ಅಬ್ಬರಿಸಿ ಅಷ್ಟಕ್ಕೂ ಜಗ್ಗದಿದ್ದರೆ ಆರ್ಭಟಿಸಿ ಅವನ ತಲೆ ಚಿಟುಗುಟ್ಟುವಂತೆ ಮಾಡಿ ವಿರೂಪಾಕ್ಷನನ್ನು ಹೊರಗೆಳೆಯದಿರನು! ರತ್ನಾಕರ ಏನನ್ನು ಸಾಧಿಸುವನೋ ಅದನ್ನೇ ಹರಿಹರನು ಸಾಧಿಸುವನು! ಕನ್ನಡದ ಶತಕಕಾರರಲ್ಲಿ ಹರಿಹರ ಮತ್ತು ರತ್ನಾಕರರಿಬ್ಬರೂ ಅಗ್ರಗಣ್ಯರು! ಅಷ್ಟೇಕೆ ಈ ಮಹನೀಯರಿಬ್ಬರೂ ಮಹಾಕವಿಗಳೇ!

> ಶ್ರೀ ಶುಭವೆತ್ತ ಮೇರುನಗದಿಂದ್ರ ದಿಶಾಸ್ಥಿತ ವತ್ಸಕಾವತೀ |
> ದೇಶದೊಳಿರ್ದಪ್ಪೆ ವಿಜಿತಘಾತಿಚತುಷ್ಕಜಗತ್ರಯಾರ್ಚಿತಾ ||
> ಲೇಶಮಾದೊಡಂ ಪುದಿದ ಪುದ್ಗಲದಲ್ಲಿರಲಾರೆನಯ್ಯ ಸ |
> ರ್ವೇಶ ಶರಣ್ಯ ಗಣ್ಯ ತಳುವೇಂ ಶರಣಾಗಪರಾಜಿತೇಶ್ವರಾ || ೧೨೭ ||

ಅಪರಾಜಿತ, ಮಂಗಳಕರವಾದ ಮೇರುಪರ್ವತಕ್ಕೆ ಪೂರ್ವದಲ್ಲಿರುವ ವತ್ಸಕಾವತೀ ದೇಶದಲ್ಲಿ ನೀನಿರುವೆ. ಘಾತಿಚತುಷ್ಟಯವನ್ನು ಧ್ವಂಸ ಮಾಡಿದ ಪ್ರಭುವೆ, ತ್ರಿಲೋಕಪೂಜಿತನೆ, ಇನ್ನು ತುಸುವಾದರೂ ಪುದ್ಗಲದಲ್ಲಿ ನಾನು ಬಾಳಲಾರೆನಯ್ಯ! ಸರ್ವೇಶ, ಶರಣಾಗತರಕ್ಷಕ, ಗಣ್ಯ, ಏಕಪ್ಪ ತಡಮಾಡುತ್ತಿರುವೆ? ಕಾಪಾಡಯ್ಯ"—ಎಂದು ರತ್ನಾಕರ ಅಂಗಲಾಚುತ್ತಿರುವನು. ಇನ್ನೊಂದು ಕ್ಷಣವೂ ಸಂಸಾರದಲ್ಲಿರಲು ತನ್ನಿಂದ ಸಾಧ್ಯವಿಲ್ಲವೆಂದು ಕಡಾಖಂಡಿತವಾಗಿ ತಿಳಿಸಿ ಬಿಟ್ಟಿರುವನು.

> ತ್ರಿಜಗತ್ಸ್ವಾಮಿಗಳಿರ್ದಪರ್ಧರೆಯೊಳೀಗಳ್ದೂರವಲ್ಲಿರ್ದೋಡಿ |
> ವಿಜಯಾರ್ಧಂ ಹಿಮವದ್ವಯಂ ನಿಷಧಮೆಂಬೀ ನಾಲ್ಕು ಪೆರ್ಗೋಡೆಗಳ್ ||
> ಪ್ರಜೆಗಡ್ಡೈಸಿದವೈಸೆ ಕಾಣ್ಬರಿಮಡರ್ತಾರಾಧನಂ ಮಾಡಿರೋ |
> ನಿಜದಿಂದೆಮ್ಮಪರಾಜಿತೇಶ್ವರನುಮಂ ಶ್ರೀಮಂದರಸ್ವಾಮಿಯಂ || ೧೨೮ ||

೧. ಪಂ. ಶ. ೧೦೨.

ಈಗಲೂ ಲೋಕದಲ್ಲಿ ತೀರ್ಥಂಕರರಿದ್ದಾರೆ. ಅಂಥ ದೂರವೇನಲ್ಲ! ಆದರೆ 'ವಿಜಾಯಾರ್ಧ', 'ಹಿಮವತ್ಪರ್ವತ', 'ಮಹಾಹಿಮವತ್ಪರ್ವತ' ಹಾಗೂ 'ನಿಷಧ'ವೆಂಬ ನಾಲ್ಕು ಮಹಾಚಲಗಳು ಪ್ರಜೆಗಳಿಗಡ್ಡವಾಗಿ ನಿಂತಿವೆ! ಭಕ್ತಿಯಿಂದ ಆರಾಧನೆ ಮಾಡಿರೋ. ನಮ್ಮ ಅಪರಾಜಿತನನ್ನು ಮತ್ತು ಶ್ರೀಮಂದರನನ್ನು ಖಂಡಿತವಾಗೂ ಕಾಣುವಿರಿ!"—ಕ್ರೋಧ ಮಾನಮಾಯಾಲೋಭ ಇವು ಹಿಂಗಿದರೆ ಪರಮಾತ್ಮನ ದರ್ಶನವಾಗಬಹುದು; ಇವನ್ನು ದಾಟಿದವರಿಗೆಲ್ಲ ಅವನಾಗೆ ದರ್ಶನವೀಯುವನು. ಮೇಲಿನ ನಾಲ್ಕು ಪರ್ವತಗಳೂ ಈ ನಾಲ್ಕು ಕಷಾಯಗಳಿಗೆ ಪ್ರತಿಮೆಯಿದ್ದಂತಿವೆ !

> ಈ ಜಿನ ಕಥೆಯನು ಕೇಳಿದವರ ಪಾಪ | ಬೀಜ ನಿರ್ನಾಶನವಹುದು ||
> ತೇಜವಹುದು ಪುಣ್ಯವಹುದು ಮುಂದೊಲಿದಪ | ರಾಜಿತೇಶ್ವರನ ಕಾಣುವರು ||
> ಪ್ರೇಮದಿಂದಿದನೋದಿದರೆ ಪಾಡಿದರೆ ಕೇಳ್ದ | ರಾಮೋದವೈದುವರವರು ||
> ನೇಮದಿ ಸುರರಾಗಿ ನಾಳೆ ಶ್ರೀಮಂದರ | ಸ್ವಾಮಿಯ ಕಾಣ್ಬರರ್ತಿಯೊಳು ||

ಭರತೇಶವೈಭವದಲ್ಲೂ ಸಂಧಿ ಸಂಧಿಗೂ ರತ್ನಾಕರ ಇದೇ ಆಶ್ವಾಸನೆಯಿತ್ತಿರುವನು. ಕಾವ್ಯವಿಹಾರಿಯಾದರೂ ಮರುಭವದಲ್ಲಿ ವಿದೇಹಕ್ಷೇತ್ರ ಲಭಿಸಿ ಅಪರಾಜಿತ ಹಾಗೂ ಶ್ರೀಮಂದರರ ದರ್ಶನಲಾಭ ಪಡೆಯಬಹುದು ಇಲ್ಲವೆ ಭಕ್ತಿಯಿಂದ ದೇವವನ್ನು ಭಜಿಸಿ, ಅರ್ಚಿಸಿಯೂ ಭಗವದ್ದರ್ಶನವನ್ನು ಪಡೆಯಬಹುದು. ಅವರವರಿಗೆ ಬೇಕಾದ ಮಾರ್ಗವನ್ನು ಇವುಗಳಲ್ಲಿ ಹಿಡಿಯಬಹುದು.

ವಿಶ್ವಕ್ಕೆ ರತ್ನಾಕರನ ಕಾಣಿಕೆ

ಒಂದು ಮಹಾಸಾಗರದಿಂದ ನಾಡಿಗಾಗುವ ಉಪಕಾರವನ್ನು ಅಳೆಯಲಾದೀತೆ? ತನ್ನ ವಿಸ್ತಾರಕ್ಕೂ ತನ್ನ ಆಳಕ್ಕೂ ಅನುಗುಣವಾಗಿ ಮಹಾಸಾಗರ ನಿರಂತರವಾಗಿ ಕಡಲ ತೀರದವರಿಗೆ ಬಡತನವನ್ನು ನೀಗಿಸಿದರೆ ತನ್ನಿಂದ ದೂರವಾದವರ ಮನೆ ಬಾಗಿಲಿಗೆ ಮೇಘಮಾಲೆಯನ್ನಟ್ಟಿ ತಂಪು ಮಾಡುವುದಿಲ್ಲವೆ? ಅಂತೆ ಕನ್ನಡ ರತ್ನಾಕರನೂ ವಿಶ್ವಕ್ಕೆ ಶಾಶ್ವತವಾದ ಕಾವ್ಯ ಚಿಂತಾಮಣಿಯನ್ನರ್ಪಿಸಿರುವನು. ಹತ್ತು ಸಾವಿರ ಪದ್ಯರಾಶಿಯಿರುವ ಭರತೇಶವೈಭವವನ್ನು ನಮಗಾಗಿ ಸೃಷ್ಟಿಸಿರುವನು; ಶತಕತ್ರಯವನ್ನು ಲೋಕತ್ರಯಕ್ಕರ್ಪಿಸಿರುವನು. ಸೋಮೇಶ್ವರಶತಕವನ್ನೂ ಇವನದೆಂದುಕೊಂಡರೆ ರತ್ನಾಕರ ನಿಜವಾಗೂ ಕವಿಬ್ರಹ್ಮನಾಗಿರುವಂತೆ ಶತಕಚತುರಾನನನೂ ಹೌದು! ಲೋಕದಲ್ಲಿ ಕವಿಗಳಿಗೆ ಕೊರತೆಯಿದೆಯೆ ?

> ತಿಣಿಕಿದನು ಫಣಿರಾಯ ರಾಮಾ |
> ಯಣದ ಕವಿಗಳ ಭಾರದಲಿ ತಿಂ |
> ತಿಣಿಯ ರಘುವರ ಚರಿತೆಯಲಿ ಕಾಲಿಡಲು ತೆರಪಿಲ್ಲ
> ಬಣಗು ಕವಿಗಳ ಲೆಕ್ಕಿಪನೆ ಸಾ |
> ಕೆಣಿಸದಿರು ಶುಕರೂಪನಲ್ಲವೆ
> ಕುಣಿಸಿ ನಗನೇ ಕವಿ ಕುಮಾರವ್ಯಾಸ ನುಳಿದವರ[1] ||

೧. ಕ. ಭಾ. ಕ. ಮಂ., ಪೀ. ಸಂ. ೧೭.

—ಎಂದು ಕುಮಾರವ್ಯಾಸ ಕವಿಸಮೂಹದ ಲೆಕ್ಕವನ್ನು ಹಾಕಲಾರದೆ ಕೊನೆಗೆ ತನ್ನ ವ್ಯಕ್ತಿತ್ವವನ್ನು ಮಾತ್ರ ಹೇಳಿಕೊಳ್ಳಲು ಹೊರಟಿರುವನು. ಜಗತ್ತಿಗೆ ಮೇರು ಪರ್ವತವಿರುವಂತೆ, ಪೆಸಿಫಿಕ್ ಮಹಾಸಾಗರವಿರುವಂತೆ, ಗಂಗಾನದಿಯಿರುವಂತೆ, ರಾಜರಾಜೇಶ್ವರಿಯಾದ ಮೋಕ್ಷಲಕ್ಷ್ಮಿಯಿರುವಂತೆ ಕೆಲವು ಅಪರೂಪವೂ ಅನುಪಮವೂ ಆದ ಘಟನೆಗಳಿವೆ! ಮೇಲೆ ಹೇಳಿದವುಗಳಲ್ಲಿ ಒಂದೊಂದಕ್ಕೂ ಇನ್ನೊಂದು ಹೋಲಿಕೆಯನ್ನು ತರುವುದು ಅಸಾಧ್ಯವೆಂದೇ ಹೇಳಬೇಕು. ಅಂತೆ ರತ್ನಾಕರ ಲೋಕಕಿತ್ತ ಕಾಣಿಕೆ ಉಪಮಾತೀತವಾದುದು!

ಈತ ಕವಿಯಾದುದರಿಂದ ದೊಡ್ಡವನಾಗಿಲ್ಲ. ಮಹಾಕವಿಯಾಗಿರುವುದರಿಂದ ದೊಡ್ಡವನೆನ್ನೋಣವೆಂದರೆ ಇಂಥ ಮಹಾಕವಿಗಳೂ ವಿಶ್ವದಲ್ಲಿ ಬೇಕಾದಷ್ಟು ಜನರಿದ್ದಾರೆ. ಆದರೆ ಇವನಿತ್ತ ಅಪೂರ್ವ ಕಾಣಿಕೆಯಿಂದ ದೊಡ್ಡವನಾಗಿದ್ದಾನೆ. ಭೇದವಿಜ್ಞಾನವನ್ನು ನಾದವಾಗಿ ಹರಿಸಿ ಭರತೇಶನ ಬಾಳ್ವೆಗೆ ಬಣ್ಣಕಟ್ಟಿ, ರತ್ನಾಕರ ಕವಿಕುಲದಲ್ಲಿ ಧ್ರುವತಾರೆಯಾಗಿದ್ದಾನೆ! ಹಂಸತತ್ವಕ್ಕೆ ಈ ಕವಿರಾಜ ಹಂಸಕಲೆಯ ರಂಗಿತ್ತು ಹಂಸಕಲೆಯಾಗಿ, ಪರಮಹಂಸಸ್ವರೂಪಿಯಾಗಿ ಚಿತ್ರಿಸಿ ಕೃತಕೃತ್ಯನಾಗಿರುವುದರಿಂದ ಮಹಾಪುರುಷನಾಗಿದ್ದಾನೆ!

ರತ್ನಾಕರನ ಭೇದವಿಜ್ಞಾನಕ್ಕೂ ಭಗವದ್ಗೀತೆಯ ಅನಾಸಕ್ತಯೋಗಕ್ಕೂ ಇರುವ ಹೋಲಿಕೆಯನ್ನೂ ವ್ಯತ್ಯಾಸವನ್ನೂ ನಾವು ತಿಳಿದುಕೊಳ್ಳುವುದು ಅತ್ಯಾವಶ್ಯಕ.

ಬ್ರಹ್ಮಣ್ಯಾಧಾಯ ಕರ್ಮಾಣಿ ಸಂಙ್ಗ ತ್ಯಕ್ತ್ವಾ ಕರೋತಿ ಯಃ |
ಲಿಪ್ಯತೇ ನ ಸ ಪಾಪೇನ ಪದ್ಮಪತ್ರ ಮಿವಾಂಭಸಾ[೧] || ೧೦ ||

ಯಾರು ಕರ್ಮಗಳನ್ನು ಬ್ರಹ್ಮಾರ್ಪಣ ಮಾಡಿ ಆಸಕ್ತಿ ಬಿಟ್ಟು ವರ್ತಿಸುವನೋ ಅವನು ನೀರಿನಲ್ಲಿರುವ ಕಮಲದಂತೆ ಪಾಪದಿಂದ ಅಲಿಪ್ತನಾಗಿರುತ್ತಾನೆ—ಹಿಂದೂ ದರ್ಶನದಲ್ಲಿ ಸಾಧಕನ ಕರ್ಮಗಳನ್ನು ಅರ್ಪಣೆ ಮಾಡಿಸಿಕೊಳ್ಳುವಂಥ ಹಾಗೂ ಸಾಧಕನನ್ನು ಕರ್ಮದಿಂದ ಮುಕ್ತಗೊಳಿಸುವಂಥ 'ಬ್ರಹ್ಮ'ನ ಕಲ್ಪನೆಯಿದೆ. ಆದರೆ ಜೈನ ದರ್ಶನದಲ್ಲಿ ಅಂಥ ಜಗನ್ನಿಯಾಮಕನ ಕಲ್ಪನೆಯಿಲ್ಲ. ಭೇದವಿಜ್ಞಾನದ ರೀತಿ, ಯಾವುದೂ ತನ್ನದಲ್ಲವೆಂಬ ಭಾವನೆ ಸದೃಢವಾಗಿ ನೆಲೆಗೊಳ್ಳಬೇಕು. ತನ್ನದಲ್ಲದಿದ್ದರೆ ದೇವರದೇ ಎಂದರೆ ಇಲ್ಲಿ ಅದು ದೇವರದೂ ಅಲ್ಲ. ಹಿಂದೂದರ್ಶನದಲ್ಲಿ ಮಾಡುವುದನ್ನೆಲ್ಲ ಪರಮಾತ್ಮನ ಕಾರ್ಯವೆಂದು ಮಾಡಿ ಕರ್ಮದಿಂದ ಮುಕ್ತರಾದರೆ ಜೈನದರ್ಶನದಲ್ಲಿ ಮಾಡುವುದು ದೇವರದೂ ಅಲ್ಲ, ಸಾಧಕನದೂ ಅಲ್ಲ. ಮನಸ್ಸಿನ ಪರಿಣಾಮ ಅನಾಸಕ್ತವಾಗಿದ್ದರೆ ಸಾಧಕ ಕರ್ಮದಿಂದ ಬಿಡುಗಡೆ ಪಡೆಯುತ್ತಾನೆ: ಜೈನ ಅನಾಸಕ್ತಿಗೂ ಹಿಂದೂ ಅನಾಸಕ್ತಿಗೂ ಅಂತರವಿದೆ. ಎರಡರಲ್ಲೂ ಅನಾಸಕ್ತಿಯಿದ್ದರೂ ದೃಷ್ಟಿಕೋನದಲ್ಲಿ ಎರಡಕ್ಕೂ ಅಂತರವಿದ್ದೇ ಇದೆ.

ಜೈನದರ್ಶನದಲ್ಲಿ ರೇಖಾಚಿತ್ರವಾಗಿ ಮೂಡಿರುವ ಭೇದವಿಜ್ಞಾನ ರತ್ನಾಕರನ ಕೈಲಿ ವರ್ಣಚಿತ್ರವಾಗಿ ಸಜೀವವಾಗಿ ದಿವ್ಯಕಲೆಯಾಗಿ ರೂಪುಗೊಂಡಿದೆ.

ಹಂಸಕಲೆಯ ಕಡೆ ನಾವು ತಿರುಗಿದರೆ ರತ್ನಾಕರನ ಬೃಹತ್ ಕಲಾವೈಭವಕ್ಕೆ ಬೆರಗಾಗದಿರೆವು. ಭಗವಾನ್ ಜಿನಸೇನಾಚಾರ್ಯರಿಂದ ಮೊದಲ್ಗೊಂಡು ಕನ್ನಡದ ರತ್ನತ್ರಯರೆಲ್ಲ ನವರಸಗಳನ್ನೂ

೧. ಮಹಾತ್ಮಗಾಂಧಿ, ಅ. ಯೋ, ೫-೧೦.

ಸಮೃದ್ಧಿಯಾಗಿ ಕೊಡಲು ಪ್ರಯತ್ನಿಸಿರುವರೆಂಬುದು ನಿಜವಾದರೂ ಅವರು ಶೃಂಗಾರ, ವೀರ, ಹಾಸ್ಯ, ಬೀಭತ್ಸ ಮತ್ತು ಭಯಾನಕರಸಗಳನ್ನು ಅಲೌಕಿಕವಾಗಿ ಕೊಟ್ಟು ಕೃತಕೃತ್ಯರಾಗಿರುವಂತೆ ಆತ್ಮಾನಂದರಸವನ್ನು ಚಿತ್ರಿಸುವಾಗ ಕೃತಕೃತ್ಯರಾಗಿಲ್ಲವೆಂದೇ ಹೇಳಬೇಕು. ಹಂಸತತ್ವ ಬಂದೆಡೆಯಲ್ಲೆಲ್ಲ ಹಿಂದಿನ ಈ ಮಹಾಕವಿಗಳು ಪಾರಿಭಾಷಿಕ ಶಬ್ದಾವಳಿಯಿಂದ ಕಾವ್ಯಕಲೆಗೆ ದಿಗ್ಬಂಧನವೆಸಗಿ ಪಾರಾಗಲು ಹವಣಿಸಿರುವುದನ್ನು ಅವರ ಕೃತಿಗಳಲ್ಲಿ ಯಾರುಬೇಕಾದರೂ ನೋಡಬಹುದು. ಆದರೆ ರತ್ನಾಕರ ಮಹಾಕವಿ ಹಂಸತತ್ವವನ್ನೂ ಹಂಸಕಲೆಯಾಗುವಂತೆ ಚಿತ್ರಿಸಿ ಕೃತಕೃತ್ಯನಾಗಿರುವನು. ಎಲ್ಲ ಸಂದರ್ಭದಲ್ಲೂ ಕವಿಯಾಗಿ, ಅದೂ ಮಹಾಕವಿಯಾಗಿ, ರತ್ನಾಕರನಂತೆ ಮೆರೆದವರು ಅಪರೂಪ.

ರತ್ನಾಕರ ಒಂದು ಕೈಯಲ್ಲಿ ಭೇದವಿಜ್ಞಾನವನ್ನೂ ಇನ್ನೊಂದು ಕೈಯಲ್ಲಿ ಹಂಸಕಲೆಯನ್ನೂ ಧಾರಾಳವಾಗಿ ಕೇಳಿದವರಿಗೆಲ್ಲ ಕೊಡುಗೈವೀರನಾಗಿ ಕೊಡುತ್ತಿರುವನು; ವಿಶ್ವಕ್ಕೆಲ್ಲ ಈ ಅಮೃತವನ್ನು ಹಂಚುತ್ತಿರುವನು!

ರತ್ನಾಕರನ ವ್ಯಕ್ತಿತ್ವ

ರತ್ನಾಕರನ ವ್ಯಕ್ತಿತ್ವ ಬಹುಮುಖವಾದುದು; ಮಹಾಯೋಗಿಗಳ ನಡುವೆ ನಿಂತಾಗ ಮಹಾಕವಿಯಾಗಿ ಕಾಣಿಸಿಕೊಂಡರೆ, ಮಹಾಕವಿಗಳ ಪಂಕ್ತಿಯಲ್ಲಿ ಕುಳಿತಾಗ ಮಹಾಯೋಗಿಯಾಗಿ ರಾರಾಜಿಸುವನು. ರತ್ನಾಕರ ಅನುಭಾವಿಗಳಲ್ಲಿ ಅನುಭಾವಿಯಾಗಿ, ಪರಮಹಂಸರಲ್ಲಿ ಪರಮಹಂಸನಾಗಿ ಕಂಗೊಳಿಸುವನು.

ಪಂಪನಿಂದ ಕುವೆಂಪು ತನಕ ಬೆಳೆದು ಬಂದಿರುವ ಕನ್ನಡ ಸಾಹಿತ್ಯದ ಒಂದು ಸಹಸ್ರ ವರ್ಷದ ಇತಿಹಾಸವನ್ನು ನಾವು ಅವಲೋಕಿಸಿದರೆ ರತ್ನಾಕರನ ಮಟ್ಟಕ್ಕೇರುವಂಥ ಕವಿಗಳು ಮೂರು ನಾಲ್ಕು ಮಂದಿ ದೊರೆತರೂ ನಾವು ಪುಣ್ಯವಂತರೇ! "ಕಾವ್ಯ ವಸ್ತು ಮತ್ತು ದರ್ಶನದ ದೃಷ್ಟಿಯಿಂದ ನೋಡುವುದಾದರೆ ಭರತೇಶವೈಭವದ ಕರ್ತೃವಾದ ರತ್ನಾಕರವರ್ಣಿ ಹಿಂದಿನ ಮಹಾಕವಿಗಳ ಪಂಕ್ತಿಯಲ್ಲಿ ಪ್ರಥಮಶ್ರೇಣಿಗೆ ಏರುವಂತೆ ತೋರುತ್ತದೆ....ಭರತೇಶವೈಭವದಲ್ಲಿ ತ್ಯಾಗಭೋಗಗಳ ಸಮನ್ವಯದ ಯೋಗದರ್ಶನವನ್ನು ಕವಿ ಸುಂದರವಾಗಿ ಪ್ರತಿಪಾದಿಸಿದ್ದಾನೆ. ಅಷ್ಟೇ ಅಲ್ಲ, ಕವಿ ಆ ದರ್ಶನವನ್ನು ಭರತನ ಜೀವನದಲ್ಲಿ ಮಾತ್ರವೇ ಅಲ್ಲದೆ ಇಡೀ ಕಾವ್ಯದ ವಿವರವಿವರಗಳಲ್ಲೆಲ್ಲ ಬುದ್ಧಿಪೂರ್ವಕವಾಗಿ ಪ್ರತಿಮಿಸಿರುವುದನ್ನು ನೋಡಿದರಂತೂ ಇಂತಹ ಕಾವ್ಯ ಸೃಷ್ಟಿ ಜಗತ್ತಿನ ಮತ್ತಾವ ಸಾಹಿತ್ಯದಲ್ಲೂ ಆಗಿರುವಂತೆ ಕಾಣುವುದಿಲ್ಲ. ಆ ದೃಷ್ಟಿಯಿಂದ ಈ ಕೃತಿ ಜಗತ್‌ಕೃತಿ[೧]" "....ಮೀನು ನೀರಿನಲ್ಲಿ ಈಜುವಂತೆಯೂ ಹಕ್ಕಿ ಗಾಳಿಯಲ್ಲಿ ಹಾರುವಂತೆಯೂ ಪರಮಾತ್ಮಭಾವನೆಯಲ್ಲಿ ರತ್ನಾಕರ ಓಲಾಡುವನು. ಈ ಶಕ್ತಿಯಲ್ಲಿ ಕವಿಯನ್ನು ಮಹಾಕವಿ ರವೀಂದ್ರನಾಥ ಠಾಕೂರರಿಗೆ ಹೋಲಿಸಬಹುದಾಗಿದೆ. ರತ್ನಾಕರನ ಹಲವು ಉದಾತ್ತ ಭಾವನೆಗಳು ಗೀತಾಂಜಲಿಯ ಭಾವನೆಗಳಷ್ಟೇ ದಿವ್ಯವಾಗಿವೆ.[೨]"

೧. ಶ್ರೀ ಕುವೆಂಪು, ಭ. ವೈ. ಸಂ. ಮು., ಪು. I.

೨. ಶ್ರೀ ಉಗ್ರಾಣ ಮಂಗೇಶರಾವ್, ಭ. ವೈ, ಭೋ. ವಿ., ಪೀ, ಪು. XXVIII

ರತ್ನಾಕರನ ವ್ಯಕ್ತಿತ್ವವನ್ನು ನಿರ್ಧರಿಸುವಾಗ ವಿಮರ್ಶಕರು ಭರತೇಶವೈಭವವನ್ನೇ ಕುರಿತು ಮಾತಾಡಿರುವರು. ಈತನ ರತ್ನಾಕರಶತಕ ಪ್ರವುಢವಾಗಿದ್ದರೂ ಬಹುಮಟ್ಟಿಗೆ ಎಲ್ಲೂ ನೀರಸ ವಾಗಿಲ್ಲ. ಅಪರಾಜಿತಶತಕವಂತೂ ಹಂಸಕಲೆಯ ಆಗರವಾಗಿ, ಅನುಭಾವದ ನೆಲೆವನೆಯಾಗಿ ಒಟ್ಟಿನಲ್ಲಿ ರಸಗಡಲಿನಂತಿರುವ ದರ್ಶನಕಾವ್ಯವಾಗಿದೆ! ರತ್ನಾಕರ ಕೇವಲ ಕನ್ನಡಕ್ಕೆ ಮಾತ್ರ ಪರಿಮಿತಿಗೊಳ್ಳುವ ಕವಿಯಲ್ಲ. ಈತನ ತತ್ವಗಳು ವಿಶ್ವತತ್ವಗಳಾಗಿ ವಿಶ್ವಕ್ಕೆಲ್ಲ ಬೇಕಾದವುಗಳಾ ಗಿರುವುದರಿಂದ ಈತ ವಿಶ್ವಕವಿಯೆನಿಸಿರುವನು.

ಕನ್ನಡಿಗರು ರತ್ನಾಕರನನ್ನು ಎಷ್ಟು ಸತ್ಕರಿಸಬಹುದಾಗಿತ್ತೋ ಅಷ್ಟು ಸತ್ಕರಿಸದಿದ್ದರೂ ಇಂದು ರತ್ನಾಕರ ದಿನೇದಿನೇ ಪ್ರಾಂತ್ಯ ಪ್ರಾಂತ್ಯಗಳನ್ನೇ ಧರ್ಮ ದಿಗ್ವಿಜಯವೆಸಗುತ್ತಿರುವನು! ಈತನ ಕೃತಿಗಳೆಲ್ಲ ಹಿಂದೀ ಭಾಷೆಗೂ, ಇಂಗ್ಲೀಷಿಗೂ, ಗುಜರಾತೀ ಭಾಷೆಗೂ ಮತ್ತು ಮರಾಠಿಗೂ ಈಗಾಗಲೇ ಭಾಷಾಂತರಗೊಂಡಿವೆ.[೧] ಕನ್ನಡದಲ್ಲಿ ಇಷ್ಟೊಂದು ವ್ಯಾಪಕತೆ ಪಡೆ ದಿರುವ ಕವಿಗಳೆಷ್ಟು ಜನರಿರುವರು?

ರತ್ನಾಕರನ ಕ್ರಾಂತಿಕಾರಿಯೂ ಪ್ರಗತಿಶೀಲವೂ ಆದ ಸುಧಾರಣಾ ಮನೋಭಾವ ಜೈನ ಕಂದಾಚಾರದ ಬುಡವನ್ನು ಅಲುಗಿಸದೆ ಬಿಡಲಿಲ್ಲ. ಅಂದಿಗೆ ಜಿನಧರ್ಮದ ಜೀವದಯಾಕಲ್ಪ ವೃಕ್ಷದಲ್ಲಿ ಶುಷ್ಕವೇದಾಂತದ ಹಾಗೂ ಉಚ್ಚನೀಚ ಭಾವನೆಯ ಬದನಿಕೆ ಬೆಳೆದು ಜಿನಧರ್ಮ ಖಿಲವಾಗುತ್ತಿತ್ತು. ಇಂಥ ಸಂದರ್ಭದಲ್ಲಿ ಸುಧಾರಣಾಸುಧಾಕರನಾದ ರತ್ನಾಕರ ಕಾಣಿಸಿಕೊಂಡು ಖಿಲವಾಗುತ್ತಿದ್ದ ಜಿನಧರ್ಮವನ್ನು ಉದ್ಧರಿಸಿದನು. ಆದರೂ ಪ್ರತಿಗಾಮಿ ಶಕ್ತಿಗಳು ಈತನ ನ್ನಿದಿರಿಸಿ ಲೋಕಕಲ್ಯಾಣವನ್ನು ಕೆಲಕಾಲವಾದರೂ ಕುಂಠಿತಗೊಳಿಸಿದವು. "ದರಿದ್ರರ ದುಃಖ ವನ್ನು ಪರಿಹರಿಸದ, ಮಾನವನನ್ನು ದೇವನ ಸಮಾನನನ್ನಾಗಿ ಮಾಡದ ಧರ್ಮಧರ್ಮವೇ ನಯ್ಯ?....ಮುಟ್ಟಬೇಡ ಎಂಬುದೇ ನಮ್ಮ ಧರ್ಮ. ಮುಟ್ಟಬೇಡ ಎಂಬ ಗಾಯತ್ರಿ ಯೊಂದನ್ನೇ ನಾವು ಯಾವಾಗಲೂ ಹಾಡುತ್ತಿರುವುದು. ಅಯ್ಯೋ ದೇವರೆ! ಕಳೆದ ಎರಡು ಸಾವಿರ ವರುಷಗಳಿಂದಲೂ ಬಲಗೈಯಿಂದ ಊಟ ಮಾಡುವುದೆ, ಎಡಗೈಯಿಂದ ಊಟ ಮಾಡುವುದೆ, ನೀರನ್ನು ಎಡಗಡೆಯಿಂದ ತೆಗೆದುಕೊಳ್ಳುವುದೋ ಅಥವಾ ಬಲಗಡೆಯಿಂದ ತೆಗೆದುಕೊಳ್ಳುವುದೇ ಎಂಬ ಮಹಾಪ್ರಶ್ನೆಗಳನ್ನು ಚರ್ಚೆ ಮಾಡುತ್ತಿರುವರು. ಇಂಥ ದೇಶ ನಾಶವಾಗದೆ ಇದ್ದರೆ ಮತ್ತಾವ ದೇಶ ನಾಶವಾಗುವುದು....[೨]" ಇಂಥ ಕಂದಾಚಾರದಿಂದ

೧. ಶ್ರೀ ಆಚಾರ್ಯ ದೇಶಭೂಷಣ ಮುನಿಮಹಾರಾಜ ಗ್ರಂಥಮಾಲೆಯ '೯'ನೇ ಪುಷ್ಪವಾಗಿ ಭರತೇಶ ವೈಭವದ ಮೂಲಪದ್ಯಗಳು ದೇವನಾಗರೀ ಲಿಪಿಯಲ್ಲೂ ಅದರಡಿ ಹಿಂದೀ ಹಾಗೂ ಇಂಗ್ಲೀಷಿನ ಅನು ವಾದವೂ ಇದ್ದು ಭರತೇಶವೈಭವ ಮುಮ್ಮಡಿಯಾಗಿ ನಾಲ್ಮಡಿಯಾಗಿ ಹಿಗ್ಗಿಹೋಗಿದೆ. ಈ ಮಾಲೆಯಲ್ಲೇ ಶತಕಗಳ ಮೂಲಪದ್ಯ ದೇವನಾಗರೀ ಲಿಪಿಯಲ್ಲಿದ್ದು ಹಿಂದಿಯ ಅನುವಾದದೊಡನೆ ಅಚ್ಚಾಗಿವೆ—ಪ್ರಕಾಶಕ: ಶ್ರೀ ದಿಗಂಬರ ಜೈನಸಮಾಜ, ಟಿಕೈತನಗರ, ಬಾರಾಬಂಕಿ ಜಿಲ್ಲಾ.

ಇನ್ನೊಂದು ಕಡೆ ಸೋಲಾಪುರದಲ್ಲಿರುವ ಶ್ರೀ ವರ್ಧಮಾನ ಪಾರ್ಶ್ವನಾಥ ಶಾಸ್ತ್ರಿಗಳು ರತ್ನಾಕರನ ಕೃತಿಗಳನ್ನೆಲ್ಲ ಹಿಂದಿಯಲ್ಲಿ ತರ್ಜುಮೆ ಮಾಡಿರುವರು; ಇಲ್ಲಿಂದ ರತ್ನಾಕರ ಗುಜರಾತಿಗೂ ಮರಾಠಿಗೂ ಹೋಗಿರುವನು!

೨. ಶ್ರೀ ವಿವೇಕಾನಂದ, ಪ. ಮಾ., ಪು. ೮೨.

ಜಿನಧರ್ಮ ಹೊರತಾಗಿಲ್ಲ. ಇದರಿಂದಲೇ ರತ್ನಾಕರ ಅಂದಿನ ದಿಗಂಬರ ಯತಿಗಳನ್ನು ವಿಡಂಬನೆ ಮಾಡಿರುವುದೂ ಕೂಡ.

"ನಮ್ಮಲ್ಲಿ ಯಾರಾದರೂ ಪ್ರಖ್ಯಾತ ಪುರುಷರು ಕಾಲವಾದರೆ ಮತ್ತೊಬ್ಬ ಅಂಥ ವ್ಯಕ್ತಿ ಬರುವುದಕ್ಕೆ ಅನೇಕ ಶತಮಾನಗಳು ಕಾದು ಕುಳಿತುಕೊಳ್ಳಬೇಕು. ಅಲ್ಲಾದರೋ (ಇಂಗ್ಲೆಂಡಿ ನಲ್ಲಿ,) ಸತ್ತ ಮರುಕ್ಷಣವೇ ದೇಶ ಅಂತಹ ಪ್ರಖ್ಯಾತ ಪುರುಷನನ್ನು ಮುಂದಕ್ಕೆ ತರುವುದು.... ಮಹಾಪುರುಷರ ಅಭಾವ ನಮ್ಮಲ್ಲಿರುವುದು....ನಮ್ಮ ದೇಶದಲ್ಲಿರುವ ದೊಡ್ಡ ದೋಷವಿದು. ಇದನ್ನು ನಿವಾರಿಸಬೇಕು. ಜನಸಾಮಾನ್ಯರನ್ನು ವಿದ್ಯಾವಂತರನ್ನಾಗಿ ಮಾಡಬೇಕು. ಅವರನ್ನು ಮೇಲಕ್ಕೆ ಎತ್ತಬೇಕು....[೧]" ಎಂದು ವಿವೇಕಾನಂದರು ಪಶ್ಚಿಮ ದೇಶಗಳಿಗೂ ಭರತಖಂಡಕ್ಕೂ ಇರುವ ಅಂತರವನ್ನು ನಿರ್ದೇಶಿಸಿರುವರು.

ಕಂದಾಚಾರ ಎಂದು ತಲೆಹಾಕಿತೋ, ಮಡಿವಂತಿಕೆಯ ಪ್ರಾಕಾರವನ್ನು ನಾವು ಧರ್ಮದ ಸುತ್ತ ಎಂದು ನಿರ್ಮಿಸಿದೆವೋ ಅಂದೇ ನಮ್ಮ ಪ್ರಗತಿ ನಿಂತುಹೋಯಿತು. ಜೊತೆಗೆ ಸಮಾಜ ಸುಧಾರಕರ ಸಂಖ್ಯೆ ಇಳಿಮುಖವಾಗಿ ಎಲ್ಲೆಲ್ಲೂ ಅನಾಯಕತ್ವ ತಲೆದೋರಿತು. ರತ್ನಾಕರನ ವ್ಯಕ್ತಿತ್ವವನ್ನು ಈ ದೃಷ್ಟಿಯಲ್ಲಿ ನಾವು ಅವಲೋಕಿಸಬೇಕು. ಜಿನಧರ್ಮಕ್ಕೆ ಭಕ್ತಿಯ ಬುನಾದಿ ಯನ್ನು ಭದ್ರವಾಗಿ ನಿರ್ಮಿಸಿ ರತ್ನಾಕರ ಅಹಿಂಸಾ ಧರ್ಮವನ್ನು ಎಲ್ಲರ ಧರ್ಮವಾಗುವಂತೆ ಸುಧಾರಿಸಲು ಹೊರಟನಾದರೂ ಪ್ರತಿಗಾಮಿ ಶಕ್ತಿಗಳೆಲ್ಲ ಭೋಂಕನೆದ್ದು ಈತನ ಉತ್ಸಾಹಕ್ಕೆ ನೀರೆರಚದೇ ಹೋಗಿದ್ದರೆ ಜಿನ ಧರ್ಮದ ವ್ಯಾಪ್ತಿ ಇನ್ನೂ ಹೆಚ್ಚುತ್ತಿತ್ತು. ಜೊತೆಗೆ ರತ್ನಾಕರನ ನಂತರ ಇವನ ಆಶಯವನ್ನು ಪೂರ್ಣಗೊಳಿಸುವಂಥ ಮಹಾಪುರುಷರು ಜಿನಧರ್ಮದಲ್ಲಿ ಇಂದಿನ ತನಕ ಯಾರೂ ಅವತರಿಸಲಿಲ್ಲ.[೨]

೧. ಶ್ರೀ ವಿವೇಕಾನಂದ, ಪ. ಮಾ., ಪು. ೯೦.

೨. ಈ ಮಾತನ್ನು ಜೈನದಿಗಂಬರ ಸಂಪ್ರದಾಯಕ್ಕೆ ಮಾತ್ರ ಅನ್ವಯಿಸಿಕೊಳ್ಳಬೇಕು. ಏಕೆಂದರೆ ಜೈನತೇರಾ ಪಂಥದ ಆಚಾರ್ಯರಾದ ಶ್ರೀ ತುಲಸಿಯವರು ಆಸೇತು ಹಿಮಾಚಲ ಪರ್ಯಂತ ಅಣುವ್ರತಾಂದೋಳನವೆಸಗುತ್ತ ಮಹಾವೀರನ ವಾಣಿಯನ್ನು ಈ ಕಲಿಕಾಲದಲ್ಲೂ ಪ್ರಸಾರ ಮಾಡುತ್ತಿರುವರು. ಅವರಿಗೆ ಈಗ ವಯಸ್ಸು ಸುಮಾರು ೪೨ ವರ್ಷ. ಅವರು ತಮ್ಮ ೨೨ನೇ ವಯಸ್ಸಿನಲ್ಲೇ ಆಚಾರ್ಯಪದವಿಯನ್ನಲಂಕರಿಸಿ ಭರತಖಂಡ ವನ್ನೆಲ್ಲ ಸುತ್ತಿ ಧಾರ್ಮಿಕ ಸುಧಾರಣೆಯೆಸಗುತ್ತಿರುವರು—(ಮುನಿಶ್ರೀ ನಾಗರಾಜಜೀ, ಯು. ಧ. ತೇ. ಪಂ, ಪು. ೨೭-೨೮.)

ಭಾಗ ೩
ರತ್ನಾಕರನ ಶತಕ ಸಾಹಿತ್ಯ

ತ್ರಿಲೋಕ ಸಾಮಾನ್ಯ ಸ್ವರೂಪ—೧

ಲೋಕ ಸ್ವರೂಪದ ವಿವರಣೆಗೆ ಜೈನಾಗಮಗಳಲ್ಲಿ ಪ್ರಮುಖ ಸ್ಥಾನವಿದೆ. 'ದ್ವಾದಶಾಂಗ'ಗಳಲ್ಲಿ ಕೊನೆಯದಾದ 'ದೃಷ್ಟಿವಾದಂಗ'ದಲ್ಲಿ 'ಪರಿಕರ್ಮ'ವೆಂಬ[೧] ವಿಭಾಗವಿದೆ. ಇದರಲ್ಲಿ (೧) 'ಚಂದ್ರಪ್ರಜ್ಞಪ್ತಿ', (೨) 'ಸೂರ್ಯಪ್ರಜ್ಞಪ್ತಿ', (೩) 'ಜಂಬೂದ್ವೀಪಪ್ರಜ್ಞಪ್ತಿ,' (೪) 'ದ್ವೀಪಸಾಗರಪ್ರಜ್ಞಪ್ತಿ,' (೫) 'ವ್ಯಾಖ್ಯಾಪ್ರಜ್ಞಪ್ತಿ' ಎಂಬ ಉಪಭಾಗಗಳಿವೆ. ಇವುಗಳಲ್ಲಿ ವ್ಯಾಖ್ಯಾಪ್ರಜ್ಞಪ್ತಿಯೊಂದನ್ನುಳಿದು ಮಿಕ್ಕವೆಲ್ಲ ಲೋಕಸ್ವರೂಪವನ್ನೂ ವಿಶ್ವ ರಹಸ್ಯವನ್ನೂ ಸಂದರ್ಭೋಚಿತವಾಗಿ ಬಣ್ಣಿಸುವುವು. ದೃಷ್ಟಿವಾದಾಂಗದ ನಾಲ್ಕನೆ ವಿಭಾಗದ 'ಪೂರ್ವಗತ'ದಲ್ಲಿ 'ಚತುರ್ದಶಪೂರ್ವ'ಗಳಿವೆ. ಇವುಗಳಲ್ಲಿ ಕೊನೆಯದಾದ 'ಲೋಕಬಿಂದುಸಾರಪೂರ್ವ'ದಲ್ಲೂ ಲೋಕವಿಚಾರವನ್ನು ವಿವರಿಸಿರುವರು. ಶ್ರುತವಿಚ್ಛೇದನವಾಗುತ್ತಿರುವುದನ್ನು ತಡೆಗಟ್ಟುವ ಸಲುವಾಗಿ ಅಳಿದುಳಿದ ಆಗಮಗಳನ್ನು ನಾಲ್ಕು 'ಅನುಯೋಗ'ಗಳಾಗಿ ಕ್ರೋಢೀಕರಿಸಿ ಸಂಗ್ರಹಿಸಿದರು. ಈ ಅನುಯೋಗಗಳಲ್ಲಿ ಈಚಿನ ಆಚಾರ್ಯರ ಗ್ರಂಥಗಳನ್ನೂ ಸಮಾವೇಶಗೊಳಿಸಿ ವರ್ಗೀಕರಣಮಾಡಿರುವರು. ಇವುಗಳಲ್ಲಿ ಬರುವ 'ಕರಣಾನುಯೋಗ'ವೆಂಬ ವಿಭಾಗದಲ್ಲಿ ಲೋಕಸ್ವರೂಪವನ್ನು ವಿವರಿಸುವ ಗ್ರಂಥಗಳೆಲ್ಲ ಸಮಾವೇಶವಾಗಿವೆ. ಜೈನ ಖಗೋಳ ಮತ್ತು ಭೂಗೋಳಶಾಸ್ತ್ರಕ್ಕೆ ಸಂಬಂಧಪಟ್ಟ ಗ್ರಂಥರಾಶಿಗೆ ಸ್ಥೂಲವಾಗಿ ಕರಣಾನುಯೋಗವೆನ್ನಬಹುದು.[೨]

ಮಹಾವೀರನ ನಂತರ ಬಂದಂಥ ಆಚಾರ್ಯರಲ್ಲಿ ಕೆಲವರು ಜೈನಸಿದ್ಧಾಂತಾನುಸಾರ ಲೋಕಸ್ವರೂಪವನ್ನು ಖಂಡವಾಗೋ ಇಲ್ಲವೆ ಅಖಂಡವಾಗೋ ವಿವರಿಸುವಂಥ ಗ್ರಂಥಗಳನ್ನೂ ರಚಿಸಿರುವುದುಂಟು. (೧) ಲೋಕವಿಭಾಗ[೩], (೨) ತ್ರಿಲೋಕಸಾರ[೪], (೩) ತಿಲಿಯೋ ಪಣ್ಣತ್ತಿ[೫], (೪) ಜಂಬೂದ್ವೀಪ ಪಣ್ಣತ್ತಿ[೬], ಚಂದ್ರಪ್ರಜ್ಞಪ್ತಿ[೭], ಮುಂತಾದ ಗ್ರಂಥಗಳನ್ನು ಹೆಸರಿಸಬಹುದು.

ಕರಣಾನುಯೋಗದ ಮಹತ್ವವನ್ನು ಸಮಂತ ಭದ್ರಾಚಾರ್ಯರು ಸೊಗಸಾಗಿ ವಿವರಿಸಿರುವರು[೮]. ಲೋಕಸ್ವರೂಪವನ್ನು ಕುರಿತು ಚಿಂತಿಸಿದಾಗ ಜೀವಿಗೆ 'ಪುಣ್ಯಕರ್ಮ' ಸಂಚಯವಾಗುವುದು. ಏಕೆಂದರೆ 'ಧರ್ಮಧ್ಯಾನ'ದ ನಾಲ್ಕು ಬಗೆಯಲ್ಲಿ 'ಸಂಸ್ಥಾನವಿಚಯ'ವೆಂಬ ಧ್ಯಾನವೂ ಉಂಟು; ಇದರಲ್ಲಿ ತ್ರಿಲೋಕ ಸ್ವರೂಪಚಿಂತನೆಯೇ ಸಾಧಕನೆಸಗುವ ಧ್ಯಾನವಾಗಿದೆ. 'ದ್ವಾದಶಾನುಪ್ರೇಕ್ಷೆ'ಯಲ್ಲಿ ಬರುವ ಲೋಕಾನುಪ್ರೇಕ್ಷೆಯೂ ಇದನ್ನೇ ಸಮರ್ಥಿಸುತ್ತದೆ[೯].

ಜೈನಪುರಾಣಗಳು 'ಪ್ರಥಮಾನುಯೋಗದ' ಶಾಖೋಪಶಾಖೆಗಳಾದರೂ ಅವುಗಳಲ್ಲಿ ಲೋಕಸ್ವರೂಪವನ್ನು ಸ್ಥೂಲವಾಗಿಯಾದರೂ ಚಿತ್ರಿಸದಿರುವ ಜೈನಪುರಾಣವೇ ಇಲ್ಲ. ಇದೊಂದು ಸಂಪ್ರದಾಯವಾಗಿ ಅಂದಿನಿಂದ ಇಂದಿನ ತನಕ ನಡೆದುಬಂದಿದೆ. ಧರ್ಮಕಥೆಯ ಸಪ್ತಾಂಗದಲ್ಲಿ ಕ್ಷೇತ್ರವಿಭಾಗ ಎರಡನೆಯದು.

ಸದ್ಧರ್ಮ ಕಥೆಯಲ್ಲಿ ಸಪ್ತಾಂಗವೆನಿಸಿರ್ಪ | ಶುದ್ಧ ಸದ್ರವ್ಯ ಸುಕ್ಷೇತ್ರ ||
ಶುದ್ಧದ ತೀರ್ಥವು ಕಾಲಸದ್ಭಾವವು | ಶುದ್ಧ ಮಹಾಫಲ ಪ್ರಕೃತ ||

ತೀರ್ಥಂಕರರ ಪುರಾಣವಾಗಲಿ, ಸಾಮಾನ್ಯ ಕೇವಲಿಗಳ ಚರಿತೆಯಾಗಲಿ ಅಥವ ಯಕ್ಷಯಕ್ಷಿಯರ ಮಹಾತ್ಮ್ಯೆಯಾಗಲಿ ತ್ರಿಲೋಕ ಸ್ವರೂಪದ ನಂತರವೇ ಮುಖ್ಯ ಕಥೆಯ ಪ್ರಾರಂಭ[೧೦]!

ಅನಂತಾಕಾಶದ ನಡುವೆ ಮೂರು ಲೋಕಗಳೂ ಇವೆ. ತ್ರಿಲೋಕವನ್ನೂ ಆವರಿಸಿಕೊಂಡು (೧) 'ಘನೋದಧಿ', (೨) 'ಘನಾನಿಲ', (೩) 'ತನುವಾತ'ವೆಂಬ ಮೂರು ವಾತವಲಯಗಳಿವೆ. ಎಲ್ಲ ಜೀವಿಗಳ ಪರಿವರ್ತನೆಗೂ ತ್ರಿಲೋಕವೇ ನೆಲೆ. ಇದನ್ನು ಯಾರೂ ಸೃಷ್ಟಿಸಿಲ್ಲ, ಇದಕ್ಕೆ ಆದಿ ಅಂತ್ಯಗಳಿಲ್ಲ; ಇದು ಅಕೃತ್ರಿಮವಾದುದು ಹಾಗೂ ನಿತ್ಯವಾದುದು. ಇದರಲ್ಲಿ 'ಷಡ್ ದ್ರವ್ಯ' ತುಂಬಿದೆ. ಈ ಲೋಕದ ಆಚೆಗಿರುವ ಭಾಗಕ್ಕೆ 'ಅಲೋಕ'ವೆನ್ನುವರು.

---

೧. ದೃಷ್ಟಿವಾದಾಂಗದಲ್ಲಿ (೧) ಪರಿಕರ್ಮ, (೨) ಸೂತ್ರ, (೩) ಪ್ರಥಮಾನುಯೋಗ (೪) ಪೂರ್ವಗತ, (೫) ಚೂಲಿಕೆ ಎಂದು ಐದು ಪ್ರಭೇದಗಳಿವೆ. ಶ್ರೀ ಎ. ಶಾಂತಿರಾಜ ಶಾಸ್ತ್ರಿಗಳು, ದ್ರ. ಸಂ. ಪು ೭೯.

೨. ಕರಣಾನುಯೋಗದಲ್ಲಿ ತ್ರಿಲೋಕ ವಿವರಣೆಯಲ್ಲದೆ ಚತುರ್ಗತಿಗಳನ್ನೂ, ಯುಗಪರಿವರ್ತನೆಯನ್ನೂ ವಿವರಿಸಿರುವರು. ಶ್ರೀ ಮಿರ್ಜಿ ಅಣ್ಣಾರಾಯರ ಜೈ. ಧ. ಪು. ೪೪೫.

೩. ಕ್ರಿ.ಶ. ೪೫೮ರಲ್ಲಿ ಸರ್ವನಂದಿಮುನಿ 'ಲೋಕವಿಭಾಗ'ವನ್ನು ಪ್ರಾಕೃತದಲ್ಲಿ ರಚಿಸಿದನು. ಜೈ. ಧ., ಪು. ೬೨೫.

೪. ಇದು ಪ್ರಾಕೃತ ಗ್ರಂಥ (ತ್ರಿಲೋಕಸಾರ). ಇದನ್ನು ಕ್ರಿ. ಶ. ೧೦ನೇ ಶತಮಾನದಲ್ಲಿದ್ದ ಸಿದ್ಧಾಂತ ಚಕ್ರವರ್ತಿ ನೇಮಿಚಂದ್ರಾಚಾರ್ಯರು ರಚಿಸಿದರು. ಜೈ. ಧ. ಪು. ೬೨೭.

೫. 'ತಿಲಿಯೋ ಪಣ್ಣತ್ತಿ' ಇದನ್ನು ಯತಿವೃಷಭಾಚಾರ್ಯರು ಕ್ರಿ. ಶ. ೪೭೮ರಲ್ಲಿ ಪ್ರಾಕೃತದಲ್ಲಿ ರಚಿಸಿರುವರೆಂದು ವಿದ್ವಾಂಸರು ಅಭಿಪ್ರಾಯಪಟ್ಟಿರುವರು. ಜೈ. ಧ. ಪು. ೬೨೬.

೬. 'ಜಂಬೂದ್ವೀಪ ಪಣ್ಣತ್ತಿ' ಇದನ್ನು ಸೌರಸೇನೀ ಪ್ರಾಕೃತದಲ್ಲಿ ಸಿರಿಪಉಮಣಂದಿ (ಶ್ರೀ ಪದ್ಮನಂದಿ) ಎಂಬಾತ ರಚಿಸಿದನು. ಕಾಲ ನಿರ್ಣಯವಾಗಿಲ್ಲ. ಜೈ. ಧ. ಪು. ೬೨೬.

೭. 'ಚಂದ್ರ ಪ್ರಜ್ಞಪ್ತಿ' ಕಿ. ಶ. ೯೯೩ರಲ್ಲಿ ಅಮಿತಗತಿ ಇದನ್ನು ಬರೆದನೆನ್ನುವರು. ಜೈ. ಧ. ಪು. ೬೪೭.

೮. ಲೋಕಾಲೋಕ ವಿಭಕ್ತೇರ್ಯುಗ ಪರಿವೃತ್ತೇಶ್ಚತುರ್ಗತೀನಾಂ ಚ |
ಆದರ್ಶಮಿವ ತಥಾಮತಿರವೈತಿ ಕರಣಾನುಯೋಗಂ ಚ || ೪೪ ||

[ಮತಿ ಅಂದರೆ ಸಮ್ಯಗ್ ಜ್ಞಾನವು. ಇದು ಕರಣಾನುಯೋಗವನ್ನು ತಿಳಿದುಕೊಂಡಿರುತ್ತದೆ. ಇದರಲ್ಲಿ ಲೋಕ-ಅಲೋಕಗಳ ವಿಭಾಗವನ್ನು ವಿವರಿಸಿದೆ. ಉತ್ಸರ್ಪಿಣಿಯ ಆರು, ಅವಸರ್ಪಿಣಿಯ ಆರು, ಈ ಕಾಲ ವಿಭಾಗದಲ್ಲಿ ಆಗುವ ಪರಿವರ್ತನಗಳನ್ನು ವರ್ಣಿಸಿದೆ. ನಾಲ್ಕೂ ಗತಿಗಳಲ್ಲಿ ಆಗುವ ಪರಿಭ್ರಮಣಗಳನ್ನೆಲ್ಲ ಕನ್ನಡಿಯಂತೆ ಸ್ಪಷ್ಟವಾಗಿ ಪ್ರತಿಬಿಂಬಿಸಿ ತೋರಿಸಿದೆ. ರ. ಕ. ಶ್ರಾ., ಪು. ೧೨೦ (ಸಂ. ಶ್ರೀ ಮಿರ್ಜಿ ಅಣ್ಣಾರಾಯರು)]

೯. ಶುಭಚಂದ್ರಾಚಾರ್ಯರ ಜ್ಞಾನಾರ್ಣವ, ಪೂರ್ವಭಾಗ, ಪು. ೧೭೧ (ಸಂ. ಶ್ರೀ ಆನಂದತೀರ್ಥಾಚಾರ್ಯ) ನೋಡಬಹುದು. ಅಥವ ನಾ. ಕು. ಚ., XXXII—ಪ. ೯೮, ೯೯ ನೋಡಬಹುದು.

೧೦. ಶ್ರೀ ಡಿ. ಪದ್ಮನಾಭ ಶರ್ಮ, ಜ್ವಾ. ಮಾ. ಮ., I-೯೭. ಎಲ್ಲ ತೀರ್ಥಂಕರ ಪುರಾಣಗಳೂ, ಚದುರ ಚಂದ್ರಮನ ಗೋಮಟೇಶ ಚರಿತ್ರೆ, ಬಾಹುಬಲಿಯ ನಾಗಕುಮಾರ ಚರಿತ್ರೆ ಪದ್ಮನಾಭನ ಪದ್ಮಾವತಿ ಮಹಾತ್ಮ್ಯ, ಡಿ. ಪದ್ಮನಾಭ ಶರ್ಮರ ಜ್ವಾಲಾಮಾಲಿನೀ ಮಹಾತ್ಮ್ಯ ಇವುಗಳನ್ನು ನೋಡಬಹುದು.

ಪಾದವನ್ನಗಲಿಸಿ ಸೊಂಟದ ಮೇಲೆ ಕೈಗಳನ್ನಿಟ್ಟುಕೊಂಡು ನಿಂತ ನರ್ತಕಿಯನ್ನು ಈ ಲೋಕಾಕಾರ ಹೋಲುವುದು[೧]. ಇದರ ಅಡಿಭಾಗ ಬೆತ್ತದ ಪೀಠದಂತೆಯೂ, ಮಧ್ಯಭಾಗ ಝಲ್ಲರಿಯಂತೆಯೂ ಮೇಲುಭಾಗ ಮೃದಂಗದಂತೆಯೂ ಇದೆ[೨]. ಅರೆಮದ್ದಳೆಯ ಮೇಲೆ ಇನ್ನೊಂದು ಮದ್ದಳೆಯನ್ನಿಟ್ಟಂತೆ ತ್ರಿಲೋಕಾಕಾರ ಕಾಣುವದು.[೩]

ಈ ತ್ರಿಲೋಕ ಅಡಿಯಿಂದ ತುದಿಗೆ ೧೪ 'ರಜ್ಜು' ಉದ್ದವಾಗಿದೆ. ಪೂರ್ವ ಪಶ್ಚಿಮ ಅಗಲ ತಳದಲ್ಲಿ ಏಳು ರಜ್ಜು. ಮೇಲೆ ಮೇಲೆ ಹೋದಂತೆ ಅಗಲ ಕಿರಿದಾಗುತ್ತ ಒಂದು ಏಳು ರಜ್ಜುವಿನ ಎತ್ತರದಲ್ಲಿ ಕೇವಲ ಒಂದೇ ರಜ್ಜು ಅಗಲವಾಗಿದೆ; ಮತ್ತೆ ಹೆಚ್ಚುತ್ತ ೧೧ ರಜ್ಜುವಿನ ಎತ್ತರದಲ್ಲಿ ೫ ರಜ್ಜು ಅಗಲವಾಗಿ ಪುನಃ ಕಿರಿದಾಗುತ್ತ ತುಟ್ಟ ತುದಿಯಲ್ಲಿ ಒಂದೇ ರಜ್ಜು ಅಗಲವಾಗುವುದು.

ಮರದ ನಡುವೆ ತಿರುಳಿರುವಂತೆ ಲೋಕದ ನಡುವೆ ತಳದಿಂದ ತುದಿಯ ತನಕ ಒಂದು ರಜ್ಜು ಅಗಲ, ಒಂದು ರಜ್ಜು ಉದ್ದ, ಹದಿನಾಲ್ಕು ರಜ್ಜು ಎತ್ತರವಿರುವ ತ್ರಸನಾಳಿಯಿದೆ. ಈ ತ್ರಸನಾಳಿಯಲ್ಲಿ ದ್ವೀಂದ್ರಿಯಾದಿ ತ್ರಸಜೀವಿಗಳೆಲ್ಲ (ಚಲಿಸುವ ಪ್ರಾಣಿಗಳು) ವಾಸಿಸುವುವು. **'ತ್ರಸಜೀವಿಗಳು'** ತ್ರಸನಾಡಿಯ ಹೊರಗೆ ಇರಲಾರವು. **'ಏಕೇಂದ್ರಿಯ ಜೀವಿಗಳು'** ಮಾತ್ರ ಇದರ ಒಳಗೂ ಹೊರಗೂ ಇರಬಲ್ಲವು.

'ಮಧ್ಯಲೋಕ' ಒಂದೇ ರಜ್ಜು ಅಗಲವುಳ್ಳ ನಡುವಿನ ಭಾಗದಲ್ಲಿರುವುದು. ಇದರ ಕೆಳಗೆ **'ಅಧೋಲೋಕ'**ವಿದೆ. ಮಧ್ಯಲೋಕದ ಮೇಲೆ **'ಊರ್ಧ್ವಲೋಕ'**ವಿದೆ.

ನರಕಲೋಕ: ಮಧ್ಯಲೋಕದ ಕೆಳಗೆ ಮಹಾಮೇರುವಿನ (ಮಂದರ) ಅಡಿಪಾಯ ಒಂದು ಸಾವಿರ ಯೋಜನ ಕೆಳಕ್ಕಿಳಿದಿದೆ. ಇದಕ್ಕೆ ಆಧಾರವಾಗಿ **'ರತ್ನಪ್ರಭಾಭೂಮಿ'**ಯಿದೆ. ಇದರಲ್ಲಿ ಒಂದರಕೆಳಗೊಂದರಂತೆ (೧) **'ಖರಭಾಗ'** (೨) **'ಪಂಕಭಾಗ'**, (೩) **'ಅಬ್ಬಹುಲ ಭಾಗ'**ಗಳಿವೆ. ಒಂದು ಎರಡನೆ ಭಾಗದಲ್ಲಿ **'ಭವನವಾಸಿ'** ಹಾಗೂ **'ವ್ಯಂತರ'** ದೇವತೆಗಳು ವಾಸಿಸುವರು. ಅಬ್ಬಹುಲ ಭಾಗ **'ಪ್ರಥಮನರಕ'**ವಾಗಿದೆ. ಇಲ್ಲಿಂದ ಕೆಳಗೆ ನಡುನಡುವೆ ಒಂದು ರಜ್ಜು ಆಕಾಶಾಂತರವನ್ನು ಬಿಟ್ಟು ಒಂದರಕೆಳಗೊಂದರಂತೆ (೨) **'ಶರ್ಕರಾಪ್ರಭೆ'** (೩) **'ವಾಲುಕಾಪ್ರಭೆ'**, (೪) **'ಪಂಕಪ್ರಭೆ'**, (೫) **'ಧೂಮಪ್ರಭೆ'**, (೬) **'ತಮಃಪ್ರಭೆ'**, (೭) **'ಮಹಾತಮಃಪ್ರಭೆ'**ಯೆಂಬ ದ್ವಿತೀಯಾದಿ ಆರು ನರಕ ಭೂಮಿಗಳಿವೆ. ಇವುಗಳಿಗೆ ಮೊದಲನೆ **'ರತ್ನಪ್ರಭೆ'**ಯನ್ನೂ ಸೇರಿಸಿಕೊಂಡರೆ ಒಟ್ಟು ಏಳು ನರಕ ಭೂಮಿಗಳಾಗುವುವು. ಈ ಹೆಸರುಗಳನ್ನು ಆಯಾ ನರಕದ ಬಣ್ಣಕ್ಕನುಸಾರವಾಗಿ ಇಟ್ಟಿದೆ. ಇವಕ್ಕೆ (೧) ಘರ್ಮ, (೨) ವಂಶಾ, (೩) ಮೇಘಾ, (೪) ಅಂಜನ, (೫) ಅರಿಷ್ಟಾ, (೬) ಮಘವಿ, (೭) ಮಾಘವೀ ಎಂಬ ಹೆಸರುಗಳೂ ಉಂಟು. ಪ್ರತಿ ನರಕವೂ ಒಂದರಕೆಳಗೊಂದರಂತೆ ಇರುವ ಘನೋದಧಿ, ಘನವಾತ, ತನುವಾತವೆಂಬ ಮೂರು ವಾತವಲಯಗಳ ಮೇಲೆ ನಿಂತಿವೆ. ಈ ವಾತಾವಲಯಗಳು ಪ್ರತಿ

೧. ಮಂಗರಸ, ನೇ. ಜಿ. ಸಂ., I-೪೩.
೨. ರತ್ನಾಕರ, ತ್ರಿ. ಶ. ಪ. ೧೧.
೩. ಬಾಹುಬಲಿ, ನಾ. ಕು. ಚ. II-೨.

ಯೊಂದೂ ಇಪ್ಪತ್ತು ಸಾವಿರ ಯೋಜನ ದಪ್ಪವಾಗಿದೆ. ಅವುಗಳ ಕೆಳಗೆ ಆಕಾಶವಿದೆ.

ಈ ಏಳು ನರಕಗಳಲ್ಲಿ ಒಟ್ಟು ೮೪ ಲಕ್ಷ 'ನರಕ ಬಿಲ'ವಿವೆ (೧) ರತ್ನಪ್ರಭೆಯಲ್ಲಿ ಮುವತ್ತು ಲಕ್ಷ, (೨) ಶರ್ಕರಾಪ್ರಭೆಯಲ್ಲಿ ಇಪ್ಪತ್ತೈದು ಲಕ್ಷ, (೩) ವಾಲುಕಾಪ್ರಭೆಯಲ್ಲಿ ಹದಿನೈದು ಲಕ್ಷ, (೪) ಪಂಕಪ್ರಭೆಯಲ್ಲಿ ಹತ್ತು ಲಕ್ಷ, (೫) ಧೂಮಪ್ರಭೆಯಲ್ಲಿ ಮೂರು ಲಕ್ಷ, (೬) ತಮಃಪ್ರಭೆಯಲ್ಲಿ ಐದು ಕಡಿಮೆ ಒಂದು ಲಕ್ಷ, (೭) ಮಹಾತಮಃ ಪ್ರಭೆಯಲ್ಲಿ ಕೇವಲ ಐದು—ಈ ರೀತಿ ಬಿಲಗಳಿವೆ.

[೩೦ ಲ + ೨೫ ಲ + ೧೫ ಲ + ೧೦ ಲ + ೩ ಲ + ೧ ಲ − ೫ + ೫ = ೮೪ ಲಕ್ಷ]

ಈ ನರಕಗಳೇಳರಲ್ಲೂ ಸೇರಿ ಒಟ್ಟು ೪೯ 'ಪಟಲ'ಗಳಿವೆ. ಯಾವ ನರಕ ಬಿಲಗಳ ಮೇಲ್ಭಾಗವು ಒಂದೇ ಮಟ್ಟಕ್ಕೆ [ಸಮತಲ] ಬರುವುವೋ ಆ ಬಿಲಗಳೆಲ್ಲ ಒಂದು ಪಟಲವೆನಿಸುವುವು. ಪ್ರತಿಯೊಂದು ನರಕದಲ್ಲೂ ಮೇಲೆ ಮತ್ತು ಕೆಳಗೆ ಒಂದೊಂದು ಸಾವಿರ ಯೋಜನ ಬಿಟ್ಟು ನಡುವೆ ಪಟಲಗಳಿರುತ್ತವೆ. ಈ ಪಟಲಗಳಿಗೆ **'ಇಂದ್ರಕ'**, **'ಪ್ರಸ್ತಾರ'**, **'ಅಂತರ್ಭೂಮಿ'** ಎಂಬ ಹೆಸರುಗಳೂ ಇವೆ. ಪಟಲದಲ್ಲಿ (೧) ಇಂದ್ರಕ, (೨) ಶ್ರೇಣಿಬದ್ಧ, (೩) ಪ್ರಕೀರ್ಣಕ ಎಂದು ಮೂರು ಬಗೆ ಬಿಲಗಳಿರುತ್ತವೆ. ಮಧ್ಯದ ಮುಖ್ಯ ಬಿಲಗಳನ್ನು **'ಇಂದ್ರಕ'** ಎನ್ನುವರು. ಇಂದ್ರಕದ ಎಂಟೂ ದಿಕ್ಕಿನಲ್ಲಿರುವವನ್ನು 'ಶ್ರೇಣೀಬದ್ಧ'ವೆನ್ನುವರು. ಇವುಗಳ ಸುತ್ತ ಹೂವರಳಿದಂತೆ 'ಪ್ರಕೀರ್ಣಕ'ಗಳಿವೆ.

ಈ ನರಕಗಳಲ್ಲಿ ನಾರಕಿಗಳು ವಾಸಿಸುವರು. ಒಂದನೆ ನರಕದಲ್ಲಿ ಪಟಲಾನುಕ್ರಮದಂತೆ ಮೂರು ಮೊಳದಿಂದ ಪ್ರಾರಂಭವಾಗಿ ಏಳು ಬಿಲ್ಲು ಮತ್ತು ಮೂರುವರೆ ಮೊಳದ ತನಕ ನರಕವಾಸಿಗಳ ದೇಹಪ್ರಮಾಣವಿರುವುದು. ಕೆಳಕೆಳಗಿನ ನರಕದಲ್ಲಿ ದೇಹಪ್ರಮಾಣ ಹೆಚ್ಚುತ್ತ ಹೋಗುವುದು; **'ಮಹಾತಮಃಪ್ರಭೆ'**ಯಲ್ಲಿ ಅತಿ ಹೆಚ್ಚೆಂದರೆ ಐನೂರು ಬಿಲ್ಲು ಪ್ರಮಾಣವಿರುವ **'ನಾರಕಿ'**ಗಳುಂಟು.

ನಾರಕಿಗಳ **'ಲೇಶ್ಯೆ'**, **'ದೇಹ'**, **'ಪರಿಣಾಮ'** ಇವೆಲ್ಲ ಸದಾ ಅಶುಭವಾಗಿರುತ್ತವೆ. ಇವರಲ್ಲಿ ಯಾವಾಗಲೂ 'ಅಶುಭಕರ್ಮ' ಉದಯವಾಗುತ್ತಿರುತ್ತದೆ. (೧) ಸಹಜ, (೨) ಶಾರೀರ, (೩) ಮಾನಸ, (೪) ಆಗಂತುಕವೆಂದು ನಾಲ್ಕು ಬಗೆಯಾದ ಸಂಕಷ್ಟವನ್ನು ನಾರಕಿಗಳು ಅನುಭವಿಸುವರು. ಇವರಿಗೆ **'ವೈಕ್ರಿಯಕದೇಹ'**ವಿರುವುದರಿಂದ ಮನಸ್ಸಿಗೆ ಬಂದಂತೆ ರೂಪಗಳನ್ನು ಧರಿಸಬಹುದು. ಆದರೆ ಆ ರೂಪಗಳಿಂದೇನೂ ಅವರ ದುಃಖ ಎಳ್ಳನಿತೂ ಕಡಿಮೆಯಾಗುವಂತಿಲ್ಲ. ನಾರಕಿಗಳು ಪರಸ್ಪರ ಕಾದಾಡಿ ಕಚ್ಚಾಡಿ ಮೊದಲೇ ಇರುವ ದುಃಖವನ್ನು ಹೆಚ್ಚಿಸಿಕೊಳ್ಳುತ್ತಾ ಹೋಗುವರು. ಇದರ ಮೇಲೆ ಮೊದಲಿನ ಮೂರು ನರಕಗಳಿಗೆ ಆಗಾಗ ನೀಚ ಪರಿಣಾಮದ ದೇವತೆಗಳು ಬೇರೆ ಹೋಗಿ ನರಳುತ್ತಿರುವ ನಾರಕಿಗಳಿದಿರು ತಮ್ಮ ಪೂರ್ವಭವದ ವೈರಕಾರಣವನ್ನು ಹೇಳಿ ಅವರನ್ನು ಹಿಂಸಿಸುವರು! ಅಸುರಕುಮಾರ ದೇವತೆಗಳು ಪರರನ್ನು ಪೀಡಿಸಿ ಆನಂದಪಡುವ ಸ್ವಭಾವದವರು. ಇವರೆ ಆಗಾಗ ಮೊದಲಿನ ಮೂರು ನರಕಗಳಿಗೆ ಹೋಗಿಬರುವರು!

ನಾರಕಿಗಳು ಆಯುಷ್ಯ ನರಕದಿಂದ ನರಕಕ್ಕೂ ಪಟಲದಿಂದ ಪಟಲಕ್ಕೂ ಏರುತ್ತಾ ಹೋಗು

ವುದು. ಮೊದಲನೆ ನರಕದ ಮೊದಲನೆ ಪಟಲದಲ್ಲಿ ಹತ್ತು ಸಾವಿರದಿಂದ ತೊಂಬತ್ತು ಸಾವಿರ ವರುಷದವರೆಗೂ ಆಯುಷ್ಯವುಂಟು. ಅದೇ ಏಳನೇ ನರಕದಲ್ಲಿ ಅತಿ ಕಡಿಮೆಯೆಂದರೆ ೨೨ ಸಾಗರ[1], ಅತಿ ಹೆಚ್ಚೆಂದರೆ ೩೩ ಸಾಗರ ವರ್ಷ ಅಲ್ಲಿಯ ನಾರಕಿಗಳು ನರಳಿಕೊಂಡು ಬದುಕುವರು! ಐದನೆ ನರಕದ ಮುಕ್ಕಾಲು ಭಾಗದವರೆಗೆ ಕಲ್ಪನೆಗೆ ಮೀರಿದ ಉಷ್ಣವಾದರೆ ಅಲ್ಲಿಂದ ಮುಂದೆ ಮುಂದೆ ಶೀತ ಹೆಚ್ಚುತ್ತಾ ಹೋಗಿ ಪರಮಾವಧಿಯನ್ನು ಮುಟ್ಟುವುದು.

ನಾರಕಿಗಳ ಪುನರುದ್ಧಾರ: "ಆರನೆ ನರಕದಿಂದ ಪಾರಾಗಿ ಬಂದವರು ಅಣುವ್ರತವನ್ನು ಕೈಕೊಂಡರೂ ಕೈಕೊಳ್ಳಬಹುದು. ಮಹಾವ್ರತವನ್ನು ಸ್ವೀಕರಿಸಲು ಅರ್ಹರಾಗರು. ಐದನೇ ನರಕದಿಂದ ಬಂದವರು 'ಮಹಾವ್ರತ' ಧರಿಸಿದರೂ 'ತದ್ಭವ ಮೋಕ್ಷಗಾಮಿ'ಗಳಾಗುವುದಿಲ್ಲ. ನಾಲ್ಕನೇ ನರಕದಿಂದ ಬಂದವರು 'ಚರಮದೇಹಿ'ಗಳಾದರೂ ತೀರ್ಥಂಕರರಾಗುವುದಿಲ್ಲ. ಉಳಿದ ನರಕಗಳಿಂದ ಬಂದವರು ತೀರ್ಥಂಕರರಾಗಬಹುದು. ಇವೇ ನರಕಗಳಿಂದ ಬಂದವರು ವಾಸುದೇವ ಪ್ರತಿವಾಸುದೇವ ಬಲದೇವ ಚಕ್ರವರ್ತಿಗಳಾಗುವುದಿಲ್ಲ....ತೀರ್ಥಂಕರ ಪ್ರಕೃತಿಯವರು ಪೂರ್ವಭವಗಳಲ್ಲಿ ಶುಭಕರ್ಮವನ್ನು ಸಂಚಯಮಾಡಿಕೊಂಡಿರುತ್ತಾರೆ."

ನಿಗೋದ: ಮಹಾತಮಃಪ್ರಭೆಯ [ಏಳನೇ ನರಕ ಭೂಮಿ] ಕೆಳಗೆ ಒಂದು ರಜ್ಜು ಪರಿಮಿತವಾದ ಆಕಾಶಪ್ರದೇಶವು **'ನಿಗೋದ'** ಜೀವಿಗಳು ಹುಟ್ಟುವ ಸ್ಥಾನವಾಗಿದೆ. ಇದು ನರಕಕ್ಕಿಂತಲೂ ದುಃಖಿತಮವಾದ ಪ್ರದೇಶ. ಇಲ್ಲಿಯ ಜೀವಿಗಳಲ್ಲಿ **'ಇತರ ನಿಗೋದ'**, **'ನಿತ್ಯ ನಿಗೋದ'** ಎಂದು ಎರಡು ಬಗೆ. ಇತರ ನಿಗೋದ ಜೀವಿಗಳು ಅಲ್ಲಿಂದ ಪಾರಾಗಿ ಬರಬಹುದು. ನಿತ್ಯ ನಿಗೋದ ಜೀವಿಗಳು ಬಹುಮಟ್ಟಿಗೆ ಪಾರಾಗಲಾರವು.[2]

ಮಧ್ಯಲೋಕ:—ಮಧ್ಯಲೋಕದಲ್ಲಿ ಅಸಂಖ್ಯಾತ ದ್ವೀಪಗಳೂ ಸಮುದ್ರಗಳೂ ಇವೆ. ಇದು ಒಂದು ಲಕ್ಷ ಯೋಜನ ವ್ಯಾಸವುಳ್ಳದಾಗಿದ್ದು ಸೂರ್ಯಮಂಡಳದಂತೆ ಗೋಳಾಕಾರವಾಗಿದೆ. ಇದರ ನಟ್ಟನಡುವೆ **'ಮಂದರ ಪರ್ವತ'**ವಿದೆ **'ಜಂಬೂದ್ವೀಪ'**ದ ಸುತ್ತಲೂ ಎರಡು ಲಕ್ಷ ಯೋಜನ ಅಗಲವಾದ ಲವಣ ಸಮುದ್ರವಿದೆ. ಲವಣ ಸಮುದ್ರವನ್ನು ಬಳಸಿಕೊಂಡು ನಾಲ್ಕುಲಕ್ಷ ಯೋಜನ ಅಗಲವಾದ **'ಧಾತಕೀಖಂಡ'**ವೆಂಬ ದ್ವೀಪವಿದೆ. ಇದನ್ನು ಎಂಟು ಲಕ್ಷ ಯೋಜನ ಅಗಲವಾದ **'ಕಾಲೋದಧಿ'** ಸಮುದ್ರ ಸುತ್ತುಗಟ್ಟಿದೆ. ಕಾಲೋದಧಿ ಸಮುದ್ರವನ್ನು ಸುತ್ತುವರಿದು ಹದಿನಾರು ಲಕ್ಷ ಯೋಜನ ಅಗಲವಾದ **'ಪುಷ್ಕರದ್ವೀಪ'**ವಿದೆ. ಇದರ ನಟ್ಟನಡುವೆ **'ಮಾನುಷೋತ್ತರ'** ಪರ್ವತವಿದ್ದು ಪುಷ್ಕರದ್ವೀಪದಲ್ಲಿ ಎರಡು ಭಾಗಗಳಿವೆ. ಮೊದಲಿನ ಅರ್ಧ ಭಾಗದಲ್ಲಿ ಜಂಬೂದ್ವೀಪದ ಎರಡರಷ್ಟು ಅಥವ ಧಾತಕೀಖಂಡದಷ್ಟು ಸರ್ವ ಪ್ರಕಾರದ ರಚನೆಯೂ ಇರುವುದು. ಜಂಬೂದ್ವೀಪ, ಲವಣಸಮುದ್ರ, ಧಾತಕೀಖಂಡ, ಕಾಳೋದಧಿ ಸಮುದ್ರ, ಪುಷ್ಕರಾರ್ಧ, (ಮಾನುಷೋತ್ತರದ ವರೆಗೆ) ಇವಕ್ಕೆ 'ಮನುಷ್ಯ

---

೧. ಸಾಗರೋಪಮ ಕಾಲವೆಂದು ಉಪಮಾ ಪ್ರಮಾಣ ಸಂಜ್ಞೆ. ಸಾಮಾನ್ಯವಾಗಿ ಲವಣ ಸಮುದ್ರದಲ್ಲಿರುವ ನೀರಿನ ಹನಿಗಳಷ್ಟು ಸಾಗರೋಪಮ ಕಾಲವೆಂದು ಹೇಳಬಹುದು. ದ್ರ. ಸಂ., ಪು. ೬೨ (ಸಂ. ಶ್ರೀ ಎ. ಶಾಂತಿರಾಜ ಶಾಸ್ತ್ರಿಗಳು).

೨. ಶ್ರೀ ಮಿರ್ಜಿ ಅಣ್ಣಾರಾಯರು, ಜೈ. ಧ., ಪು. ೪೪೮-೪೯; ೧ ಗೋ. ಸಾ. ಜೀ. ಕಾಂ, ಪ. ೧೯೬.

ಲೋಕ'ವೆನ್ನುವರು; ಎರಡೂವರೆ ದ್ವೀಪ ಎಂದೂ ಕರೆಯುವರು. ಜಲಚರಗಳು ಲವಣ ಸಮುದ್ರ, ಕಾಳೋದಧಿ ಮತ್ತು 'ಸ್ವಯಂಭೂರಮಣ' ಸಮುದ್ರಗಳಲ್ಲಿ ಮಾತ್ರ ಜೀವಿಸುತ್ತವೆ. ಎಂಟನೆ ದ್ವೀಪಕ್ಕೆ **'ನಂದೀಶ್ವರ'**ವೆನ್ನುವರು. ಎಲ್ಲಕ್ಕಿಂತ ಕೊನೆಯ ಸಮುದ್ರ ಸ್ವಯಂಭೂರಮಣ.

ಜಂಬೂದ್ವೀಪ: ದ್ವೀಪಗಳಲ್ಲಿ ನಟ್ಟನಡುವೆ ಇದೆ ಜಂಬೂದ್ವೀಪ. ಪೂರ್ವ ಪಶ್ಚಿಮವಾಗಿ ಹಬ್ಬಿರುವ ಆರು ಕುಲಪರ್ವತಗಳು ಜಂಬೂದ್ವೀಪವನ್ನು ಏಳು ಕ್ಷೇತ್ರಗಳಾಗಿ ವಿಭಾಗಿಸಿವೆ. (೧) **ಹಿಮವಂತ,** (೨) **ಮಹಾ ಹಿಮವಂತ,** (೩) ನಿಷಧ, (೪) ನೀಲ, (೫) **ರುಕ್ಮಿ,** (೬) ಶಿಖರಿ ಈ ಕುಲಪರ್ವತಗಳು ಜಂಬೂದ್ವೀಪದಲ್ಲಿ ದಕ್ಷಿಣದಿಂದ ಉತ್ತರಕ್ಕೆ ಹೋಗುತ್ತ ಕ್ರಮವಾಗಿ ಪೂರ್ವ ಪಶ್ಚಿಮವಾಗಿ ಹಬ್ಬಿವೆ. ಇವುಗಳಿಂದ ಆಗಿರುವ ಸಪ್ತ ಕ್ಷೇತ್ರಗಳು ಕ್ರಮವಾಗಿ (೧) **ಭರತ,** (೨) **ಹೈಮವತ,** (೩) **ಹರಿ,** (೪) ವಿದೇಹ, (೫) **ರಮ್ಯಕ,** (೬) **ಹೈರಣ್ಯ,** (೭) ಐರಾವತ. ಮಂದರ ಪರ್ವತವಿರುವುದು ವಿದೇಹ ಕ್ಷೇತ್ರದ ನಡುವೆ.

ಈ ಕುಲಪರ್ವತಗಳ ಪಾರ್ಶ್ವಭೂಮಿ ನಾನಾ ರತ್ನಗಳಿಂದ ತುಂಬಿದೆ. ಹಿಮವಂತ ಚಿನ್ನದ ಪರ್ವತ, ಮಹಾಹಿಮವಂತ ಬೆಳ್ಳಿಯ ಪರ್ವತ, ನಿಷಧಪರ್ವತ ಚಂಬೊನ್ನಿನಿಂದ ನಿರ್ಮಾಣವಾಗಿದೆ. ನೀಲಪರ್ವತದ ತುಂಬ ವೈಢೂರ್ಯ ತುಂಬಿವೆ. ರುಕ್ಮಿ ಬೆಳ್ಳಿಯಿಂದಾಗಿದೆ. ಶಿಖರಿ ಚಿನ್ನದಿಂದಾದುದು.

ಕುಲಪರ್ವತಗಳ ಮೇಲೆ ಕ್ರಮವಾಗಿ (೧) **ಪದ್ಮ,** (೨) **ಮಹಾಪದ್ಮ,** (೩) **ತಿಗಂಛ,** (೪) **ಕೇಸರಿ,** (೫) **ಮಹಾ ಪುಂಡರೀಕ,** (೬) **ಪುಂಡರೀಕ** ಎಂಬ ಸರೋವರಗಳಿವೆ. ಇವೂ ಪರ್ವತಗಳಂತೆ ಪೂರ್ವ ಪಶ್ಚಿಮವಾಗಿ ಹಬ್ಬಿವೆ. ಪ್ರತಿಯೊಂದು ಸರೋವರದಲ್ಲೂ ಒಂದೊಂದು ಮಹಾ ಕಮಲವಿದೆ. ಆ ಕಮಲಗಳ ಮೇಲೆ ಕ್ರಮವಾಗಿ ಶ್ರೀ, ಹ್ರೀ, ಧೃತಿ, ಕೀರ್ತಿ, ಬುದ್ಧಿ, ಲಕ್ಷ್ಮಿ ಎಂಬ ದೇವಿಯರು ನೆಲೆಸಿರುವರು. ಇವರು ಒಂದು 'ಪಲ್ಯಕಾಲ' ಬದುಕುವರು. ಇವರ ಬಳಿ ಸಭಾಸದ ಸಾಮಾನಿಕ ಎಂಬ ದೇವತೆಗಳು ಬೇರೆ ಬೇರೆ ಕಮಲದಲ್ಲಿ ನೆಲೆಸಿರುವರು.

ಭರತಾದಿ ಕ್ಷೇತ್ರಗಳಲ್ಲಿ ಕ್ರಮವಾಗಿ ಒಂದೊಂದು ಕ್ಷೇತ್ರಕ್ಕೆ ಎರಡರಂತೆ (೧) **ಗಂಗೆ-ಸಿಂಧು,** (೨) **ರೋಹಿತ-ರೋಹಿತಾಸ್ಯೆ,** (೩) **ಹರಿತ್-ಹರಿಕಾಂತೆ,** (೪) ಸೀತೆ-ಸೀತೋದೆ, (೫) **ನಾರಿ-ನರಕಾಂತೆ,** (೬) **ಸುವರ್ಣಕೂಲೆ-ರೂಪ್ಯಕೂಲೆ,** (೭) **ರಕ್ತೆ-ರಕ್ತೋದೆ** ಎಂಬ ಹದಿನಾಲ್ಕು ನದಿಗಳು ಹರಿಯುತ್ತಿವೆ. ಜೋಡುಹೊಳೆಯಲ್ಲಿ ಮೊದಲನೆಯದು ಆಯಾ ಕ್ಷೇತ್ರದ ಪೂರ್ವಸಾಗರಕ್ಕೂ ಎರಡನೆಯದು ಪಶ್ಚಿಮ ಸಾಗರಕ್ಕೂ ಸೇರುವುದು. ಪ್ರತಿ ಕ್ಷೇತ್ರದ ಪೂರ್ವದಲ್ಲೂ ಪಶ್ಚಿಮದಲ್ಲೂ ಸಮುದ್ರವಿದೆ.

ಭರತಕ್ಷೇತ್ರ: ಹಿಮವತ್ ಪರ್ವತದಿಂದ ದಕ್ಷಿಣಕ್ಕೆ ಲವಣ ಸಮುದ್ರದ ತನಕ 'ಭರತ ಕ್ಷೇತ್ರ' ವ್ಯಾಪಿಸಿದೆ. ಇದರ ಮಧ್ಯಭಾಗದಲ್ಲಿ **'ವಿಜಯಾರ್ಧ-ಪರ್ವತ'**ಪೂರ್ವಪಶ್ಚಿಮ ಸಮುದ್ರಗಳ ವರೆಗೆ ಹಬ್ಬಿರುವುದರಿಂದ ಭರತಕ್ಷೇತ್ರ 'ಉತ್ತರಭರತ,' 'ದಕ್ಷಿಣಭರತವೆಂದು' ವಿಭಾಗಿಸಲ್ಪಟ್ಟಿದೆ. ಹಿಮವತ್ ಪರ್ವತದಲ್ಲಿ ಜನಿಸಿದ, ಮಹಾಸಿಂಧು ಉತ್ತರದಿಂದ ದಕ್ಷಿಣಕ್ಕೆ

ಹರಿದು ಪಶ್ಚಿಮ ಸಮುದ್ರವನ್ನು ಸೇರಿದರೆ ಮಹಾಗಂಗಾ ಉತ್ತರದಿಂದ ದಕ್ಷಿಣಕ್ಕೆ ಹರಿದು ಪೂರ್ವಸಮುದ್ರವನ್ನು ಸೇರುತ್ತದೆ. ಇದರಿಂದ ವಿಜಯಾರ್ಧದ ಉತ್ತರದಲ್ಲಿ ಮೂರು ಖಂಡಗಳೂ ದಕ್ಷಿಣದಲ್ಲಿ ಮೂರು ಖಂಡಗಳೂ ಸಹಜವಾಗೇರ್ಪಟ್ಟಿವೆ. ದಕ್ಷಿಣಭರತದ ಮೂರು ಖಂಡಗಳಲ್ಲಿ ನಡುವಣ ಖಂಡವೇ **'ಆರ್ಯಖಂಡ'**. ಇದೇ ನಮ್ಮ ನಿವಾಸ. ಭರತಖಂಡದ ಉಳಿದ ಐದು ಖಂಡಗಳೂ ಮ್ಲೇಚ್ಛರು ವಾಸಿಸುವ **'ಮ್ಲೇಚ್ಛ ಖಂಡ'**ಗಳು. ಈ ಆರೂ ಖಂಡಗಳನ್ನು ದಿಗ್ವಿಜಯದಲ್ಲಿ ಗೆದ್ದಾತ **ಚಕ್ರವರ್ತಿ**ಯೆನಿಸುವನು. ಉತ್ತರದ ಮೂರು ಖಂಡಗಳನ್ನು ಜಯಿಸದೆ ಕೇವಲ ದಕ್ಷಿಣಭರತವನ್ನು (ಮೂರು ಖಂಡ) ಜಯಿಸಿದರೆ **'ಅರ್ಧಚಕ್ರಿ'**ಯೆನಿಸುವನು. ಇದರಿಂದಲೇ ಈ ಪರ್ವತಕ್ಕೆ 'ವಿಜಯಾರ್ಧ' ಎಂದು ಕರೆದಿರುವುದು. ಉತ್ತರಭರತದ ಹಿಮವತ್ ಪರ್ವತದ ಮಧ್ಯಮಕೂಟಕ್ಕೆ ದಕ್ಷಿಣದಲ್ಲಿ ವೃಷಭಾದ್ರಿಯಿದೆ. ದಕ್ಷಿಣಭರತದ ಗಂಗಾತೀರದ ಹತ್ತಿರ **ಕೈಲಾಸಪರ್ವತ**ವಿದೆ.

ಹೈಮವತಾದಿ ಕ್ಷೇತ್ರಗಳು: (೨) ಹೈಮವತ ಕ್ಷೇತ್ರದಲ್ಲಿರುವ ವೃತ್ತಾಕಾರವಾದ ಪರ್ವತಕ್ಕೆ 'ವೃತ್ತವೇದಾಢ್ಯ' ಎನ್ನುವರು. ಹಿಮವಂತದ ಪದ್ಮಸರೋವರದಿಂದ ಹೊರಟ ರೋಹಿತಾಶ್ಯೆಯೆಂಬ ನದಿ ವೃತ್ತವೇದಾಢ್ಯ ಪರ್ವತದ ದಕ್ಷಿಣದ ಅರ್ಧ ಭಾಗವನ್ನು ಬಳಸಿ ಪಶ್ಚಿಮ ಸಮುದ್ರವನ್ನು ಸೇರುತ್ತದೆ. ಈ ಕ್ಷೇತ್ರದ ಉತ್ತರಕ್ಕಿರುವ ಮಹಾಹಿಮವಂತ ಪರ್ವತದಲ್ಲಿ ಜನಿಸಿದ ಮತ್ತೊಂದು ನದಿ ವೃತ್ತ ವೇದಾಢ್ಯ ಪರ್ವತದ ಉತ್ತರಾರ್ಧವನ್ನು ಸುತ್ತಿ ಪೂರ್ವ ಸಮುದ್ರಕ್ಕೆ ಹೋಗುತ್ತದೆ. ಈ ಕ್ಷೇತ್ರದಲ್ಲಿ **'ಜಘನ್ಯ ಭೋಗಭೂಮಿ'**ಯಿದೆ.

(೩) ಹರಿಕ್ಷೇತ್ರದಲ್ಲೂ ಹೈಮವತದಂತೆ ನದೀ, ಪರ್ವತಗಳುಂಟು. ಇಲ್ಲಿ **'ಮಧ್ಯಮ ಭೋಗಭೂಮಿ'**ಯಿದೆ.

(೪) ವಿದೇಹ ಕ್ಷೇತ್ರದಲ್ಲಿ ಗೋಳಾಕಾರವಾಗಿರುವ ಪರ್ವತಕ್ಕೆ **'ಸುಮೇರು'** ಎನ್ನುತ್ತಾರೆ. ಸುಮೇರುವಿನ ಉತ್ತರ ದಕ್ಷಿಣ ಭಾಗಗಳಲ್ಲಿ ಉತ್ಕೃಷ್ಟ ಭೋಗಭೂಮಿಗಳಿವೆ. ಇದಕ್ಕೆ ಉತ್ತರಕುರು ಮತ್ತು ದಕ್ಷಿಣಕುರು ಎನ್ನುವರು. ಪೂರ್ವದಲ್ಲೂ ಪಶ್ಚಿಮದಲ್ಲೂ ಕರ್ಮಭೂಮಿಗಳಿವೆ. ವಿದೇಹದ ಸೀತಾ ಸೀತೋದಾ ನದಿಗಳು ಸುಮೇರುವನ್ನು ಬಳಸಿ ಕ್ರಮವಾಗಿ ಪೂರ್ವ ಸಮುದ್ರಕ್ಕೂ ಪಶ್ಚಿಮ ಸಮುದ್ರಕ್ಕೂ ಬೀಳುವುವು. ವಿದೇಹದಲ್ಲಿರುವ ಮುವತ್ತೆರಡು ಕರ್ಮಭೂಮಿಗಳಲ್ಲಿ[೧] ಒಂದೊಂದರಲ್ಲೂ ಒಂದೊಂದು ವಿಜಯಾರ್ಧ ಪರ್ವತವೂ ಎರಡು ಉಪನದಿಗಳೂ ಇರುವುವು. ಇಲ್ಲಿಯ ಮೇರುವಿನ ಉತ್ತರಕ್ಕೆ **'ಉತ್ತರಕುರು'** ದಕ್ಷಿಣಕ್ಕೆ **'ದಕ್ಷಿಣಕುರು'** ಎಂಬ ಭೋಗಭೂಮಿಗಳಿವೆ.

(೫) **ರಮ್ಯಕ್ಷೇತ್ರ** ಹಾಗೂ (೬) **ಹೈರಣ್ಯವತಕ್ಷೇತ್ರ** ಇವುಗಳಲ್ಲಿ ಪ್ರತಿಯೊಂದರಲ್ಲೂ ಒಂದೊಂದು ಪರ್ವತವೂ ಎರಡೆರಡು ಮಹಾನದಿಗಳೂ ಉಂಟು. ಈ ಕ್ಷೇತ್ರಗಳಲ್ಲಿ ಜಘನ್ಯ ಭೋಗಭೂಮಿಯಾಗಿ ಹೈರಣ್ಯಕ್ಷೇತ್ರವೂ, ಮಧ್ಯಮಭೋಗ್ಯ ಭೂಮಿಯಾಗಿ[೨] ರಮ್ಯಕ ಕ್ಷೇತ್ರವೂ ಇವೆ.

---

೧. ಕರ್ಮಕ್ಷಯಕ್ಕೆ ಅನುಕೂಲವಾದ ಹಾಗೂ ಅಸಿಮಸಿ ಕೃಷ್ಯಾದಿಷಟ್ಕರ್ಮೋಪ ಜೀವನಕ್ಕೆ ಸಹಕಾರಿಯಾಗಿರುವ ಪ್ರದೇಶಗಳಿಗೆ 'ಕರ್ಮಭೂಮಿ'ಯೆನ್ನುವರು.

೨. ಭೋಗಭೂಮಿಯಲ್ಲಿ ಕರ್ಮಕ್ಷಯ ಸಾಧ್ಯವಿಲ್ಲ; ಜೊತೆಗೆ ಜೀವನೋಪಾಯಕ್ಕೆ ಅಲ್ಲಿ ದುಡಿಯಬೇಕಾಗೂ ಇಲ್ಲ.

ಭರತ ಐರಾವತಕ್ಷೇತ್ರಗಳಲ್ಲಿ **'ಉತ್ಸರ್ಪಿಣಿ'** ಮತ್ತು **'ಅವಸರ್ಪಿಣಿ'**ಗಳಿಗನುಗುಣವಾಗಿ ಜೀವರ ಶಕ್ತಿ, ಶರೀರ, ಆಯುಸ್ಸು, ಸುಖ ಇವುಗಳಲ್ಲಿ ಏರಿಳಿತವಾಗುವುದು. ವಿವರಕ್ಕೆ ಕಾಲ ವಿಭಾಗದಲ್ಲಿ ನೋಡಬೇಕು.

ಧಾತಕೀಖಂಡ: ಇದು ಲವಣ ಸಮುದ್ರವನ್ನು ಬಳಸಿಕೊಂಡು ನಾಲ್ಕು ಲಕ್ಷಯೋಜನ ಅಗಲವಾಗಿದೆ. ಜಂಬೂದ್ವೀಪ ಗೋಳಾಕಾರವಾಗಿರುವುದರಿಂದ ಅಲ್ಲಿಯ ಪರ್ವತಗಳು ಪೂರ್ವ ಪಶ್ಚಿಮವಾಗಿ ಹಬ್ಬಲು ಸಾಧ್ಯ. ಆದರೆ ಧಾತಕೀಖಂಡ ಬಳೆಯಂತೆ ಇರುವುದರಿಂದ, ಹಲ್ಲುಗಳಿಂದ ವಿಭಕ್ತವಾದ ಚಕ್ರದಂತೆ ಇದೂ ಪರ್ವತಗಳಿಂದ ವಿಭಕ್ತವಾಗಿದೆ. ಈ ಪರ್ವತಗಳ ಮಧ್ಯಪ್ರದೇಶ ಒಂದೊಂದು ಕ್ಷೇತ್ರವೆನಿಸುವುದು. ಈ ಖಂಡದಲ್ಲಿ ೧೨ ಪರ್ವತಗಳಿವೆ, ಎರಡು ಮೇರುಗಳಿವೆ, ಹದಿನಾಲ್ಕು ಕ್ಷೇತ್ರಗಳಿವೆ. (ಅಂದರೆ ಎಲ್ಲ ರಚನೆಯಲ್ಲೂ ಜಂಬೂದ್ವೀಪದ ಎರಡರಷ್ಟು). ಈ ದ್ವೀಪದಲ್ಲಿ ಒಟ್ಟು ೬೮ ಕರ್ಮ ಭೂಮಿಗಳೂ ೧೨ ಭೋಗ ಭೂಮಿಗಳೂ ಇರುವುವು.

ಕರ್ಮಭೂಮಿ–ಭೋಗಭೂಮಿ: ಒಟ್ಟು ಕರ್ಮಭೂಮಿಗಳು ೧೭೦. ಜಂಬೂದ್ವೀಪದ ಭರತ, ಐರಾವತ ಕ್ಷೇತ್ರಗಳಲ್ಲಿ ೨ ಕರ್ಮಭೂಮಿಗಳು; ವಿದೇಹದಲ್ಲಿ ೩೨; ಧಾತಕೀಖಂಡದಲ್ಲಿ ೬೮; ಪುಷ್ಕರಾರ್ಧದಲ್ಲಿ ೬೮ (೨+೩೨+೬೮+೬೮=೧೭೦) ವಿದೇಹದ ಕರ್ಮಭೂಮಿಗಳಲ್ಲಿ ಪ್ರತಿಯೊಂದರಲ್ಲೂ ಒಂದೊಂದು ವಿಜಯಾರ್ಧ ಎರಡೆರಡೂ ನದಿಗಳಿದ್ದು ಆರು ಖಂಡಗಳಿವೆ. ಅಲ್ಲಿಯ ಚಕ್ರವರ್ತಿಗಳು ಈ ಆರು ಖಂಡಗಳನ್ನೂ ಜಯಿಸುವರು.

ಜಂಬೂದ್ವೀಪದಲ್ಲಿ ಆರು ಭೋಗಭೂಮಿಗಳಿವೆ; ಧಾತಕೀಖಂಡದಲ್ಲಿ ೧೨ ಭೋಗ ಭೂಮಿಗಳು; ಪುಷ್ಕರಾರ್ಧದಲ್ಲಿ ೧೨ ಭೋಗಭೂಮಿಗಳಿವೆ. ಜಘನ್ಯ ಭೋಗಭೂಮಿಯಲ್ಲಿ ಜೀವಿಗಳಿಗೆ ಒಂದು 'ಪಲ್ಯ' ಆಯುಃ ಪರಿಮಿತಿಯಿದೆ; ಮಧ್ಯಮ ಭೋಗಭೂಮಿಯಲ್ಲಿ ಎರಡು ಪಲ್ಯ ಆಯುಃ ಪರಿಮಿತಿ; ಉತ್ತಮ ಭೋಗ ಭೂಮಿಯಲ್ಲಿ ಮೂರು ಪಲ್ಯ.

ಮನುಷ್ಯರು: ಜಂಬೂದ್ವೀಪ, ಧಾತಕೀಖಂಡ ಪುಷ್ಕರಾರ್ಧದ್ವೀಪ ಈ ಎರಡೂವರೆ ದ್ವೀಪಗಳಲ್ಲಿಯೂ ಜೊತೆಗೆ ಲವಣಸಮುದ್ರ, ಕಾಲೋದ ಸಮುದ್ರಗಳಲ್ಲಿಯೂ ಮನುಷ್ಯರ ವಾಸ ಹಾಗೂ ಪ್ರವಾಸಗಳುಂಟು. ಲವಣಸಮುದ್ರ ಮತ್ತು ಕಾಲೋದಧಿ ಸಮುದ್ರಗಳಲ್ಲಿ ೯೬ 'ಅಂತರ್ದ್ವೀಪ'ಗಳುಂಟು. ಇವೆಲ್ಲ **'ಕುಭೋಗ ಭೂಮಿಗಳು'**. ಇಲ್ಲಿ ಕೇವಲ ಮಾನವರು ವಾಸಿಸುವರು. ಆದರೆ ಇವರು ವಕ್ರವಕ್ರ ಆಕಾರವುಳ್ಳವರು.

ಹೈಮವತ, ಹರಿವರ್ಷ, ದೇವಕುರು—ಈ ಭಾಗದಲ್ಲಿ ವಾಸಿಸುವ ಮಾನವರಿಗೆ ಕ್ರಮವಾಗಿ ಒಂದು, ಎರಡು, ಮೂರು ಪಲ್ಯ ಆಯುಸ್ಸು, ಆದರೆ ವಿದೇಹದ ಮಾನವರು ಅತಿ ಹೆಚ್ಚೆಂದರೆ ಒಂದು ಕೋಟಿ **ಪೂರ್ವ**ಕಾಲ, ಅತಿ ಕಡಿಮೆಯೆಂದರೆ **'ಅಂತರ್ಮುಹೂರ್ತಕಾಲ'** ಬದುಕುವರು. ಇಲ್ಲಿಯವರ ಎತ್ತರ ಐನೂರು ಧನಸ್ಸು ಪ್ರಮಾಣವಿರುವುದು. ಉಳಿದ ಮಾನವರ ಹಾಗು ಮೂಕಜೀವಿಗಳ ಪರಮಾಯುಷ್ಯ ಮೂರು ಪಲ್ಯವಾದರೆ, ಜಘನ್ಯಾಯುಷ್ಯ ಕೇವಲ

ಅಂತರ್ಮುಹೂರ್ತ ಪರಿಮಿತವಾಗಿದೆ.

ಮಂದರ ಪರ್ವತ (ಮಹಾಮೇರು) : ಮಧ್ಯಲೋಕದ ನಟ್ಟನಡುವೆ ಮಂದರ ಪರ್ವತವಿದೆ. ಇದರ ಪಾಯ ಭೂಮಿಯಲ್ಲಿ ಒಂದು ಸಾವಿರ ಯೋಜನದವರೆಗೂ ಇಳಿದಿದೆ. ಭೂತಲದಿಂದ ಮೇಲಕ್ಕೆ ೯೯ ಸಾವಿರ ಯೋಜನದ ತನಕ ಈ ಪರ್ವತ ಬೆಳೆದಿದೆ. ಇದರ ಶಿಖರವೇ ನಲ್ವತ್ತು ಯೋಜನ ಎತ್ತರವಾಗಿದೆ. ಮನುಷ್ಯಲೋಕದ (ಎರಡುವರೆ ದ್ವೀಪ) ಸೂರ್ಯಚಂದ್ರರು ಯಾವಾಗಲೂ ಈ ಮಂದರ ಪರ್ವತವನ್ನು ಸುತ್ತುತ್ತಿರುವರು. ಮಹಾಮೇರುವಿನ ಅಡಿಯಲ್ಲಿ ಇದಕ್ಕೆ ಆಧಾರವಾದ ರತ್ನಪ್ರಭೆಯೆಂಬ ಭೂಮಿಯಿದೆ. ಮಹಾಮೇರುವಿನಡಿಯಲ್ಲಿ ಭವನ ಲೋಕ, ವ್ಯಂತರಲೋಕ ಹಾಗೂ ನರಕಗಳಿವೆ. ಮಹಾಮೇರುವಿನ ಮೇಲೆ ಸ್ವರ್ಗಲೋಕವಿದೆ. ಮಂದರವೆಂದರೂ ಮಹಾಮೇರು ಎಂದರೂ ಒಂದೆ.

ಊರ್ಧ್ವಲೋಕ: ಮಹಾಮೇರು(ಮಂದರ)ವಿನ ಶಿಖರದ ನೆತ್ತಿಯಲ್ಲಿ ಒಂದು ಕೂದಲಿನಷ್ಟು ಸ್ಥಳಬಿಟ್ಟು ಊರ್ಧ್ವಲೋಕ ಮೇಲುಮೇಲಕ್ಕೆ ಹಬ್ಬಿದೆ. ಇದರಲ್ಲಿ 'ವೈಮಾನಿಕ ದೇವತೆಗಳು' ವಾಸಿಸುವರು. ಸ್ವರ್ಗದಲ್ಲಿ ಹದಿನಾರು ಕಲ್ಪಗಳೂ, ಅದರಾಚೆ ಗ್ರೈವೇಯಕವೂ, ಇದರ ಮೇಗಡೆ ಅನುದಿಶವೂ, ಇದರಾಚೆ ಅನುತ್ತರವೂ ಹರಡಿದೆ.

ಕಲ್ಪಗಳು: ಕೆಳಗಿನಿಂದ ಮೇಲಕ್ಕೆ ಜೋಡಿಜೋಡಿಯಾಗಿ ಹದಿನಾರು ಸ್ವರ್ಗಗಳಿವೆ. ಇವಕ್ಕೆ 'ಕಲ್ಪ'ವೆನ್ನುವರು. ಇಲ್ಲಿನ ದೇವತೆಗಳಲ್ಲಿ ಆಳು ಅರಸ ಮುಂತಾದ ಕೀಳು ಮೇಲು ಇರುವುದರಿಂದ ಇವಕ್ಕೆ ಕಲ್ಪಗಳೆಂದು ಹೆಸರಾಯಿತು. (೧) ಸೌಧರ್ಮ ಕಲ್ಪ ಉತ್ತರಕ್ಕೆ ಹಬ್ಬಿದೆ; (೨) ಈಶಾನಕಲ್ಪ ದಕ್ಷಿಣಕ್ಕೆ ಹಬ್ಬಿದೆ; ಈ ಎರಡು ಕಲ್ಪಗಳಿಂದ ಕ್ರಮವಾಗಿ ಮೇಲುಮೇಲಕ್ಕೆ ಜೋಡಿಜೋಡಿಯಾಗಿ (೩) ಸನತ್ಕುಮಾರ ಕಲ್ಪ; (೪) ಮಾಹೇಂದ್ರ ಕಲ್ಪ; (೫) ಬ್ರಹ್ಮ ಕಲ್ಪ; (೬) ಬ್ರಹ್ಮೋತ್ತರ; (೭) ಲಾಂತವ; (೮) ಕಾಪಿಷ್ಠ; (೯) ಶುಕ್ರ; (೧೦) ಮಹಾ ಶುಕ್ರ; (೧೧) ಶತಾರ; (೧೨) ಸಹಸ್ರಾರ ; (೧೩) ಆನತ; (೧೪) ಪ್ರಾಣತ; (೧೫) ಆರಣ; (೧೬) ಅಚ್ಯುತ—ಈ ರೀತಿ ಕಲ್ಪಗಳಿವೆ. ಬ್ರಹ್ಮಲೋಕದ ತುದಿಯ ಭಾಗದಲ್ಲಿ ಲೋಕಾಂತಿಕ ದೇವತೆಗಳಿರುವರು. ಇದನ್ನು ಬ್ರಹ್ಮಲೋಕವೆನ್ನುವರು.

ಮೊದಲಿನ ನಾಲ್ಕು ಕಲ್ಪಗಳಿಗೆ ಪ್ರತಿಯೊಂದಕ್ಕೂ ಒಬ್ಬೊಬ್ಬ ಇಂದ್ರನಿರುವನು. ಇವರನ್ನು ಕ್ರಮವಾಗಿ (೧) **ಸೌಧರ್ಮೇಂದ್ರ**, (೨) **ಈಶಾನೇಂದ್ರ**, (೩) **ಸನತ್ಕುಮಾರೇಂದ್ರ**, (೪) **ಮಾಹೇಂದ್ರೇಂದ್ರ** ಎನ್ನುವರು. ಇದೇ ರೀತಿ ಕೊನೆಯ ನಾಲ್ಕು ಕಲ್ಪಗಳಲ್ಲೂ ಕಲ್ಪಕೊಬ್ಬರಂತೆ ಇಂದ್ರರಿದ್ದಾರೆ. ಇವರನ್ನು (೧) **ಆನತೇಂದ್ರ**, (೨) **ಪ್ರಾಣತೇಂದ್ರ**, (೩) **ಆರಣೇಂದ್ರ**, (೪) **ಅಚ್ಯುತೇಂದ್ರ** ಎನ್ನುವರು. ನಡುವಣ ಎಂಟು ಕಲ್ಪಗಳಲ್ಲಿ ಜೋಡಿಜೋಡಿ ಕಲ್ಪಗಳಿಗೆ ಒಬ್ಬೊಬ್ಬರಂತೆ ಇಂದ್ರರಿದ್ದಾರೆ. ಬ್ರಹ ಬ್ರಹ್ಮೋತ್ತರಗಳಿಗೆ '**ಬ್ರಹ್ಮೇಂದ್ರ**', ಲಾಂತವ ಕಾಪಿಷ್ಠಗಳಿಗೆ '**ಲಾಂತವೇಂದ್ರ**', ಶುಕ್ರ ಮಹಾಶುಕ್ರಗಳಿಗೆ '**ಶುಕ್ರೇಂದ್ರ**', ಶತಾರ ಸಹಸ್ರಾರಗಳಿಗೆ '**ಶತಾರೇಂದ್ರ**'—ಈ ರೀತಿ ಆಳುತ್ತಿರುವರು.

ಈ ಕಲ್ಪಗಳಲ್ಲಿ ಒಟ್ಟು ೫೨ ಪಟಲಗಳಿವೆ. ಪ್ರತಿಯೊಂದು ಪಟಲದಲ್ಲೂ ಇಂದ್ರಕ ಶ್ರೇಣೀಬದ್ಧ ಪ್ರಕೀರ್ಣಕಗಳೆಂಬ ವಿಮಾನಗಳಿವೆ. ಇವುಗಳಲ್ಲಿ ಇಂದ್ರಕ, ವಿಮಾನ ಪ್ರಧಾನ

ವಾದುವು. ಊರ್ಧ್ವಲೋಕದಲ್ಲಿ ಒಟ್ಟು ೬೩ ಇಂದ್ರಕಗಳಿವೆ. ಇವನ್ನು 'ತ್ರಿಷಷ್ಠಿ ಸ್ವರ್ಗಪಟಲ'ವೆನ್ನುವರು.

ಕಲ್ಪಾತೀತ ವಿಭಾಗ: ಗ್ರೈವೇಯಕ, ಅನುದಿಶ, ಅನುತ್ತರ ವಿಮಾನಗಳು '**ಕಲ್ಪಾತೀತ**' ವಿಭಾಗದಲ್ಲಿವೆ. ಇಲ್ಲಿ ಆಳು ಅರಸ ಎಂಬ ಕೀಳು ಮೇಲಿಲ್ಲ. ಇಲ್ಲಿರುವವರೆಲ್ಲ ಅಹಮಿಂದ್ರರು!

(೧) **ಗ್ರೈವೇಯಕದಲ್ಲಿ** ಒಂದರ ಮೇಲೊಂದರಂತೆ (೧) '**ಅಧೋಗ್ರೈವೇಯಕ**' (೨) '**ಮಧ್ಯ ಗ್ರೈವೇಯಕ**', (೩) '**ಊರ್ಧ್ವಗ್ರೈವೇಯಕ**'ವೆಂದು ಮೂರು ಸಾಲುಗಳಿವೆ. ಒಂದೊಂದು ಸಾಲಿನಲ್ಲೂ ಮೂರು ಮೂರು ವಿಮಾನಗಳಂತೆ ಒಟ್ಟು ಒಂಭತ್ತು ವಿಮಾನಗಳಿವೆ.

(೨) **ಅನುದಿಶ:** ಇದರಲ್ಲಿ ದಿಕ್ಕಿಗೊಂದರಂತೆ ಎಂಟು ದಿಕ್ಕಿನಲ್ಲಿ ಎಂಟು ವಿಮಾನಗಳಿದ್ದು ನಡುವೆ ಒಂದು ವಿಮಾನವಿರುವುದರಿಂದ ಇದಕ್ಕೆ '**ನವಾನುದಿಶ**'ವೆನ್ನುವರು.

(೩) **ಅನುತ್ತರ:** ಇದರಲ್ಲಿ ದಿಕ್ಕಿಗೊಂದರಂತೆ (೧) '**ವಿಜಯ**', (೨) '**ವೈಜಯಂತ**', (೩) '**ಜಯಂತ**', (೪) '**ಅಪರಾಜಿತ**' ಎಂಬ ನಾಲ್ಕು ವಿಮಾನಗಳಿದ್ದು ಇವುಗಳ ನಡುವೆ (೫) '**ಸರ್ವಾರ್ಥಸಿದ್ಧಿ**' ವಿಮಾನವೂ ಇರುವುದರಿಂದ ಇದಕ್ಕೆ '**ಪಂಚಾನುತ್ತರ**'ವೆನ್ನುವರು. ಅನುತ್ತರವೊಂದರಲ್ಲಿ ಪ್ರಕೀರ್ಣಕ ವಿಭಾಗವಿಲ್ಲದಿದ್ದರೂ ವಿಜಯಾದಿ ಶ್ರೇಣೀಬದ್ಧ ವಿಮಾನಗಳುಂಟು.

ದೇವತೆಗಳು: ದೇವತೆಗಳಲ್ಲಿ (೧) **ಭವನವಾಸಿ** (೨) **ವ್ಯಂತರವಾಸಿ**, (೩) **ಜ್ಯೋತಿಷ್ಕ** ಮತ್ತು (೪) **ವಿಮಾನವಾಸಿ** ಎಂದು ನಾಲ್ಕು ಬಗೆ [ಇವರನ್ನೇ ಚತುರ್ನಿಯಾಮರರೆನ್ನುವರು.] ಈ ನಾಲ್ಕು ವರ್ಗದ ದೇವತೆಗಳಲ್ಲಿ [ಕಲ್ಪಾತೀತರನ್ನುಳಿದು] (೧) ಇಂದ್ರ, (೨) ಸಾಮಾನಿಕ, (೩) ತ್ರಾಯಸ್ತ್ರಿಂಶ, (೪) ಪಾರಿಷದ, (೫) ಆತ್ಮರಕ್ಷಕ, (೬) ಲೋಕಪಾಲ, (೭) ಅನೀಕ, (೮) ಪ್ರಕೀರ್ಣಕ, (೯) ಅಭಿಯೋಗ್ಯ, (೧೦) ಕಿಲ್ಬಿಷಿಕ ಎಂದು ಹತ್ತು ಪಂಗಡಗಳಿವೆ. (ವ್ಯಂತರ ಮತ್ತು ಜ್ಯೋತಿಷ್ಕರಲ್ಲಿ ತ್ರಾಯಸ್ತ್ರಿಂಶ ಮತ್ತು ಲೋಕಪಾಲರುಗಳಿಲ್ಲ.)

ಇಂದ್ರನಿಗೆ ಅಣಿಮಾದ್ಯಷ್ಟೈಸ್ವರ್ಯವಿರುವುದು. ಇವನು ದೇವತೆಗಳ ಅಧಿಪತಿ. ಇಂದ್ರನಿಗಿಂತ ಐಸಿರಿಯಲ್ಲಿ ಕಡಮೆಯವರಾದರೂ '**ಸಾಮಾನಿಕ ದೇವತೆ**'ಗಳು ಇಂದ್ರನಿಗೂ ಪೂಜ್ಯರು. ಇಂದ್ರನಿಗೆ ಮಂತ್ರಿ, ಪುರೋಹಿತರಾಗಿ ಮೆಚ್ಚಿಗೆಗೆ ಪಾತ್ರರಾಗಿರುವ ೩೩ ದೇವತೆಗಳನ್ನು '**ತ್ರಾಯಸ್ತ್ರಿಂಶ**'ರೆನ್ನುವರು. ದೇವೇಂದ್ರನ ಸಂಗಾತಿಗಳಾಗಿ ದೇವಸಭೆಗಳಲ್ಲೆಲ್ಲ (ಬಾಹ್ಯ, ಅಭ್ಯಂತರ, ಮಧ್ಯ ಸಭೆಗಳು) ಮಂಡಿಸುವವರು '**ಪಾರಿಷದ**'ರೆನಿಸುವರು. ಇಂದ್ರಸಭೆಯಲ್ಲಿ ಶಸ್ತ್ರಧಾರಿಗಳಾಗಿ ಇಂದ್ರನ ಹಿಂದೆ ಬೆಂಗಾವಲಾಗಿರುವವರನ್ನು '**ಆತ್ಮರಕ್ಷಕ**'ರೆನ್ನುವರು. ದುರ್ಗರಕ್ಷಕರಂತಿರುವವರನ್ನು '**ಲೋಕಪಾಲ**'ರೆನ್ನುವರು. ದೇವೇಂದ್ರನ ಏಳು ಬಗೆ ಸೈನ್ಯದವರನ್ನು '**ಅನೀಕ**'ರೆನ್ನುವರು. ಇವರು ಕಾಲಾಳು, ಕುದುರೆ, ತೇರು, ಆನೆ, ಈ ರೂಪಗಳನ್ನೂ ಜೊತೆಗೆ ಸಂಗೀತ, ವಾದ್ಯ, ನರ್ತನ ಇವಕ್ಕೆ ಅನುಕೂಲವಾಗುವಂತೆ ಸಂದರ್ಭೋಚಿತವಾದ ರೂಪಗಳನ್ನೂ ಧರಿಸುವರು! ಪ್ರಜೆಗಳಂತಿರುವವರು 'ಪ್ರಕೀರ್ಣಕ'ರೆನಿಸುವರು. ಸಂದರ್ಭೋ

ಚಿತವಾಗಿ ವಾಹನರೂಪವನ್ನು ಧರಿಸಿ ದೇವೇಂದ್ರನ ಸೇವೆಮಾಡುವವರನ್ನು **'ಅಭಿಯೋಗ್ಯ'**ರೆನ್ನುವರು. ಸಭೆಯ ಹೊರಗೆ ದೂರದಲ್ಲೇ ನಿಲ್ಲುವ ಸಾಮಾನ್ಯ ದೇವತೆಗಳಿಗೆ **'ಕಿಲ್ಬಿಷಕ'**ರೆನ್ನುವರು! ಇವರೂ ಕೂಡ ದೇವೇಂದ್ರನ ಆದರಕ್ಕೆ ಪಾತ್ರರಾದವರೇ!

ಭವನ ಮತ್ತು ವ್ಯಂತರವಾಸಿಗಳು: ಮಧ್ಯಲೋಕದ ಕೆಳಗೆ ಮಂದರ ಪರ್ವತಕ್ಕಾಧಾರವಾಗಿ 'ರತ್ನಪ್ರಭಾ' ಭೂಮಿಯಿದೆ. ಇದರಲ್ಲಿ ಒಂದರ ಕೆಳಗೊಂದರಂತೆ **'ಖರಭಾಗ'**, **'ಪಂಕಭಾಗ'** ಮತ್ತು **'ಅಬ್ಬಹುಲಭಾಗ'**ವೆಂದು ಮೂರು ನೆಲೆಗಳಿವೆ. ಖರಭಾಗದಲ್ಲಿ ಅಸುರ ಕುಮಾರರನ್ನುಳಿದು ಮಿಕ್ಕ ಒಂಭತ್ತು ಬಗೆಯ ಭವನವಾಸೀ ದೇವತೆಗಳೂ, ರಾಕ್ಷಸರನ್ನು ಬಿಟ್ಟು ಮಿಕ್ಕ ಏಳುತೆರನಾದ ವ್ಯಂತರ ದೇವತೆಗಳೂ ವಾಸಿಸುವರು. ಪಂಕಭಾಗದಲ್ಲಿ ಅಸುರ ಕುಮಾರರೂ ರಾಕ್ಷಸರೂ ಇರುತ್ತಾರೆ. ಭವನವಾಸಿಗಳು 'ಅಕೃತಿಮ ಭವನ'ಗಳಲ್ಲಿ ವಾಸಿಸುವರು. ವ್ಯಂತರರು ಗಿರಿ, ಗುಹೆ, ಸಮುದ್ರ ಮುಂತಾದ ಪ್ರದೇಶಗಳಲ್ಲಿ ವಾಸಿಸುತ್ತಾರೆ.

ಭವನವಾಸಿ: (೧) ಅಸುರಕುಮಾರ, (೨) ನಾಗಕುಮಾರ, (೩) ವಿದ್ಯುತ್ಕುಮಾರ, (೪) ಸುಪರ್ಣಕುಮಾರ, (೫) ಅಗ್ನಿಕುಮಾರ, (೬) ವಾತಕುಮಾರ, (೭) ಸ್ತನಿತಕುಮಾರ, (೮) ಉದಧಿಕುಮಾರ, (೯) ದ್ವೀಪಕುಮಾರ, (೧೦) ದಿಕ್ಕುಮಾರ ಎಂದು ಹತ್ತುಬಗೆಯಿದೆ. ಇವರಲ್ಲಿ ಒಂದೊಂದು ಬಗೆಗೂ ಇಬ್ಬಿಬ್ಬರು ಇಂದ್ರರಿದ್ದಾರೆ. **ಅಸುರಕುಮಾರರು ಪರ ಪೀಡನೆಯೆಸಗಿ ಸಂತೋಷಪಡುವ ದಿವ್ಯಾತ್ಮರು!** ಇವರು ಆಗಾಗ ಮೊದಲಿನ ಮೂರು ನರಕಗಳಿಗೂ ಹೋಗಿ, ಮೊದಲೇ ನರಳುತ್ತಿರುವ ನಾರಕಿಗಳಿಗೆ ಹುಣ್ಣಿನ ಮೇಲೆ ಬರೆಯೆಳದಂತೆ ಹಿಂಸೆಕೊಡುವರು.

ವ್ಯಂತರರಲ್ಲಿ (೧) ಕಿನ್ನರ, (೨) ಕಿಂಪುರಷ, (೩) ಮಹೋರಗ, (೪) ಗಂಧರ್ವ, (೫) ಯಕ್ಷ, (೬) ರಾಕ್ಷಸ, (೭) ಭೂತ, (೮) ಪಿಶಾಚ ಎಂದು ಎಂಟು ವರ್ಗಗಳಿವೆ. ಒಂದೊಂದು ವರ್ಗಕ್ಕೂ ಇಬ್ಬಿಬ್ಬರು ಇಂದ್ರರಿದ್ದಾರೆ.

ಜ್ಯೋತಿಷ್ಕ ದೇವತೆಗಳು: ಮಧ್ಯಲೋಕದಿಂದ ೭೯೦ ಯೋಜನದ ಮೇಲೆ ಜ್ಯೋತಿರ್ಲೋಕವಿದೆ. ಇದರಲ್ಲಿ (೧) ಸೂರ್ಯ, (೨) ಚಂದ್ರ, (೩) ಗ್ರಹ, (೪) ನಕ್ಷತ್ರ, (೫) ಪ್ರಕೀರ್ಣತಾರಕರೆಂಬ ಐದು ಬಗೆ ಜ್ಯೋತಿರ್ದೇವತೆಗಳಿರುವರು. ಈ ಲೋಕ ೧೧೦ ಯೋಜನ ಉನ್ನತವಾಗಿದ್ದು ಲೋಕಾಂತದ ವರೆಗೆ ವ್ಯಾಪಿಸಿದೆ. ಮನುಷ್ಯ ಲೋಕದ **(ಎರಡುವರೆ ದ್ವೀಪ)** ಸೂರ್ಯಚಂದ್ರರು ನಿರಂತರವಾಗಿ ಮಂದರ ಪರ್ವತವನ್ನು (ಮೇರುಪರ್ವತ) ಸುತ್ತುತ್ತಿರುವರು. ಮಾನುಷೋತ್ತರ ಪರ್ವತದ ಹೊರಗಿನ (ಪುಷ್ಕರಾರ್ಧದಿಂದಾಚೆಗೆ) ದ್ವೀಪಸಮುದ್ರಗಳ ಮೇಲಿರುವ ಸೂರ್ಯಚಂದ್ರರು ಇದ್ದಲ್ಲೇ ಇರುವುದರಿಂದ ಅವರಿಗೆ **'ಸ್ಥಿರಜ್ಯೋತಿಷ್ಕ'**ರೆಂದು ಕರೆಯುತ್ತಾರೆ.

ಭೂತಲದಿಂದ ೭೯೦ ಯೋಜನ ದಾಟಿದ ಮೇಲೆ **'ಪ್ರಕೀರ್ಣತಾರೆ'**ಗಳಿರುವುವು; ಅಲ್ಲಿಂದ ಹತ್ತು ಯೋಜನ ಮೇಲಕ್ಕೆ ಹೋದರೆ **'ಸೂರ್ಯವಿಮಾನ'**ವಿದೆ. ಇನ್ನೂ ೮೦ ಯೋಜನ ಮೇಲಕ್ಕೆ ಹೋದಾಗ **'ಚಂದ್ರವಿಮಾನ'**ವಿದೆ. ಚಂದ್ರನಿಂದ ನಾಲ್ಕು ಯೋಜನ ಮೇಗಡೆ **'ನಕ್ಷತ್ರ'**ಗಳಿವೆ. ಅಲ್ಲಿಂದ ನಾಲ್ಕು ಯೋಜನದ ಮೇಲೆ **'ಬುಧ'** ನಿರುವನು. ಇನ್ನೂ ಮೂರು

ಯೋಜನ ಮೇಗಡೆ **'ಶುಕ್ರ'**ನಿದ್ದಾನೆ. ಇಲ್ಲಿ ಮೂರು ಯೋಜನ ಮೇಲೆ ಹೋದರೆ **'ಗುರು'**ವಿರುವನು. ಗುರುವನ್ನು ದಾಟಿ ಮೂರು ಯೋಜನದ ಮೇಲೆ **'ಕುಜ'**ನಿದ್ದಾನೆ. ಇಲ್ಲಿಂದ ಮತ್ತೆ ಮೂರು ಯೋಜನ ಮೇಲೆ ಹೋದರೆ **'ಶನಿ'**ಯಿರುವನು. ತಾರಾಗಣ ಮತ್ತು ಸೂರ್ಯ ಗ್ರಹರ ನಡುವೆ **'ಕೇತು'** ಸೂರ್ಯ ಮತ್ತು ಚಂದ್ರರ ನಡುವೆ **'ರಾಹು'**ವೂ ಇರುವರು.

ನಕ್ಷತ್ರ ಮಂಡಲದ ಉತ್ತರದಲ್ಲಿ **'ಅಭಿಜಿತ್ ನಕ್ಷತ್ರ'**ವೂ ದಕ್ಷಿಣದಲ್ಲಿ **'ಮೂಲಾ ನಕ್ಷತ್ರ'**ವೂ ಎಲ್ಲ ನಕ್ಷತ್ರಗಳ ಮೇಲೆ ಸ್ವಾತಿ, ಕೆಳಗೆ ಭರಣಿ, ನಕ್ಷತ್ರ ಮಧ್ಯದಲ್ಲಿ ಕೃತ್ತಿಕಾ ನಕ್ಷತ್ರ ಇವೆ.

ದೇವತೆಗಳ ರತಿವಿಲಾಸ: ಭವನವಾಸಿ, ವ್ಯಂತರ, ಜ್ಯೋತಿಷ್ಕ, ಸೌಧರ್ಮವಾಸಿ, ಐಶಾನವಾಸಿ ದೇವತೆಗಳು ಮಾನವರಂತೆ ಹೆಣ್ಣು ಗಂಡು ಕೂಡಿ ರತಿವಿಲಾಸ ನಡೆಸುವರು. ಸನತ್ಕುಮಾರ ಮತ್ತು ಮಹೇಂದ್ರವಾಸಿಗಳಲ್ಲಿ ಗಂಡುಹೆಣ್ಣು ಕೇವಲ ಸ್ಪರ್ಶಮಾತ್ರದಿಂದ ಕಾಮತೃಪ್ತಿ ಪಡೆಯುವರು. ಬ್ರಹ್ಮಬ್ರಹ್ಮೋತ್ತರಲಾಂತವ ಕಾಪಿಷ್ಠಗಳಲ್ಲಿ ಸಿಂಗರಗೊಂಡ ದೇವಿಯರನ್ನು ನೋಡಿದ ಮಾತ್ರಕ್ಕೇ ಅವರು ತೃಪ್ತರಾಗುವರು. ಶುಕ್ರ, ಮಹಾಶುಕ್ರ, ಶತಾರ, ಸಹಸ್ರಾರಗಳಲ್ಲಿ ಗಂಡು ಹೆಣ್ಣು ಪರಸ್ಪರ ಲಲ್ಲೆ ಹೊಡೆದು ಸಂಗೀತವನ್ನಾಲಿಸುವುದರಿಂದಲೇ ಅವರ ಕಾಮೇಚ್ಛೆ ಹಿಂಗುವುದು. ಆನತ, ಪ್ರಾಣತ, ಆರಣ, ಅಚ್ಯುತ ವಾಸಿಗಳು ಚಿಂತನ ಮಾತ್ರದಿಂದಲೇ ಕಾಮತೃಪ್ತಿ ಪಡೆಯುತ್ತಾರೆ. **ಸುರತ ವ್ಯಾಪಾರದಲ್ಲಿ ದೇವತೆಗಳಿಗೆ ವೀರ್ಯಪಾತವಾಗುವುದಿಲ್ಲ, ಗರ್ಭಧಾರಣೆಕೂಡ ಇಲ್ಲ; ಕಲ್ಪಾತೀತರಿಗೆ** (ಗ್ರೈವೇಯಕ, ಅನುದಿಶೆ, ಅನ್ನುತ್ತರೆ) **ಕಾಮ ಪೀಡೆಯೂ ಇಲ್ಲ ಜೊತೆಗೆ ಅಲ್ಲಿಸ್ತ್ರೀಯರೂ ಇಲ್ಲ!** ಆದರೂ ಅಲ್ಲಿಯ ಸುಖ, ವರ್ಣನೆಗೆ ಎಟಕುವಂಥದಲ್ಲ. ಸ್ವರ್ಗದಲ್ಲೂ ಕೆಳಗಿನಿಂತೆ ಮೇಲಕ್ಕೆ ಹೋದಂತೆ ಆಯು, ಬಲ, ಬುದ್ಧಿ ಜೊತೆಗೆ ಸುಖ ಹೆಚ್ಚುತ್ತಾ ಹೋಗುವುದು.

ದೇವತೆಗಳ ಮುಕ್ತಿ: ದೇವತೆಗಳು ಮುಕ್ತಾತ್ಮರಲ್ಲ. ಪುಣ್ಯಸಂಚಯ ಮಾಡಿಕೊಂಡು ಅವರು ದೇವತೆಗಳಾಗಿರುವರು. ಅದು ಮುಗಿದೊಡನೆ ಮರುಮಾತಿಲ್ಲದೆ ಕೆಳಗಿಳಿಯಬೇಕು. ಇದರ ಮೇಲೆ ದೇವತೆಗಳು ನೇರವಾಗಿ ತಮ್ಮ ಲೋಕದಿಂದ ಹಾಗು ತಮ್ಮ ಅವಸ್ಥೆಯಿಂದ ಮುಕ್ತರಾಗುವಂತಿಲ್ಲ. ಜೀವನ್ಮುಕ್ತಿಯನ್ನು ಎಂದಿದ್ದರೂ **'ಕರ್ಮಭೂಮಿ'**ಯಿಂದಲೇ ಸಾಧಿಸಬೇಕು. ಈ ದೃಷ್ಟಿಯಿಂದ ನೋಡುವಾಗ ದೇವಲೋಕಕ್ಕಿಂತ ಮಾನವಲೋಕವೇ ಎಂದಿದ್ದರೂ ಶ್ರೇಷ್ಠ!

೫ನೇ ಬ್ರಹ್ಮಸರ್ಗದ ಕೊನೆಯ ಭಾಗವನ್ನು ಬ್ರಹ್ಮಲೋಕವೆನ್ನುವರು. ಅಲ್ಲಿ **'ಲೋಕಾಂತಿಕ'** ದೇವತೆಗಳಿದ್ದಾರೆ; [ತೀರ್ಥಂಕರನ ಪರಿಷ್ಕ್ರಮಣ (ದೀಕ್ಷಾ)ಕಲ್ಯಾಣಕ್ಕೆ ಇವರು ತಪ್ಪದೆ ಬರುವರು. ಉಳಿದ ಕಲ್ಯಾಣಗಳಿಗೆ ಇವರು ಬರುವುದಿಲ್ಲ;] ಈ ಲೋಕಾಂತಿಕ ದೇವತೆಗಳು ಒಂದು ಜನುಮದ ನಂತರ ಮುಕ್ತರಾಗುವರು. ವಿಜಯ, ವೈಜಯಂತ, ಜಯಂತ ಮತ್ತು ಅಪರಾಜಿತ ವಾಸಿಗಳಾದ ಅಹಮಿಂದ್ರರು ಎರಡು ಭವವೆತ್ತಿ ಆ ಮೇಲೆ ಮುಕ್ತರಾಗುವರು. ಸರ್ವಾರ್ಥ ಸಿದ್ಧಿಯಿಂದ ಹೊರಟ ಚೇತನ ಬಹುಮಟ್ಟಿಗೆ ತೀರ್ಥಂಕರ

ನಾಗುವುದು.[೧]

ದೇವತೆಗಳ ಆಯುಷ್ಯ: ಮಾನವರಿಗಿಂತ ದೇವತೆಗಳಿಗೆ ಆಯುಸ್ಸು ಬಹು ಹೆಚ್ಚಾಗಿರುವುದರಿಂದ ಇವರನ್ನು ಅಮರರೆನ್ನುವರು. ಕಲ್ಪಗಳಲ್ಲಿ ಕೆಳಗಿಂದ ಮೇಲಕ್ಕೆ ಹೋಗುತ್ತ ಆಯುಷ್ಯ ಹೆಚ್ಚುವುದು. ಮೊದಲಿನೆರಡು ಕಲ್ಪಜರಿಗೆ (ಸೌಧರ್ಮ ಈಶಾನ) ಎರಡು ಸಾಗರೋಪಮಾಯುಷ್ಯವಿದ್ದರೆ ಕೊನೆಯೆರಡು (ಆರಣ, ಅಚ್ಯುತ) ಕಲ್ಪವಾಸಿಗಳಿಗೆ ಇಪ್ಪತೆರಡು ಸಾಗರೋಪಮಾಯುಷ್ಯವಿದೆ. ಗ್ರೈವೇಯಕ ವಿಮಾನದಿಂದ ಒಂದೊಂದು ಸಾಗರ ಹೆಚ್ಚುತ್ತಾ ಐದು ಅನುತ್ತರೆಗಳಲ್ಲಿ ೩೩ ಸಾಗರೋಪಮ ಉತ್ಕೃಷ್ಟಾಯುಷ್ಯವಿದೆ.

ಅಸುರದೇವತೆಗಳಿಗೆ ಒಂದು ಸಾಗರೋಪಮ ಆಯುಸ್ಸಿರುತ್ತದೆ. ಭವನದೇವರ್ಕಳಿಗೂ, ವ್ಯಂತರರಿಗೂ, ಜ್ಯೋತಿಷ್ಕರಿಗೂ ಒಂದು ಪಲ್ಯ ಪರಮಾಯುಷ್ಯವಿರುತ್ತದೆ.

ದೇವತೆಗಳ ಹುಟ್ಟು ಮತ್ತು ಸಾವು: ದೇವತೆಗಳೂ ನಾರಕಿಗಳೂ ಗರ್ಭಜರಲ್ಲ. ಏಕೆಂದರೆ ಸ್ವರ್ಗ ಮತ್ತು ನರಕಗಳಲ್ಲಿ ಗರ್ಭಧಾರಣೆಯೇ ಇಲ್ಲ. ದೇವತೆಗಳು 'ಉಪಪಾದ ಶಯ್ಯೆ'ಯಲ್ಲಿ ಜನಿಸುವರು. ಹುಟ್ಟಿದ ಕೂಡಲೆ ಅಂತರ್ಮುಹೂರ್ತದಲ್ಲಿ ತಾರುಣ್ಯವನ್ನು ಪಡೆಯುತ್ತಾರೆ. ದೇವ ಮತ್ತು ನಾರಕಿಗಳಿಗೆ ಉಪಪಾದ ಜನ್ಮವಾಗುವುದು. ಪುಣ್ಯಸಂಚಯ ಮಾಡಿದ ಚೇತನ, ದೇವಗತಿಗೆ ಹೋದಾಗ ದೇವ ಲೋಕದಲ್ಲಿ ಸಂಧ್ಯಾಕಾಲದ ಹೊಂಬೆಳಗನ್ನು ಹೋಲುವ ದಿವ್ಯತಲ್ಪದ ಪೊರೆಯಿಂದ ಎಳನೇಸರ ಬೆಳಗನ್ನು ಹೊರಸೂಸುತ್ತ ಮೂಡುವುದು. ಮೂಡುತ್ತಿದ್ದಂತೆ ದೇವತೆಗೆ ತಾರುಣ್ಯ ಬರುವುದು; ದಿವ್ಯಮೂರ್ತಿಯಾಗಿ ಸಹಜಾಂಬರಭೂಷಣ, ದಿವ್ಯ ಮಾಲೆಗಳನ್ನು ಧರಿಸಿಕೊಂಡು ನಿದ್ರೆಯಿಂದೆಚ್ಚರಗೊಳ್ಳುವಂತೆ ದೇವತೆ ಹುಟ್ಟುವನು![೨]

ಮನುಷ್ಯರ ಶರೀರಗಳಲ್ಲಿ ಘಟಕವಾಗಿರುವ ಉಪಾದಾನಗಳಿಂದಲೇ ದೇವತೆಗಳ ಶರೀರವೂ ಆಗಿದೆ. ದೇವತೆಗಳಿಗೆ ಸಾವಿದ್ದರೂ ಮಾನವರಿಗಿದ್ದಂತೆ ರೋಗರುಜಿನಗಳಿಲ್ಲ. ಅವರಿಗೆ ಸಾವು ಬರುವುದೂ ಹುಟ್ಟಿನಂತೆ ವಿಚಿತ್ರವಾಗಿಯೆ. ಇನ್ನು ಆರು ತಿಂಗಳಿಗೆ ಆಯುಸ್ಸು ಮುಗಿಯುತ್ತೆ ಎನ್ನುವಾಗ ಅವರು ಧರಿಸಿದ್ದ ಹೂಮಾಲೆ (ಹುಟ್ಟುವಾಗ ದೇವತೆಯ ಜೊತೆಯಲ್ಲೇ ವಸ್ತ್ರ,

೧. 'ಅನ್ನೆಗಂ ಪೂರ್ವೋಕ್ತ ಸರ್ವಾರ್ಥ ಸಿದ್ಧೀಶ್ವರಂ ಆ ಭುವನಾಂಬಿಕೆಯ ಮುಖಾಂಬುಜಾಕರಮಂ ಪೊಕ್ಕಂ ಆ ಗರ್ಭಸರೋವರಾಂಬುವಿನೊಳ್ ಚಂದ್ರಬಿಂಬದಂತೆ ಸಂಕ್ರಮಿಸಿದಾಗಳ್....ಆ ಮಹಾದೇವಿಯ ಮುಖೇಂದುಮಣಿದರ್ಪಣಲಾವಣ್ಯ ರಸವಿಸರಮನೊದವಿಸೆ....ಗರ್ಭಂ ಬಳೆಯ ಬಳೆಯ' ಪಂಪ ಆ. ಪು. VII-೩೦ ವಚನ.

೨. ಅಂತು ಮಹಾಬಳವಿಭೇಂದ್ರಂ....ಈಶಾನಕಲ್ಪದೊಳಪ್ರತಿಹತ ಚಂಚತ್ಪಂಚರತ್ನ ಪ್ರಭಾಸರ ಪ್ರತಿಹತ ಸಂಧ್ಯಾಭ್ರವಿಭ್ರಮ ಭ್ರಾಜಿಯಪ್ಪ ದಿವ್ಯತಲ್ಪತಳದ ಪೊರೆಯೊಳಗೆ ತೊಳತೊಳತೊಳಗಿ ಪೊರಮಡುವೆಳನೇಸರ ಬಳಗದ ಬೆಳಗಿನೊಳಗೊಂದು,

ಮಿರುಗುವ ರತ್ನ ಭಿತ್ತಿಗಳ ದೀಧಿತಿಯಂ ನಿಜದೇಹ ದೀಪ್ತಿಗಳ್ |
ಮರಸೆ ಸಮಸ್ತದೀಪ್ತಿಪರಮಾಣುಗಳಿಂ ಗೆಡೆಗೊಂಡು ಜೌವನಂ ||
ನೆರೆದಿರೆ ದಿವ್ಯ ಮೂರ್ತಿ ಸಹಜಾಂಬರ ಭೂಷಣ ದಿವ್ಯಮಾಲೆಗಳ್ |
ನೆರೆದೊಡವುಟ್ಟೆ ಮುನ್ನೆ ಮಲಗಿಂದಿದಿರೆಚ್ಚರುವಂತೆ ಪುಟ್ಟಿದಂ ||

—ಪಂಪ, ಆ. ಪು. II-೬೨ ವಚನ ಮತ್ತು ಪದ್ಯ.

ಆಭರಣ, ಹೂಮಾಲೆಗಳೂ ಬಂದಿರುತ್ತವೆ) ತುಸು ತುಸುವಾಗಿ ಬಾಡುತ್ತ ಸಾವಿನ ಸೂಚನೆ ಯನ್ನೀಯುವುದು.[೩] ಇದನ್ನು ಕಂಡು ಕೆಲವು ದೇವತೆಗಳು ಸಂಕಟಗೊಂಡು ತತ್ತರಿಸಿ ಹೋಗುವುದೂ ಉಂಟು; ಆಗ ಸಾಮಾನಿಕ ದೇವತೆಗಳು ಸಾಯಲಿರುವವರಿಗೆ ಸಮಾಧಾನ ಹೇಳುವರು.[೪] ಸಾವು ಬಂದಾಗ ದೇವತೆಯೂ ಒಂದೆ ಮಾನವನೂ ಒಂದೆ; ಅದೇ ಸಂಕಟ ಅದೇ ಸಮಾಧಾನ!

ದೇವತೆಗಳು ಸಾಯುವಾಗ ಶರತ್ಕಾಲದ ಮೇಘದಂತೆ ಅದೃಶ್ಯರಾಗಿಬಿಡುವರು. ನೀಲಾಂಜನೆಯ ಸಾವನ್ನು ಪಂಪಮಹಾಕವಿ ಕಣ್ಣಿಗೆ ಕಟ್ಟುವಂತೆ ಹೃದಯವಿದ್ರಾವಕವಾಗಿ ಬಣ್ಣಿಸಿರುವುದನ್ನು ನೋಡಬಹುದು.[೫]

ದೇವತೆಗಳ ಅಷ್ಟೈಶ್ವರ್ಯವಾಗಲಿ, ಕಾಮಧೇನು ಕಲ್ಪವೃಕ್ಷವಾಗಲಿ, ವೈಕ್ರಿಯಿಕ ಶರೀರವಾಗಲಿ, ಕೊನೆಗೆ ದೇವ ವೈದ್ಯರಾಗಲಿ ಅವರನ್ನು ಸಾವಿನ ದವಡೆಯಿಂದ ಹೊರಗೆಳೆಯಲಾರರು! ದೇವತೆಗಳು, ನಾರಕಿಗಳು, **ಚರಮದೇಹಿಗಳು**[೬] ಎಂದಿದ್ದರೂ ಆಯುಸ್ಸು ಮುಗಿದು ಸಾಯಬೇಕೆ ವಿನ ಅವರಿಗೆ ಎಂಥ ಸಂದರ್ಭದಲ್ಲೂ ಅಪಮೃತ್ಯುವಿಲ್ಲ.

ಸಿದ್ಧ ಲೋಕ (ಈಷತ್ ಪ್ರಾಗ್ಭಾರ): ಪಂಚಾನುತ್ತರ ವಿಮಾನಗಳನ್ನು ದಾಟಿ ಹನ್ನೆರಡು ಯೋಜನ ಮೇಲಕ್ಕೆ ಹೋದರೆ ಸಿದ್ಧಶಿಲೆ (ಸಿದ್ಧಲೋಕ) ಸಿಕ್ಕುವುದು. ಇದಕ್ಕೆ 'ಈಷತ್ ಪ್ರಾಗ್ಭಾರ' 'ಎಂಟನೆ ಭೂಮಿ' ಎಂಬ ಹೆಸರುಗಳೂ ಉಂಟು. ಇದು ಎಂಟು ಯೋಜನ ದಪ್ಪವಾಗಿ, ನಲ್ವತ್ತೈದು ಲಕ್ಷ ಯೋಜನ ವಿಸ್ತಾರವಾಗಿಯೂ ಇದೆ. ಇದು ಗುಂಡಾಗಿ ಅಚ್ಚ ಬೆಳ್ಳಗೆ ಶ್ವೇತಛತ್ರಿಯಂತೆ ಕಾಣುವುದು. ಇದರ ಮೇಲೆ ಘನೋದಧಿ, ಘನವಾತ ಮತ್ತು ತನುವಾತಗಳೆಂಬ ಚಲಿಸದ ಗಾಳಿಯಿವೆ. [ತ್ರಿರವಾತವಲಯ] ಇದರಾಚೆ ಕೇವಲ ಆಕಾಶವಿದೆ.

೩. ಅಂತಾತ್ಮ ಪುಣ್ಯೋಪಾರ್ಜಿತಾಮರಲೋಕ ಭೋಗಮೇಕಸಾಗರಪ್ರಮಿತ ಜೀವಿತಮರುವಿಂಗಳುಳಿದುದೆಂಬಂದಿಗೆ,

ಸೂಡಿದ ಪಾರಿಜಾತದ ಸಮೇರುವ ಬಾಸಿಗಮೊಯ್ಯನೊಯ್ಯನಿ |
ರ್ಪೋಡಿದುದಂದಿನಂಗರುಚಿ ಕನ್ನಿಸಿದಾಯ್ತು ವಿಭೂಷಣಂಗಳೊಳ್ ||
ತೀಡುವ ರತ್ನಗಳ್ ಮಸುಳ್ದುವಾಗಲಿಯಾಯ್ತುನಿಜಿಪ್ಪೆಗಂ ಮೊಗಂ |
ಬಾಡೆ ಪಗಲ್ಪು ಸೋಚಿಸಿದುದಾದಿವಿಜಿಂಗವಸಾನ ಕಾಲಮಂ || ಪಂಪ, ಆ. ಪು. III-೩.

೪. ಧೃತಿಮಂ ಪತ್ತುವಿಟ್ಟು ಅತಿ ಪ್ರಲಾಪಂಗೆಯ್ವ ಲಲಿತಾಂಗದೇವನಂ ಸಾಮಾನಿಕದೇವರ್ಕಳೆಯ್ತಂದು
ನಿರ್ಗೋರ್ವರಂಗಳ್ಗವಸ್ಥಾಂತರ ಮಮರರ್ಜನಕಿಲ್ಲ ಮಿಂಚಾಂಗೆ ಸಾರು |
ತ್ತಿನಿಸಾದಂ ನಿಕ್ಕನಾದಂ ನೆಗಳುಗುಮೆಳೆಯುಮ್ಮಿಂತಕಂಗಿಲ್ಲ ದೇವಾ ||
ಗಣೆಯರ್ ಮಾದಾಂಪರೇ ಪೇಳ್ ಜನನಮೃತಿಜರಾತಂಕ ಶೋಕಾಗ್ನಿಯಿಂದಾ |
ವನುಮೀ ಸಂಸಾರದೊಳ್ ಬೇಯದವನೊಳನೆ ಶರಣ್ಯಾರ್ಹದಿಂದೊಂದುಮುಂಟೇ ||

—ಪಂಪ, ಆ. ಪು. III-೬.

೫. ಆ ಮಧುರಾಕಾರಲತಾ | ಕೋಮಳೆ ತನಗಾಗಳಾಯುರಂತಂ ಬರೆ ಸೌ |
ದಾಮಿನಿವೋಲ್ ಪ್ರೇಂಕಿಸೆ ಸುರ | ಕಾಮಿನಿ ರಂಗದೊಳದೃಶ್ಯೆಯಪ್ಪಮಿಮಾಗಳ್ ||

—ಪಂಪ, ಆ. ಪು., IX ೫೧.

೬. ಆದ್ಯವದಲ್ಲೇ ಮುಕ್ತರಾಗಬೇಕಾದವರು. ಮತ್ತೆ ಇನ್ನೊಮ್ಮೆ ಹುಟ್ಟಿದ ಅಂತೆ ಸಾಯದ ಪುಣ್ಯಾತ್ಮರು. ಏನಾದರೂ ಸಿದ್ಧರಾಗಬೇಕೆ ವಿನ ಬೇರೆ ಮಾರ್ಗವಿಲ್ಲ! ಇಂಥವರಿಗೆ 'ಚರಮದೇಹಿ' ಎನ್ನುವರು.

ಮತ್ತೇನೂ ಇಲ್ಲ.

ಮೂರನೆಯ ತನುವಾತವಲಯದ ನಡುವೆ ಅನಂತಸಿರಿಲೋಲರಾದ ಸಿದ್ಧ ಪರಮೇಷ್ಠಿಗಳಿರವರು. ಇವರು ಕಾಯೋತ್ಸರ್ಗ[1]ದಲ್ಲೋ ಅಥವ ಪಲ್ಯಂಕಾಸನದಲ್ಲೋ[2] ವಿರಾಜಮಾನರಾಗಿರುತ್ತಾರೆ. ಇವರ ಶರೀರಗಳು ಮೂರುವರೆ ಮೊಳದಿಂದ ಪ್ರಾರಂಭವಾಗಿ ಐನೂರಿಪ್ಪತ್ತೈದು ಬಿಲ್ಲುಗಳವರೆಗೆ ಎತ್ತರವಾಗಿರುವುದುಂಟು. ಇವರು ಮುಕ್ತರಾಗುವಾಗಿನ ದೇಹಪ್ರಮಾಣ ಎಷ್ಟಿತ್ತೋ ಅದಕ್ಕಿಂತ ತುಸು ಕಡಿಮೆಯಾಗಿ ಸಿದ್ಧಲೋಕದ ದೇಹಪ್ರಮಾಣವಿರುತ್ತದೆ. ಶರೀರದ ಪ್ರಮಾಣಗಳಲ್ಲಿ ಅಂತರವಿದ್ದರೂ ಇವರಲ್ಲಿ ಕೆಲವರು ನಿಂತಿದ್ದು ಕೆಲವರು ಮಂಡಿಸಿದ್ದರೂ (ಪಲ್ಯಂಕಾಸನದಲ್ಲಿ) ಎಲ್ಲಾ ಸಿದ್ಧರ ಶಿರಗಳು ಒಂದೇ ಮಟ್ಟದಲ್ಲಿರುತ್ತವೆ! ಇವರದು ಚಿನ್ಮಯ ಶರೀರಗಳಾದುದರಿಂದ ಒಂದರೊಡನೊಂದು ಬೆರತರೂ ಅವರಿಗೆ ನೂಕುನುಗ್ಗಲಾಗಲಿ ತಾಕಾಟವಾಗಲಿ ಕಾಣುವುದಿಲ್ಲ. ಬೋಧವೇ (ಜ್ಞಾನ) ಸಿದ್ಧರ ಶರೀರ! ಇಂದ್ರಿಯರಹಿತವಾದ ಜ್ಞಾನಕಾಯದಲ್ಲಿರುವ ಸಿದ್ಧರು ಪರಿಪೂರ್ಣ ಸುಖಿಗಳು! ಜ್ಞಾನಗೋಚರರಾದುದರಿಂದ ಸಿದ್ಧರು ಸಾಕಾರರೆನಿಸಿ, ಇಂದ್ರಿಯಗಳಿಗೆ ಅಗೋಚರರಾದುದರಿಂದ ನಿರಾಕಾರರೆನಿಸಿರುವರು.

ಸಂಸಾರದಲ್ಲಿ ತೊಳಲುವ ಜೀವಕ್ಕೆ 'ಅಷ್ಟಕರ್ಮ'ಗಳು ಕವಿದಿರುವುದರಿಂದ ಆ ಜೀವ ತನ್ನ ಸಹಜಸಂಪತ್ತಾದ ಅನಂತಸಿರಿಗೆ ಎರವಾಗಬೇಕಾಗಿದೆ. ಸಂಸಾರಿಜೀವಕ್ಕೆ ಇಂದ್ರಿಯಗಳ ನೆರವಿನಿಂದಲೇ ಅಷ್ಟೋ ಇಷ್ಟೋ ಜ್ಞಾನ ಹಾಗೂ ಸುಖ ದೊರೆಯಬೇಕು. ಸಿದ್ಧರಿಗಾದರೋ ಕರ್ಮದ ಕಾಟ ಎಳ್ಳನಿತೂ ಇರುವುದಿಲ್ಲ. ಅದರಿಂದ ಇವರ ಚೇತನಾ(ಜ್ಞಾನ)ಶಕ್ತಿ ತ್ರಿಕಾಲವನ್ನೂ ತ್ರಿಲೋಕವನ್ನೂ ಏಕಕಾಲದಲ್ಲಿ ಗ್ರಹಿಸಬಲ್ಲುದು. ಇದರಿಂದಲೇ ಇಂಥವರನ್ನು 'ಸರ್ವಜ್ಞ' 'ಸರ್ವದರ್ಶಿ' ಎಂದು ಕರೆಯುತ್ತಾರೆ. ಇದೇ ಆತ್ಮನ ಸಹಜಸ್ವರೂಪ! ಸಿದ್ಧರಿಗೆ ಶುಭಾಶುಭ ಕರ್ಮಗಳಿಂದ ಲಭ್ಯವಾಗುವ ಸುಖ ದುಃಖಗಳೂ ಇಲ್ಲ; ಕರ್ಮಗಳೂ ಇಲ್ಲ; ಹೀಗಿರುವಾಗ ಅವರು ಉಣ್ಣುವ ಮಾತೆಲ್ಲಿದೆ! ಅದರಿಂದ ಇವರು ಭೋಗಿಸುವ ಅನಂತ ಸುಖವನ್ನು 'ನಿರುಪಾಧಿಕ (ವಿಷಯನಿರಪೇಕ್ಷ) ಸ್ವರೂಪಾನುಭವಾನಂದ'ವೆನ್ನಬಹುದು. ಸಂಸಾರಿ ಜೀವರಿಗಿರುವಂತೆ ಸಿದ್ಧರಿಗೆ ಶರೀರವಿಲ್ಲದಿದ್ದರೂ ಅವರಲ್ಲಿ ಪ್ರಾಣಧಾರಣ ಮಾಡುವ ಜೀವಸ್ವಭಾವ [ಭಾವಪ್ರಾಣ] ಇದ್ದೇ ಇರುವುದು.[3]

ಪಣೆದೆಂಟುಂ ಕಿಲ್ಬಿಷಂಗಳ್ಕಿಡೆ ಕಿಡದಗುಣಂ ಪೊರ್ದೆ ಬಂದೆಂಟುಮಾದಂ |
ತಣಿವಂ ಕೈಕೊಂಡಮೂರ್ತರ್ಚರಮತನು ಸಮಾಕಾರರುದ್ಧೂತಲೇಪರ್ ||

೧. ಕಾಯೋತ್ಸರ್ಗ = ನಿಂತಿರುವುದು.

೨. ಪರಿಯಂಕಾಸನ ಅಥವ ಪಲ್ಯಂಕಾಸನ = ಸುಖಾಸನದಲ್ಲಿ ಕುಳಿತಿರುವುದು (ಚಕ್ಕಾಬಕ್ಕಾಲು)

೩. ತ್ರಿಲೋಕ ಸಾಮಾನ್ಯ ಸ್ವರೂಪವನ್ನು ವಿವರಿಸುವಾಗ ದ್ರ. ಸಂ. (ಸಂ. ಎ. ಶಾಂತಿರಾಜ ಶಾಸ್ತ್ರಿಗಳು); ಜೈ. ಸಿ. ಪ್ರ. (ಸಂ. ಶ್ರೀ ಅನಂತರಾವ ಮಂಟಗಣೀಕರ ಮಾಸ್ತರ); ಗೋ. ಸಾ., ಜೀ. ಕಾಂ., (ಸಂ. ಶ್ರೀ ಪಂಡಿತ್ ಗೋಪಾಲದಾಸಜೀ); ಜೈ. ಧ. (ಶ್ರೀ ಮಿರ್ಜಿ ಅಣ್ಣಾರಾಯರು): ಜೈ. ದ. ಪ. (ಶ್ರೀ ಮ. ಪ್ರ- ಪೂಜಾರ); ಆ. ಪು. ಸಂ. (ಸಂ. ಶ್ರೀ ಎಲ್. ಗುಂಡಪ್ಪ) ಈ ಗ್ರಂಥಗಳನ್ನು ಸಾಕಷ್ಟು ಬಳಸಿಕೊಂಡಿರುವೆನು:

ಪ್ರಣುತರ್ನಿತ್ಯರ್ಜಗನ್ಮಂಗಳ ನಿಳಯರನಂತರ್ತ್ರಿಲೋಕೈಕ ಚೂಡಾ |
ಮಣಿಗಳ್ಸಿದ್ಧರ್ ಸ್ವಕೀಯ ಪ್ರಭುತೆಯನೆಮಗಂ ಮಾಳ್ಕತಿಪ್ರೀತಿಯಿಂದಂ[1] ||

ತ್ರಿಲೋಕ ಜಿನವಂದನಾ ಚರಿತೆ[2] ಮೂರು ಲೋಕದಲ್ಲೂ ಇರುವ ಅಕೃತಿಮ ಚೈತ್ಯಾಲಯಗಳನ್ನು ಇದರಲ್ಲಿ ವಿವರಿಸಿದೆ. ಸುಮಧುರವಾಗಿ ಹಾಡುವಂತಿರುವುದರಿಂದ ಜಿನಭಕ್ತೆಯರು ದಿನವೂ ಸಂಧ್ಯಾಕಾಲದಲ್ಲಿ ಇದನ್ನು ಹಾಡಿಕೊಂಡು ಪುಳಕಿತರಾಗುವರು. ಬೇಸರ ತರುವಂತೆ ಇರುವ ತ್ರಿಲೋಕದ ಭೂಗೋಳ ಹಾಗು ಖಗೋಳ, ಸಂಗೀತದ ಸಂಸರ್ಗದಿಂದಲೂ ಭಕ್ತಿಯ ರಸಲೇಪನದಿಂದಲೂ 'ತ್ರಿಲೋಕ ಜಿನವಂದನಾ ಚರಿತೆ'ಯಲ್ಲಿ ರಸದಾಗರವಾಗಿರುವುದೆಂದರೆ ಅತಿಶಯೋಕ್ತಿಯಾಗದು. ಭಕ್ತಿಯಿಲ್ಲದವರಿಗೆ ಇಲ್ಲೂ ರಸಾನಂದವಾಗದಿರಬಹುದು!

ಮನಸಿಜಮರ್ಧನ ಮನುಕುಲವರ್ಧನ | ಘನಕರ್ಮಾರಣ್ಯ ನಿರ್ದಹನ |
ಮುನಿಜನ ಹೃದಯಾಬ್ಜಭಾಸ್ಕರ ಪುರುಜಿನ | ಅನುಪಮ ಸುಖವೀವುದೆಮಗೆ || ೧ ||
ಐದು ಮಿಥ್ಯಾಂಧಕಾರದಿ ಬಟ್ಟೆಗಾಣದೆ | ಐದು ಸಂಸಾರಾರಣ್ಯದೊಳು ||
ಐದಿಕಂಗೆಟ್ಟು ಬಂದೆನು ಜಿನಧರ್ಮಕ್ಕೆ | ಐದಿಸೆನ್ನನು ಮೋಕ್ಷಪುರಿಗೆ || ೨ ||
ಮೂರು ತೆರದ ಕರ್ಮಗಳ ಸುಟ್ಟು ಮುಕ್ತಿಗೆ | ಸಾರವೆನಿಪ ಸಿದ್ಧರೆಡೆಗೆ ||
ಭೂರಿಭಕ್ತಿಯೊಳು ವಂದಿಸಿ ನಾನು ಪೇಳುವೆ | ಮೂರು ಲೋಕದ ಚೈತ್ಯಾಲಯವ || ೩ ||
ಭವನದೊಳೇಳ್ಕೋಟಿ ಎಪ್ಪತ್ತೆರಡು ಲಕ್ಷ | ಭವಹರ ಜಿನನಿಲಯಗಳ ||
ಅವರೊಳಿರುವ ಜಿನಕೃತಿಗಳ ನಮಿಸಲು | ಭವಭಯ ನಿರ್ನಾಶವಹುದು || ೪ ||
ಮೇರು ಐದರೊಳೆಂಬತ್ತುಗೃಹದೊಳಿಹ | ಮಾರವಿಜಯ ಜಿನಕೃತಿಯ ||
ಸಾರಿ ಸಾಷ್ಟಾಂಗವೆರಗಿ ನುತಿಸುವರ ಸಂ | ಸಾರದ ಭ್ರಮಣೆ ಕೆಡುವುದು || ೫ ||
ಕುಲಗಿರಿಗಳೊಳು ಮೂವತ್ತು ಸುರತ್ನದ | ನಿಲಯದೊಳಿಹ ಜಿನಕೃತಿಯ ||
ಅಲಸದೆ ಮೂರುಕಾಲದೊಳು ವಂದಿಸುವರು | ನೆಲೆಯಹರಕ್ಷಯ ಸುಖಕೆ || ೬ ||
ವಿಜಯಾರ್ಧಗಿರಿಗಳೊಳಿಪ್ಪ ನೂರೆಪ್ಪತ್ತು | ವಜ್ರಹರ ಜಿನನಿಲಯಗಳ ||
ಭಜಿಸುವ ಭವ್ಯಸಮೂಹಕ್ಕೆತಪ್ಪದೆ | ಅಜರಾಮರ ಸುಖವಹುದು || ೭ ||
ವಕ್ಷರಾ ಚಲದೊಳಗಿಹ ನೂರುವಸತಿಯ | ಮೋಕ್ಷನಾಯಕನ ಕೃತಿಗಳ ||
ಈಕ್ಷಿಪ ನುತಿಯಿಪ ಭವ್ಯಸಮೂಹಕ್ಕೆ | ಅಕ್ಷಯಪದಪ್ರಾಪ್ತಿಯಹದು || ೮ ||
ಇಷ್ವಾಕಾರಾದ್ರಿ ನಾಲ್ಕರ ಮೇಲೊಪ್ಪುವ | ಐಶ್ವರ್ಯ ನಿಲಯದೊಳಿರ್ಪ ||
ವಿಶ್ವದರ್ಶಿಯ ಪ್ರತಿಕೃತಿಗಳ ನಮಿಸಲು | ಶಾಶ್ವತ ಸುಖವನ್ನೈದುವರು || ೯ ||
ಜಂಬೂಶಾಲ್ಮಲಿ ವೃಕ್ಷಗಳ ಪತ್ತುನಿಲಯದ | ಶಂಬರಾರಿಯ ಪ್ರತಿಮೆಗಳ ||
ಸಂಭ್ರಮದಿಂದ ವಂದಿಸುವರು ಮುಕ್ತಿ ಶ್ರೀ | ರಂಭೆಗೆ ರಮಣರಾಗುವರು || ೧೦ ||
ಮಾನುಷೋತ್ತರ ಪರ್ವತಾಗ್ರದೊಳಿಹ ನಾಲ್ಕು | ನಾನಾರತ್ನದ ಗೃಹದೊಳಗೆ ||
ಮೀನಪತಾಕವಿಜಯ ಜಿನಕೃತಿಗಳ | ಆನಂದದಿಂದ ವಂದಿಸುವೆ || ೧೧ ||
ನಂದೀಶ್ವರ ದ್ವೀಪದೊಳಗೈವತ್ತೆರಡು ಶ್ರೀ | ಮಂದಿರಂಗಳು ನೆಲಸಿಹುವು ||
ಚಂದದ ಪರ್ವತಂಗಳ ನಾನು ಪೇಳುವೆ | ಒಂದು ಸಂಕ್ಷೇಪ ಮಾತ್ರದೊಳು || ೧೨ ||

೧. ಪಂಪ, ಆ. ಪು, I-೨.

೨. ಇಲ್ಲಿನ ಪದ್ಯಭಾಗವನ್ನು ಜಿ. ಭ. ಸಾ., ಪು. ೭೩ (ಸಂ. ಎ. ಶಾಂತಿರಾಜ ಶಾಸ್ತ್ರಿಗಳು) ಗ್ರಂಥದಿಂದ ಉದ್ಧರಿಸಿರುವೆನು.

ಅಂಜನಗಿರಿಗಳೊಳಿಹ ನಾಲ್ಕು ಗೃಹದ ನಿ | ರಂಜನ ಜಿನಕೃತಿಗಳನು ||
ಅಂಜಲಿಯನು ಮುಗಿದೆರಗುವವರ ಪಾಪ | ಭಂಜನವಹುದು ಶೀಘ್ರದೊಳು || ೧೩ ||
ದಧಿಮುಖ ಪರ್ವತಾಗ್ರದೊಳಿಪ್ಪ ಪದಿನಾರು | ಮದನಾರಿ ನಿಲಯ ಬಿಂಬಗಳ ||
ಮುದದಿಂದ ಮೂರುಕಾಲದೊಳು ವಂದಿಸುವರು | ಸದಮಲ ಸುಖವನ್ನೈದುವರು || ೧೪ ||
ರತಿಕರಗಿರಿ ಮೂವತ್ತೆರಡರ ಮೇಲಿಹ | ಅತಿಶಯನಿಲಯ ಬಿಂಬಗಳ ||
ನುತಿಸುವ ಭವ್ಯಜನರು ಸ್ವರ್ಗಮೋಕ್ಷಕ್ಕೆ | ಪತಿಗಳಹರು ಮುದದಿಂದ || ೧೫ ||
ಕುಂಡಲ ಪರ್ವತದೊಳು ನಾಲ್ಕು ಗೃಹನಿತ್ಯ | ಮಂಡಿತವವರೊಳಗಿರುವ ||
ಹಿಂಡುಕರ್ಮವಗೆಲಿದ ಜಿನರಾಜ ಕೃತಿಗಳ | ಕೊಂಡಾಡಿದರೆ ಪಾಪಹರವು || ೧೬ ||
ವರರುಚಕಾದ್ರಿಯೊಳಿಹ ನಾಲ್ಕು ನಿಲಯದ | ಅರಹಂತರ ಕೃತಿಗಳನು ||
ಸ್ಮರಿಸಿಮನದಿ ಭಾವಿಪ ಭವ್ಯಜನರಿಗೆ | ನಿರುಪಮ ಸುಖ ತಪ್ಪದಹುದು || ೧೭ ||
ಮಧ್ಯಮಲೋಕದ ನಾನೂರ್ಯೆವತ್ತೆಂಟು | ಶುದ್ಧಹೃದಯದಿಂದ ನಮಿಸಿ ||
ಊರ್ಧ್ವಲೋಕದ ಜ್ಯೋತಿರ್ವ್ಯಂತರ ಲೋಕದೊಳಿರ್ದ | ಚೈತ್ಯಗಳ ವಂದಿಸುವೆ || ೧೮ ||

ಇಲ್ಲಿಗೆ ಮಧ್ಯಲೋಕದ ಚೈತ್ಯಾಲಯಗಳ ವಿವರಣೆ ಮುಗಿಯಿತು. ಸಾಮಾನ್ಯವಾಗಿ ಎಲ್ಲ ಪ್ರಮುಖ ಪರ್ವತಗಳನ್ನು ಇಲ್ಲಿ ಹೆಸರಿಸಿರುವರು. ಇದರ ಜೊತೆಗೆ ನಕ್ಷೆಯನ್ನೂ ಕೊಟ್ಟು ಅದರಲ್ಲಿ ಇವನ್ನೆಲ್ಲ ಗುರುತಿಸಿದ್ದರೆ ಭಾವುಕರ ಕಲ್ಪನೆಯನ್ನು ಇನ್ನೂ ಕೆರಳಿಸಿ ಭಕ್ತಿಯನ್ನು ಉದ್ದೀಪನಗೊಳಿಸಬಹುದಾಗಿತ್ತು.

ವ್ಯಂತರಲೋಕದಸಂಖ್ಯಾತವಸತಿಯ | ದಂತಿವೈರಿಯ ಪೀಠಗಳಲಿ |
ಕಂತುವಿಜಯ ಜಿನರಾಜನ ಕೃತಿಗಳ | ಸಂತೋಷದಿಂದ ವಂದಿಸುವೆ[1] || ೧೯ ||
ಜ್ಯೋತಿರ್ಲೋಕದಸಂಖ್ಯಾತ ವಸತಿಯ | ವೀತರಾಗನ ಪ್ರತಿಕೃತಿಯ ||
ಪ್ರೀತಿಯಂ ಮೂರು ಕಾಲದೊಳು ವಂದಿಸುವರ | ಪಾತಕಪರಿದೋಡುವುದು || ೨೦ ||
ಮುವತ್ತೆರಡುಲಕ್ಷ ಸೌಧರ್ಮಕಲ್ಪದ | ದೇವರ ದೇವನಾಲಯವ ||
ದೇವೇಂದ್ರನುತಪಾದ ಜಿನರಾಜಕೃತಿಗಳ | ಭಾವಶುದ್ಧಿಯೊಳು ವಂದಿಸುವೆ || ೨೧ ||
ಈಶಾನಕಲ್ಪದಿಪ್ಪತ್ತೆಂಟು ಲಕ್ಷ ನಿ | ವಾಸದೊಳಿರ್ದು ರಾಜಿಸುವ |
ಸಾಸಿರನಾಮದೊಡೆಯ ಜಿನಕೃತಿಗಳ | ಕೇಸರಡಿಗಳಿಗೆರಗುವೆನು || ೨೨ ||
ಮೇಲೆ ಸನತ್ಕುಮಾರದೊಳು ದ್ವಾದಶಲಕ್ಷ| ಆಲಯದೊಳಗೆ ರಾಜಿಸುವ ||
ಕಾಲವಿಜಯ ಜಿನರಾಜನ ಕೃತಿಗಳ | ಕಾಲತ್ರಯದೊಳು ವಂದಿಸುವೆ || ೨೩ ||
ಎಸೆವ ಮಾಹೇಂದ್ರಕಲ್ಪದೊಳೆಂಟು ಲಕ್ಷ ರಂ | ಜಿಸುವ ಚೈತ್ಯಾಲಯದೊಳಗೆ ||
ಮಿಸುಗುವ ಶ್ರೀ ಜಿನಬಿಂಬಗಳ ಪಾದ | ಬಿಸರುಹಗಳಿಗೆರಗುವೆನು || ೨೪ ||
ಬ್ರಹ್ಮಯುಗಲದೊಳು ನಾಲ್ಕು ಲಕ್ಕೆಯು ಪರ | ಬ್ರಹ್ಮನಾಲಯಗಳೊಳಿರ್ಪ |
ಬ್ರಹ್ಮ ಮಹೇಶ್ವರಾಚ್ಯುತರಾಜಜಿನರಿಗೆ | ಸುಮ್ಮನದಿಂದ ವಂದಿಸುವೆ || ೨೫ ||
ಲಾಂತವಕಾಪಿಷ್ಠದೈವತ್ತು ಸಾಸಿರ | ದಂತಿವೈರಿಯ ಪೀಠದೊಳಗೆ ||
ಕಂತುವಿಜಯ ಜಿನರಾಜನ ಕೃತಿಗಳ | ಸಂತೋಷದಿಂದ ವಂದಿಸುವೆ || ೨೬ ||

೧. ಸಮವಸರಣದಲ್ಲಿ ರತ್ನಪೀಠತ್ರಯದ ಮೇಲೆ ದಿಕ್ಕಿಗೊಂದರಂತೆ ಮುಖಮಾಡಿರುವ ನಾಲ್ಕು ಸಿಂಹಗಳಿರುವುವು. ಅವುಗಳ ಮೇಲೆ ಅರಳಿರುವ ಪೊಂದಾವರೆಯ ಮೇಲೆ ಚತುರಾನನನಾದ ಜಿನೇಂದ್ರ ವಿರಾಜಮಾನನಾಗಿರುವಂತೆ ವ್ಯಂತರಲೋಕದ ಬಸದಿಗಳಲ್ಲಿ ಜಿನಪ್ರತಿಮೆಗಳಿವೆ.

ಮತ್ತೆ ನಾಲ್ವತ್ತು ಸಾಸಿರ ಶುಕ್ರಯುಗಲದ | ಚೈತ್ಯಾಲಯಗಳೊಳಿರ್ಪ ||
ಚಿತ್ತಜವಿಜಯ ಸರ್ವಜ್ಞರ ಕೃತಿಗಳ | ಉತ್ತಮಾಂಗದೊಳು ವಂದಿಸುವೆ || ೨೭ ||
ಆರುಸಾಸಿರ ಜಿನವಾಸಗಳುಂಟು ಸ | ತಾರ ಸಾಹಸ್ರಾರಗಳಲಿ ||
ಮಾರವಿಜಯ ಜಿನರಾಜನ ಕೃತಿಗಳ | ಮೂರುಕಾಲದೊಳು ವಂದಿಸುವೆ || ೨೮ ||
ಆನತಪ್ರಾಣತ ಆರಣಾಚ್ಯುತ ನಾಲ್ಕು | ಸ್ಥಾನದೇಳ್ನೂರು ವಸತಿಯ ||
ಭೂನುತ ತೀರ್ಥನಾಥರ ಪ್ರತಿಕೃತಿಗಳ | ಆನಂದದಿಂದ ವಂದಿಸುವೆ || ೨೯ ||
ಅಧೋಗ್ರೈವೇಯಕ ಮೂರಕೆ ನೂರಹನ್ನೊಂದು | ಸದನಮುಂಟವರೊಳಗಿರುವ ||
ಮದನವಿಜಯ ಅರಹಂತರ ಕೃತಿಗಳ | ಮುದದಿಂದ ನಾನು ವಂದಿಸುವೆ || ೩೦ ||
ಮಧ್ಯಗ್ರೈವೇಯಕ ಮೂರಕ್ಕೆ ನೂರೇಳು | ಊರ್ಧ್ವಗ್ರೈವೇಯಕ ತ್ರಯಕೆ ||
ಇದ್ದವು ತೊಂಭೊತ್ತೊಂದವರೊಳು ಜಿನ | ಸಿದ್ಧ ಕೃತಿಗಳ ವಂದಿಸುವೆ || ೩೧ ||
ಅನುದಿಶೆಗಳೊಳು ಒಂಭತ್ತು ನಿಲಯ ರತ್ನ | ಕನಕಮಯಂಗಳೊಳಿಪ್ಪ ||
ಘನಘಾತಿಕರ್ಮದಹನ ಜಿನಕೃತಿಗಳ | ಅನವರತದೊಳು ವಂದಿಸುವೆ || ೩೨ ||
ಪಂಚಾಣುತ್ತರೆಯೊಳೊಂದೊಂದಕ್ಕೆ ಒಂದೊಂದು ಪಂಚನಿಲಯದೊಳಗಿರ್ಪ ||
ಪಂಚಕಲ್ಯಾಣನಾಯಕ ಜಿನಕೃತಿಗಳ | ಪಂಚಮುಷ್ಟಿಯೊಳು ವಂದಿಸುವೆ || ೩೩ ||
ಸುರಚರ ಎಂಬತ್ತನಾಲ್ಕು ಲಕ್ಷದಮೇಲೆ | ನೆರೆ ತೊಂಬತ್ತೇಳು ಸಾಸಿರದ ||
ನಿರುತ ಇಪ್ಪತ್ತಮೂರಾಲಯದೊಳಗಿಹ | ಅರುಹಕೃತಿಗಳ ವಂದಿಸುವೆ || ೩೪ ||
ಮುರುಲೋಕದ ಚೈತ್ಯವೆಂಟುಕೋಟಿಯುಮೈವ | ತ್ತಾರು ಲಕ್ಷವು ಮುದದಿಂದ ||
ನೆರೆತೊಂಬತ್ತೇಳು ಸಾಸಿರದೊಂದಧಿಕ ನಾ | ನೂರೆಂಬತ್ತೊಂದಕೆರಗುವೆ[1] || ೩೫ ||
ಮೂರುಲೋಕದ ಜಿನಬಿಂಬಗಳೊಂಬೈ | ನೂರಿಪ್ಪತ್ತೈದರೆ ಕೋಟಿ ||
ಮೂರು ಲಕ್ಕೆಯುಮಿಪ್ಪತ್ತೇಳು ಸಾಸಿರದೊಂಬೈ | ನೂರ ನಾಲ್ವತ್ತೆಂಟನು ನುತಿಪೆ[2] || ೩೬ ||

ಮೂರು ಲೋಕದ ಚೈತ್ಯಾಲಯಗಳನ್ನು ವಿವರಿಸಿಯಾದ ಮೇಲೆ ಭಕ್ತರ ಗಮನವನ್ನು ಸಮವಸರಣದ ರಚನಾ ವಿನ್ಯಾಸದ ಹಾಗೂ ಅಲ್ಲಿನ ವೈಭವಯುತವೂ ಭವ್ಯತಮವೂ ಆದ ವಾತಾವರಣದ ಕಡೆ ಸೆಳೆದಿರುವರು.

ಅಭಿಷೇಕಪ್ರೇಕ್ಷಣಕ್ರೀಡನ ಸಂಗೀತ | ವಿಭವನಾಟಕ ಲೋಕನಾದ ||
ವಿಬುಧೇಂದ್ರನರ್ತನ ಮಂಟಪಗಳು ರತ್ನ | ಪ್ರಭೆಯಿಂದ ಬೆಳಗನಾಂತಿಹುವು || ೩೭ ||
ಮೂರುರತ್ನದ ಶಾಲೆ ಸ್ತೂಪ ಮಾನಸ್ತಂಭ | ಚಾರುಗೋಪುರಪ್ರಾಸಾದ ||
ಭೂರಿವೈಭವ ಚೈತ್ಯವೃಕ್ಷಕೇತನಗಳು | ಓರಂತೆ ವನ ಚತುಷ್ಟಯವು || ೩೮ ||
ಭೇರಿಮೃದಂಗ ಕಹಳೆ ವೇಣುವೀಣಾದಿ | ಭೋರೆಂದುಲಿವವಾದ್ಯನಿಕರ ||
ಮರಕತತೋರಣ ರತ್ನದತೋರಣ | ಸಾರಮಂಗಲ ಧೂಪಘಟವು || ೩೯ ||
ಅನುಪಮ ಗಂಧ ಕುಟಿಗಳ ಮಧ್ಯದೊಳಿರ್ಪ | ಧನುಪಂಚಶತದುತ್ತುಂಗ ||
ದಿನಕರಕೋಟಿಪ್ರಕಾಶ ಕಾಂತಿಯನುಳ್ಳ | ಜಿನರಾಜ ಪ್ರತಿಬಿಂಬಗಳನು || ೪೦ ||
ಮಣಿಮಯದಿಂದ ಭೂಷಿತ ಅಕೃತ್ರಿಮ | ಜಿನರಾಜ ಬಿಂಬಗಳನು ||
ಮನಸುವಚನಕಾಯ ತ್ರಿಕರಣಶುದ್ಧಿಯಿಂ | ದನವರತದೊಳು ವಂದಿಸುವೆ || ೪೧ ||

೧. ೮೩೬೯೭೪೮೨ (ಎಂಟು ಕೋಟಿ ಮುವತ್ತಾರುಲಕ್ಷ ತೊಂಬತ್ತೇಳುಸಾವಿರ ನಾನೂರ ಎಂಬತ್ತೆರಡು)
೨. ೯೨೫೫೩೨೭೯೪೮ (ಮೂರು ಲೋಕದ ಜಿನಬಿಂಬಗಳ ಸಂಖ್ಯೆ)

ಅಷ್ಟಮಹಾಪ್ರಾತಿಹಾರ್ಯ ಶೋಭಿತವಾಗಿ | ಶಿಷ್ಟ ಪಲ್ಯಂಕಯೋಗದಲಿ ||
ದೃಷ್ಟಿಸಿನೋಳ್ಪಾಗ ಬಸದಿಯೊಂದಂದಕ್ಕೆ | ಅಷ್ಟೋತ್ತರ ಶತಬಿಂಬಗಳಿಹವು || ೪೨ ||
ಮೂರುಲೋಕದ ಮಸ್ತಕದೊಳು ಧವಲಚ್ಛತ್ರಾ | ಕಾರದ ಶಿಲೆಯಮೇಲಿರ್ಪ ||
ಸಾರಗುಣಗಳೆಂಟ ಧರಿಸಿದ ಸಿದ್ಧರ | ಭೂರಿಭಕ್ತಿಯೊಳು ವಂದಿಸುವೆ || ೪೩ ||
ಮತ್ತೆನೂರೆಪ್ಪತ್ತು ಧರ್ಮಕ್ಷೇತ್ರದೊಳುಳ್ಳ | ಚೈತ್ಯಾಲಯ ಬಿಂಬಗಳನು ||
ಚಿತ್ತದೊಳ್‌ವರ್ತಿಪ ಸೂರಿ ದೇಶಕ ಸಾದು | ಮೊತ್ತಕೆ ನಾನು ವಂದಿಸುವೆ || ೪೪ ||
ಅನುಪಮಗರ್ಭಾವತರಣ ಜನ್ಮೋತ್ಸವ | ಜನನುತ ಪರಿನಿಷ್ಕ್ರಮಣ ||
ಅನಘಕೇವಲ ಬೋಧ ನಿರ್ವಾಣಕಲ್ಯಾಣ | ಗಳನು ವಂದಿಪೆನನವರತ || ೪೫ ||
ಚವ್ವೀಸಜಿನರಿಗೆ ನಿರ್ವಾಣಕಡೆಯಾಗಿ | ಸರ್ವಮಂಗಳವೆತ್ತು ಮೆರೆವ ||
ಪರ್ವತರಾಜ ಕೈಲಾಸ್[೧] ಚಂಪಾಪುರ್[೨] | ಗೀರ್ವಾಣನುತ ಊರ್ಜಯಂತ್[೩] || ೪೬ ||
ಸಮ್ಮೇದಪರ್ವತ್[೪] ಪಾವಾಪುರ್[೫]ವೆಂಬ | ಕರ್ಮಕ್ಷಯದ ಭೂಮಿಗಳನು ||
ಕರ್ಮವ ಜಯಿಸಬೇಕೆಂದಾನು ಮುದದಿಂದ | ಸರ್ವಕಾಲದೊಳು ವಂದಿಸುವೆ || ೪೭ ||
ಅರಹಂತ ಸಿದ್ಧರಾಚಾರ್ಯರುಪಾಧ್ಯಾಯ | ವರಸರ್ವಸಾಧು ಪಂಚಕವ ||
ಪರಮ ಶ್ರೀ ಜಿನಧರ್ಮ ಶ್ರುತಬಿಂಬಾಲಯಗಳ | ಪಿರಿದು ಭಕ್ತಿಯೊಳುವಂದಿಸುವೆ || ೪೮ ||
ಈ ವ್ಯವಹಾರ ಭಾವನೆಯಿಂದ ಭವ್ಯರು | ದೇವೇಂದ್ರ ಪದವ ಪಡೆವರು ||
ಭಾವಿಸಿ ತಮ್ಮ ನಿಜಾತ್ಮನ ನೋಡಲು | ತಾವೇ ನಿರಂಜನರಹರು || ೪೯ ||

---

(೧) **ಕೈಲಾಸಪರ್ವತ:** "ದಕ್ಷಿಣ ಭಾರತದಲ್ಲಿ ಗಂಗಾತೀರದ ಹತ್ತಿರ ಕೈಲಾಸ ಪರ್ವತವಿದೆ. (ಶ್ರೀ ಎಲ್. ಗುಂಡಪ್ಪನವರು, ಆ. ಪು. ಸಂ., ಪೀ., ಪು. ೪೫) "ಆದಿ ತೀರ್ಥಂಕರರು ಮುಕ್ತರಾದ ಕೈಲಾಸ ಪರ್ವತ ಎಲ್ಲಿದೆಯೋ ಗೊತ್ತಿಲ್ಲ" (ಶ್ರೀ ಮಿರ್ಜಿ ಅಣ್ಣಾರಾಯರು, ನಾ. ಕಂ. ನಾ., ಪು. ೧೪೩)

(೨) **ಚಂಪಾಪುರ:** "ಬಿಹಾರದಲ್ಲಿರುವ ಬಾಗಲಪುರಕ್ಕೆ ಹೊಂದಿ ಹಬ್ಬಿರುವ ನಾಥನಗರಿಯ ಬಳಿ ಗಂಗಾನದಿಗೆ ಕೆಲವು ನಾಲೆಗಳನ್ನು ತೋಡಿರುವರು; ಅವೆಲ್ಲ ಪ್ರಾಚೀನಕಾಲದವು. ಆ ನಾಲೆಗಳಲ್ಲಿ ಒಂದಕ್ಕೆ 'ಚಂಪಾ' ಎಂದೂ ಹೆಸರಿದೆ. ಅದರ ನೆರೆಯಲ್ಲಿ ಹಬ್ಬಿದ ಊರಿಗೇನೆ ಪ್ರಾಚೀನಕಾಲದಲ್ಲಿ ಚಂಪಾನಗರ ಎಂಬ ಹೆಸರಿತ್ತು. ಇಲ್ಲಿ ವಾಸುಪೂಜ್ಯ ತೀರ್ಥಂಕರರ ಪಂಚಕಲ್ಯಾಣಗಳೂ ಆಗಿವೆ; (ಶ್ರೀ ಮಿರ್ಜಿ ಅಣ್ಣಾರಾಯರು, ನಾ. ಕಂ. ನಾ., ಪು. ೫೫)

(೩) **ಊರ್ಜಯಂತ:** ಜುನಾಗಡಕ್ಕೆ ಊರ್ಜಯಂತ ಗಿರಿ ಮೂರು ಮೈಲಿಯಾಗುವುದು. ನೇಮಿತೀರ್ಥಕರರು ಮುಕ್ತರಾದುದಿಲ್ಲೆ; ಇದಕ್ಕೆ ಗಿರನಾರ್ ಎಂಬ ಹೆಸರೂ ಉಂಟು. ಧರಸೇನರು ಜೈನಾಗಮ ಸಂರಕ್ಷಣೆಗಾಗಿ ಪುಷ್ಪದಂತ ಹಾಗೂ ಭೂತಬಲಿಗಳನ್ನು ಕೂರಿಸಿಕೊಂಡು ತರಪೇತಿತ್ತುದು ಈ ಗಿರಿಯ ಚಂದ್ರಗುಹೆಯಲ್ಲೇ! (ಶ್ರೀ ಮಿರ್ಜಿ ಅಣ್ಣಾರಾಯರು, ನಾ. ಕಂ. ನಾ., ಪು. ೧೪೫)

(೪) **ಸಮ್ಮೇದ ಪರ್ವತ:** ಅಲಹಾಬಾದಿನಿಂದ ಕಲ್ಕತ್ತೆಗೆ ಹೊರಡುವ ರೈಲಿನಲ್ಲಿ ಹೋದರೆ 'ಗೋಮಾ' ನಿಲ್ದಾಣ ಸಿಕ್ಕುವುದು. ಅಲ್ಲಿಳಿದು ಲೋಕಲ್ ಗಾಡಿಯಲ್ಲಿ 'ಪಾರಿಶ್ವನಾಥ' ನಿಲ್ಮನೆಗೆ ಹೋಗಬೇಕು. ಇಲ್ಲಿಗೆ ಸಮ್ಮೇದಶಿಖರ ೧೨ ಮೈಲಿಯಾಗುವುದು. ಈ ಗಿರಿಗೆ 'ಪಾರಿಶ್ವನಾಥ ಹಿಲ್' ಎಂಬ ಹೆಸರೂ ಉಂಟು. ಈ ಪರ್ವತದಲ್ಲಿ ಇಪ್ಪತ್ತು ಜನ ತೀರ್ಥಂಕರರು ಮುಕ್ತರಾಗಿರುವರು. ಇವರಲ್ಲಿ ಕಡೆಯವರು ಪಾರ್ಶ್ವನಾಥರು (ಶ್ರೀ ಮಿರ್ಜಿ ಅಣ್ಣಾರಾಯರು ನಾ. ಕಂ. ನಾ., ಪು. ೨೨-೨೭)

(೫) **ಪಾವಾಪುರ:** ಬಾಗಲಪುರದಿಂದ ಗಯೆಗೆ ಹೋಗುವ ರೈಲಿನಲ್ಲಿ ಹೊರಟು 'ನವದಾಹ'ದಲ್ಲಿ ಇಳಿದು ಅಲ್ಲಿಂದ ಹದಿಮೂರು ಮೈಲಿ ಹೋದರೆ ಪಾವಾಪುರಿ ಸಿಗುವುದು. ಇದು ಮಹಾವೀರರ ನಿರ್ವಾಣಕ್ಷೇತ್ರ (ಮಿರ್ಜಿ ಅಣ್ಣಾರಾಯರು, ನಾ. ಕಂ. ನಾ., ಪು. ೫೨-೫೭.)

ಇಂತೀ ತ್ರೈಲೋಕ್ಯ ಭೂಷಣವೆಂಬ ಚರಿತೆಯ | ಸಂತೋಷದಿಂದೋದುವರು ||
ಚಿಂತಿಸುವರು ಪೇಳುವರು ನಿ | ರಂತರ ಸುಖವ ಪಡೆವರು || ೫೦ ||

ತ್ರಿಲೋಕದ ಪ್ರಮುಖವಾದ ಪ್ರದೇಶಗಳನ್ನೂ ಪರ್ವತಗಳನ್ನೂ ಈ ಚರಿತೆಯಲ್ಲಿ ಅಡಕ ಮಾಡಿರುವರು; 'ಸಮವಸರಣ', 'ಸಿದ್ಧಕ್ಷೇತ್ರ'ಗಳನ್ನು ಅಂದವಾಗಿ ಜೋಡಿಸಿರುವರು; ಪಂಚ ಪರಮೇಷ್ಠಿಗಳನ್ನೂ 'ಪಂಚಕಲ್ಯಾಣ'ಗಳನ್ನೂ ಜೊತೆಗೆ ತೀರ್ಥಕ್ಷೇತ್ರಗಳನ್ನೂ ಇದರಲ್ಲಿ ಬೆಸೆದಿರುವರು. ಹಾಡುಗಬ್ಬದ ಓಟ ತಂಗಾಳಿಯ ತೀಟವಾಗಿ ಭಕ್ತವೃಂದ ನಿರಾಯಾಸವಾಗಿ ಮೂರು ಲೋಕವನ್ನೂ ಮಾನಸಿಕವಾಗಿ ಸುತ್ತಿ ಸಂತೃಪ್ತರಾಗುವರು! ಹೆಜ್ಜೆ ಹೆಜ್ಜೆಗೂ ಜಿನಾಲಯ, ಜಿನಬಿಂಬಗಳ ದರ್ಶನಮಾಡಿ ಕೃತಾರ್ಥರಾಗುವರು. ಶಾಸ್ತ್ರದ ಚೌಕಟ್ಟಿನಲ್ಲಿ ಇಷ್ಟನ್ನೆಲ್ಲ ಗ್ರಹಿಸಬೇಕಾಗಿದ್ದರೆ ಅದೂ ನೀರಸವಾದ ವಿವರಣೆಗೆಲ್ಲ ಕಿವಿಗೊಡಬೇಕಾಗಿದ್ದರೆ ತಲೆ ಚಿಟು ಗುಟ್ಟುತ್ತಿತ್ತು. ಅಂಥದನ್ನು ಮರಾಳ ಗಮನದಂಥ ಸಾಂಗತ್ಯದಲ್ಲಿ, ಪುಟಪುಟನೆ ಹೆಜ್ಜೆಯಿಟ್ಟು ಕೊಂಡು ಕಾಲಿನ ಗೆಜ್ಜೆಯನ್ನು ಗಿಲಿಗುಟ್ಟಿಸುತ್ತಾ ಬರುವ ಮಗುವಿನ ಮೋಹಕ ಸಂಚಾರದಂತಿರುವ ಸಾಂಗತ್ಯದಲ್ಲಿ ತೇಲಿಬಿಟ್ಟಿರುವದರಿಂದ ಹಾಡುವವರಿಗೆ ಎಂದೂ ಬೇಸರಬಾರದು!.

ರತ್ನಾಕರನ ತ್ರಿಲೋಕ ಶತಕ

ತ್ರಿಲೋಕ ಸ್ವರೂಪದ ಗುದ್ದಲಿಪೂಜೆಯೆಸಗದೆ ರತ್ನಾಕರ, ಭರತೇಶವೈಭವವನ್ನು ಆಧುನಿಕ ಕಾದಂಬರಿಯಂತೆ ಪ್ರಾರಂಭಿಸಿ ಸ್ವಚ್ಛಂದವಾದ ಪ್ರತಿಭಾಧ್ವಜವನ್ನು ಹಾರಾಡಿಸಿ ಪಂಡಿತರನ್ನು ಅಚ್ಚರಿಗೊಳಿಸಿರುವನು. ಅನೂಚಾನವಾಗಿ ಬಂದ ಸಂಪ್ರದಾಯವನ್ನು ಮುರಿದ ಮಹಾಕವಿಯೆಂದರೆ ರತ್ನಾಕರನೊಬ್ಬನೇ!

ಪ್ರಚುರದಿ ಪದಿನೆಂಟು ರಚನೆಯ ಕಾವ್ಯಕೆ | ರಚಿಸುವರಾನಂತು ಪೇಳೆ ||
ಉಚಿತಕೆ ತಕ್ಕಷ್ಟು ಪೇಳ್ವೆನಧ್ಯಾತ್ಮವೆ | ನಿಚಿತ ಪ್ರಯೋಜನವೆನಗೆ[೧] |

—ಎಂದು ರತ್ನಾಕರ ತನ್ನ ಯೋಜನೆಯ ವೈಶಿಷ್ಟ್ಯವನ್ನು ಮುಂಗಡವಾಗಿ ಸಾರಿರುವನು. ಅನ್ಯಕವಿಗಳು ಲೋಕವಿಭಾಗವನ್ನು ಕೇವಲ ಸಂಪ್ರದಾಯಕ್ಕೆ ಕಟ್ಟು ಬಿದ್ದು ರಚಿಸಿರುವರು; ಬಹುಮಟ್ಟಿಗೆ ಈ ಸಂದರ್ಭದಲ್ಲಿ ಕವಿಗೆ ಬಲವಂತ ಮಾಘಸ್ನಾನವಾಗಿರುವುದೇ ಹೆಚ್ಚು. ರತ್ನಾಕರ ಸಂಪ್ರದಾಯವನ್ನು ಮುರಿದಿರುವುದರಿಂದ ನಷ್ಟವೇನೂ ಆಗಿಲ್ಲ. ಅನಾವಶ್ಯಕವಾದ ಕಾಲಹರಣ ತಪ್ಪಿದಂತಾಗಿದೆ. ಇದರಿಂದ ಕವಿಗೂ ತೊಂದರೆ ತಪ್ಪಿತು, ಅದಕ್ಕಿಂತ ಹೆಚ್ಚಾಗಿ ಓದುಗರಿಗೂ ಬೇಸರ ತಪ್ಪಿತು.[೨]

ರತ್ನಾಕರ ತ್ರಿಲೋಕಶತಕದಲ್ಲಿ ಮೂರುಲೋಕದ ರೂಪರೇಖೆಯನ್ನು ಮೊದಲೇ ಕೊಟ್ಟಿರುವನು; ಅದಕ್ಕಾಗೋ ಏನೋ ಭರತೇಶವೈಭವದಲ್ಲಿ ಈ ಕ್ಷೇತ್ರವಿಭಾಗವನ್ನು ಕೈಬಿಟ್ಟಂತೆ ಕಾಣುವುದು. ತ್ರಿಲೋಕಶತಕದ ವೈಯಾರರಹಿತವಾದ ನಡಗೆಯನ್ನೂ ಲಾವಣ್ಯರಹಿತ

---

೧. ಭ. ವೈ. ೧ನೇ ಸಂ. ೧೫.

೨. ಆದರೆ ಭ. ವೈ. ೧೮ನೇ ಸಂ.ಯಲ್ಲಿ ಪ್ರಾಸಂಗಿಕವಾಗಿ ಲೋಕಸ್ವರೂಪವನ್ನು ಕುರಿತು ಒಂದೆರಡು ಪದ್ಯ ಬಂದಿದೆ (ಪ. ೩೩-೩೬.)

ವಾಗಿ ಬರಡಾದ ಶೈಲಿಯನ್ನೂ ಗಮನಿಸಿದಾಗ ಈ ಕೃತಿ ರತ್ನಾಕರನ ಪ್ರಥಮ ಕೃತಿಯೆಂದು ತೋರದಿರದು. ಈ ವಿಚಾರವನ್ನು ಅನಂತರ ಚರ್ಚಿಸೋಣ. ಸಧ್ಯಕ್ಕೆ ತ್ರಿಲೋಕಶತಕದ ವಿವರಣೆಯನ್ನು ನೋಡುವ.

ತ್ರಿಲೋಕಶತಕದ ಶೈಲಿ ಮೋಹಕವಾಗಿಲ್ಲದಿದ್ದರೂ ಸರಳವಾಗಿದೆ. ಸ್ಥೂಲವಾಗಿ ಮೂರು ಲೋಕದ ಆಕಾರ ವಿಸ್ತರಾದಿಗಳನ್ನು ನಿರೂಪಿಸಿದ್ದರೂ ಪ್ರಮುಖಾಂಶಗಳಿಗೆ ಇದರಲ್ಲೆಲ್ಲೂ ಲೋಪವುಂಟಾಗಿಲ್ಲ. ಪೂರ್ವಾಚಾರ್ಯರು ಹೇಳಿರುವ ಲೋಕಸ್ವರೂಪವನ್ನು ಕನ್ನಡದಲ್ಲಿ ತಾನು ವಿವರಿಸಿರುವುದಾಗಿ ರತ್ನಾಕರನೇ ಹೇಳಿರುವನು.[೧] ನರಕ ಲೋಕದ ವಿವರಣೆ ಇದ್ದುದರಲ್ಲಿ ಚೆನ್ನಾಗಿ ಬಂದಿದೆಯೆನ್ನಬಹುದು.

ನೆಲನೆಲ್ಲಂ ದುರ್ಗಂಧದೆ | ಕಲಸಿದ ವಿಷದಂತೆ ಮರಗಳೆಲೆಯೆಲ್ಲಂ ಕೂ ||
ರಲಗಿನವೊಲ್ಪರಿವ ನದೀ | ಜಲಮೆಲ್ಲಂ ಕಾಯ್ದ ಲೋಹರಸದಂತಿರ್ಕುಂ || ೧೪ ||
ಒರ್ವರನೊರ್ವರ್ಕೆಡಪುವ | ರೊರ್ವರನೊರ್ವರ್ಕನಲ್ದು ತರಿವರ್ಕೊರೆವರ್ ||
ಜರ್ವಿಸಿ ಪಳಿವರ್ಸೀಳ್ವರ್ | ಪೂರ್ವಭವ ಸ್ಮರಣೆದೋರಿ ಬೈವರ್ಪೊಯ್ವರ್ || ೧೬ ||
"ಸುಡವರ್ಕಳ್ಳಿದೆ ಬಿಡದುರೆ | ಕುಡಿಯೆನುತಂ ಕಾಯ್ದ ಲೋಹರಸಮಂ ನೆರೆವರ್ ||"
ಲೋಹದ ಪೆಣ್ ಪುತ್ತಳಿಯಂ | ಕಾಹೇರಿಸಿ ಕಾಸಿತಂದು ಪರಸತಿಯಿವಳೊಳ್ ||
ಮೋಹಿಸುತಪ್ಪೆನುತಂ ಪಿಡಿ | ದಾ ಹಾದರದರಿಕೆಯವರ್ಗೆ ಪಿಡಿದಪ್ಪಿಸುವರ್ || ೧೮ ||
ಮೊರೆಯಿಡುವರ್ಗೋಳಿಡುವರ್ | ದರದರನೆಳೆಯಲ್ಕೆ ಹಲ್ಲ ಕಿರಿವರ್ಮೊರೆವರ್ ||
ಕಿರಿಕಿರಿದಾಗಿರೆ ಮೈಯ್ಯಂ | ಕೊರೆವಾಗಳ್ಪುಯ್ಯಲಿಡುವರೇಳ್ವರ್ಬೀಳ್ವರ್ || ೧೯ ||
ಕಡಿದೊಂದು ಬಾರಿ ತನುವಂ | ಬಿಡುವುದು ಲೇಸಂತುಟಲ್ಲ ನಾರಕರಂಗಂ ||
ಕಡಿಖಂಡವೆಸಗೆ ತುಂಡಹು | ದೊಡಗೂಡಿದೊಡೊಂದೆಯಹುದು ಪಾದರಸಂಬೊಲ್ || ೨೦ ||
ನಿಡುಬೆಟ್ಟದನಿತು ಕೂಳುಂ | ಬೊಡೆ ಕಡುಹಸಿವುಂಟು ಕೂಳಗಳ್ತಮಗಿಲ್ಲಂ ||
ಕಡಲಂಪೀರ್ವ ಮಹಾತೃಷೆ | ಯಡಸಿರ್ಪುದು ನೀರ ಪನಿಯುಮಿಲ್ಲದೆ ನೋವರ್ || ೨೧ ||
ಎವೆಯಿಕ್ಕುವನಿತು ಕಾಲಮು | ಮವರ್ಗೆಡವಿಲ್ಲ ದುಃಖದೊಳ್ಬಹು ಕಾಲಂ ||
ನವೆಯುತಿರ್ಪತಿರ್ಮುನ್ನಿನ | ಭವದೊಳ್ತಾವೆಸಗಿದುಗ್ರ ಪಾಪದ ಫಲದಿಂ || ೨೫ ||

ಈ ಭಾಗವನ್ನು ನೋಡಿದರೆ ಸಿದ್ಧಾಂತದಲ್ಲೂ ಸ್ವಾರಸ್ಯವನ್ನೂ ತರಲು ರತ್ನಾಕರ ಹೆಣಗಾಡಿದಂತೆ ಕಾಣುವುದಿಲ್ಲವೆ ?

ಹದಿನೇಳು ಕಂದಪದ್ಯಗಳಲ್ಲಿ ನರಲೋಕವನ್ನು ವಿವರಿಸಿರುವನು.[೨] ಎರಡು ಪದ್ಯಗಳಲ್ಲಿ ಭವನಲೋಕವನ್ನು ಸೂಚಿಸಿರುವನು.[೩] 'ಭವನಲೋಕ,' 'ಧಾತಕೀ ಖಂಡ' ಹಾಗೂ 'ಪುಷ್ಕರಾರ್ಧ'ಗಳಲ್ಲಿರುವ ಅಕೃತ್ರಿಮ ಜಿನಾಲಯಗಳನ್ನು ಜ್ಞಾಪಿಸಿಕೊಂಡಿರುವನು.[೪] ಭೋಗಭೂಮಿಯಲ್ಲಿ ಜನಿಸಲು ಸತ್ಪಾತ್ರದಾನ ಅತ್ಯಾವಶ್ಯಕವೆಂದು ಸಾರಿರುವನು.

---

೧. ಪೂರ್ವ ವಿದೇಹದೊಳೆಸಕಂ | ದೋರ್ವಂಗಪರಾಜಿತೇಶ್ವರಂಗೆನ್ನ ಮನಃ ||
ಪೂರ್ವಕದೆ ನಮಿಸಿ ಪೇಳ್ವೆಂ | ಪೂರ್ವಾಚಾರ್ಯಾನುಮತದೆ ಲೋಕಸ್ಥಿತಿಯಂ || —ತ್ರಿ. ಶ. ೧.

೨. ತ್ರಿ. ಶ. ೨೮-೪೪.

೩. ತ್ರಿ. ಶ. ೨೬-೨೭.

೪. ತ್ರಿ. ಶ. ೨೭, ೩೭.

ಭೋಗಮಹಿ ಲೇಸು ಮತ್ತಾ | ಭೋಗಿಗಳುಂ ಚೆಲ್ವರಹುದು ಧರ್ಮಮದಿಲ್ಲಂ ||
ಭೋಗಿಸುವರ್ಮುನ್ನಂ ಜಿನ | ಯೋಗಿಗೆ ಭಕ್ತಿಯೊಳೆ ಭುಕ್ತಿಯಿಕ್ಕಿದ ಫಲದಿಂ || ೪೦ ||

ನೂರೆಪ್ಪತ್ತು ವಿಜಯಾರ್ಧಗಳಲ್ಲಿರುವ ವಿದ್ಯಾಧರರ ಪುಣ್ಯಮಯವಾದ ಬಾಳ್ವೆಯನ್ನು ಚೆನ್ನಾಗಿ ನಿರೂಪಿಸಿರುವನು.

ವಿಜಯಾರ್ಧ ಗಿರಿಗಳಿರ್ಕುಂ | ರಜತಮಯಂಗಳ್ಸಮಂತು ನೂರೆಪ್ಪತ್ತಾ ||
ರಜತಾದ್ರಿಗಳೊಳ್ವಿದ್ಯಾ | ವಿಜಯರ್ವಿದ್ಯಾಧರರ್ಕಳಿರ್ಕುಂ ಸುಖದಿಂ || ೪೩ ||
ವ್ರತದಾನ ಪೂಜೆಯುಂಟೂ | ರ್ಜಿತದೀಕ್ಷೆಯುಮುಂಟು ಮೋಕ್ಷಮುಂಟವರೊಳ್ಮ ||
ತ್ತತಿಶಯ ವಿದ್ಯಾಬಲಮುಂ | ಟತಿಭೋಗಮುಮುಂಟು ಚರಿಸುವರ್ನಭದೊಳವರ್ || ೪೪ ||

ವ್ಯಂತರಲೋಕವನ್ನು ಒಂದೇ ಒಂದು ಕಂದದಲ್ಲಿ ಪೂರೈಸಿ, ಜ್ಯೋತಿರ್ಲೋಕದ ಸ್ವರೂಪವನ್ನೂ ವಿಸ್ತಾರವನ್ನೂ ಎರಡು ಪದ್ಯಗಳಲ್ಲಿ ಮುಗಿಸಿರುವನು; ಸ್ವರ್ಗದ ಸೊಬಗನ್ನು ಬಣ್ಣಿಸುವಾಗ ರತ್ನಾಕರನಿಗೂ ತುಸು ಉತ್ಸಾಹ ಮೂಡಿಬಂದಿದೆ.

ಇರ್ಪುದು ರತ್ನವಿಮಾನಂ | ಕೂರ್ಪಂಗನೆಯರ್ಕಳಲ್ಲಿ ದೇವಾಂಗನೆಯರ್ ||
ನೇರ್ಪಟ್ಟ ದಿವ್ಯದೇಹಮ | ನಾರ್ಪೊಗಳಲ್ಬಲ್ಲರಣ್ಣ ಸಗ್ಗದ ಸುಖಮಂ || ೪೯ ||

ಯಾರೂ ಬಣ್ಣಿಸಲಾರದಂಥ ಸಗ್ಗದ ಸೊಗಸನ್ನು ರತ್ನಾಕರ ತಾನೇ ವಿವರಿಸಲಾದೀತೆ?

ಸಗ್ಗಮೆ ಸುಖವಹುದಂತಾ | ಸಗ್ಗದೊಳಂ ಪೋಗೆ ಪೋಗೆ ತಳದಿಂ ಮೇಲ್ಮೇ ||
ಲುಗ್ಗಡಮಕ್ಕುಂ ಸೌಖ್ಯಂ | ವೆಗ್ಗಳಮಾಯುಷ್ಯ ಕಾಂತಿ ಶಕ್ತಿ ವಿವೇಕಂ || ೫೪ ||

ನಂದೀಶ್ವರದ್ವೀಪ ಜೈನ ಧರ್ಮೀಯರಿಗೆ ಪವಿತ್ರವೂ ಪಾವನವೂ ಆದ ಕ್ಷೇತ್ರ.[೧] ಅಲ್ಲಿ ತಾವು ಹೋಗಲಾರರಾದರೂ ಅದರ ನೆನಪಾಗಿ 'ನಂದೀಶ್ವರ[೨]' ಎಂಬ ಪೂಜೆಯನ್ನು ಜಿನಭಕ್ತರು ವೈಭವಯುತವಾಗಿ ಭಕ್ತಿಪೂರ್ವಕವಾಗಿ ಇಂದಿಗೂ ಆಚರಿಸುವರು.

ಹೋಹೋ ಸ್ವರ್ಗದ ವಾರ್ತೆಯ | ದೇಹವಣಂತಿರಲಿ ಮತ್ತೆ ಜಂಬೂದ್ವೀಪ ||
ಕ್ಕೂಹಿಸೆ ಯೆಂಟನೆಯದು ಸೋ | ತ್ಸಾಹಂ ನಂದೀಶ್ವರಾಖ್ಯ ಮಿರ್ಕುಂ ದ್ವೀಪಂ ||
ಅದರೊಳ್ನಾಲ್ದೆಸೆಗಳೊಳಂ ಪದಿ | ಮೂರುಂ ಗಿರಿಗಳುಂಟು ನಾಲ್ದೆಸೆಯಂ ಕೂ |
ಡಿದೊಡೈವತ್ತೆರಡಾದುವು | ಪುದಿದ್ಯೆವತ್ತೆರಡು ಬಸದಿಗಳ್ಮತ್ತವರೊಳ್ ||

---

೧. ನಂದೀಶ್ವರವೆಂಬುದು ಮಧ್ಯಲೋಕದಲ್ಲಿ ಎಂಟನೆ ದ್ವೀಪ. (೧) ಜಂಬೂದ್ವೀಪ-ಲವಣಸಮುದ್ರ, (೨) ಧಾತಕೀಖಂಡ-ಕಾಲೋದಧಿ, (೩) ಪುಷ್ಕರವರದ್ವೀಪ-ಪುಷ್ಕರವರಸಮುದ್ರ, [ಪುಷ್ಕಾರಾರ್ಧದಿಂದ ಮುಂದಕ್ಕೆ ಮನುಷ್ಯ ಸಂಚಾರವಿಲ್ಲ.] (೪) ವಾರುಣೀವರದ್ವೀಪ, (೫) ಕ್ಷೀರವರದ್ವೀಪ, (೬) ಘೃತವರದ್ವೀಪ, (೭) ಇಕ್ಷುವರದ್ವೀಪ, (೮) ನಂದೀಶ್ವರದ್ವೀಪ. [ಮೂರನೇ ದ್ವೀಪದಿಂದ ಆಯಾ ದ್ವೀಪದ ಹೆಸರೇ ಸಾಗರಕ್ಕೂ ಅನ್ವಯಿಸುವುದು.]

೨. ಆಷಾಢ, ಕಾರ್ತಿಕ ಮತ್ತು ಫಾಲ್ಗುಣ ಮಾಸಗಳಲ್ಲಿ ಶುಕ್ಲಪಕ್ಷದ ಅಷ್ಟಮಿಯಿಂದ ಪೂರ್ಣಿಮೆಯವರೆಗೆ ಎಂಟೆಂಟು ದಿನ ದೇವತೆಗಳು ನಂದೀಶ್ವರದ್ವೀಪಕ್ಕೆ ಹೋಗಿ ಅಲ್ಲಿನ ಜಿನಬಿಂಬಗಳನ್ನು ಪೂಜಿಸುತ್ತಾರೆಂದು ನಂಬಿಕೆ. ಆ ಭಾವನೆಯಿಂದ ಆ ಕಾಲದಲ್ಲಿ (ಭರತಖಂಡದ) ಇಲ್ಲಿಯ ಭಕ್ತರೂ ಪೂಜೆ ಮಾಡುವರು. ಆ ಪೂಜೆಗೆ 'ನಂದೀಶ್ವರ ಅಷ್ಟಾಹ್ನಿಕಮಹ' ಎಂದು ಹೆಸರು—ಶ್ರೀ ಎಲ್. ಗುಂಡಪ್ಪನವರು, ಆ. ಪು. ಸಂ., ಪು. ೧೩೩.

'ಹೋಹೋ....ಸೋತ್ಸಾಹಂ ನಂದೀಶ್ವರಾಖ್ಯಂ!' ಎಂದು ಪ್ರಾರಂಭಿಸಿದಾಗ್ಯೂ ರತ್ನಾಕರ ತನ್ನ ಮನದಲ್ಲಿರುವುದನ್ನು ಮಾತಿನಲ್ಲಿ ಬಣ್ಣಿಸಲಾರದೆ ಹೋಗಿರುವನು. ಈತನ ಕಲ್ಪನೆ ಇನ್ನೂ ಸ್ಫುಟಗೊಂಡಿಲ್ಲ. 'ರುಚಕಪರ್ವತ' ಹಾಗೂ 'ಕುಂಡಲಗಿರಿ'ಗಳನ್ನು ಒಂದು ಪದ್ಯದಲ್ಲಿ ಸೂಚಿಸಿ ಕುಭೋಗಭೂಮಿಯತ್ತ ನಮ್ಮ ಗಮನ ಸೆಳೆದಿರುವನು.

ನೀರೆಲ್ಲಂ ಕಬ್ಬಿನರಸ | ದೋರಗೆ ಮಣ್ಣೆಲ್ಲವಲ್ಲಿ ಲಡ್ಡುಗೆಯ ಸಮಂ |
ಸಾರಫಲಮೀವ ತರುಲತೆ | ಧಾರಿಣಿ ಲೇಸದರೊಳೊಗೆದ ನರರತಿ ಕಷ್ಟರ್ || ೭೨ ||
ಒಂದೇ ಕಾಲೊಂದೇ ಕೈ | ಯ್ಯೊಂದೇ ಕಣ್ಣೊಂದೆ ಕರ್ಣದವರಲ್ಲಿ ಕೆಲರ್ ||
ಪಂದಿಮೊಗಂ ಕೋಡಗಮೋಗ | ಮೆಂದಿವು ಮೊದಲಾದ ಬಹುಮುಖರ್ಕಲರಿಪ್ಪರ್ || ೭೩ ||
ಪಾಸುಂಗಿವಿ ಪೊದೆಕಿವಿಗಳ್ | ಬೀಸುವ ಬಾಲಂ ಕೊರಂಟು ಬಾಲಂ ಕೆಲರೊಳ್ ||
ಈ ಸೊಬಗಿನ ಪೆಣ್ಗಂಡುಗ | ಳಾ ಸೀಮೆಯೊಳಿರೆ ಕುಭೋಗ ಭೂಮಿಗಳೆಂಬರ್ || ೭೪ ||
ಮುನ್ನಕುಪಾತ್ರಕೆ ಭಕ್ತಿಯೊ | ಳನ್ನವನಿತ್ತಂತುಟಾದರದರಿಂ ಪ್ರತಿಕ ||
ರ್ಗನ್ನವನೀವುದು ದಯೆಯಿಂ | ದನ್ನಿಗರಂ ಪೂಜಿಸೀಯಲಾಗದು ಕೂಳು || ೭೫ ||

ಕುಭೋಗಭೂಮಿಯ ನೀರೆಲ್ಲ ಕಬ್ಬಿನ ರಸವಾದರೂ ಮಣ್ಣಿನ ಹೆಂಟೆಗಳೆಲ್ಲ ಲಡ್ಡುಗೆಗಳಾದರೂ ಅಂಥ ಸಮೃದ್ಧ ಪ್ರದೇಶದಲ್ಲಿ ಹುಟ್ಟುವವರೆಲ್ಲ ಕುರೂಪಿಗಳಾಗಬೇಕೆ? ನರಕಕ್ಕಿಂತಲೂ ದುಃಖಿತಮವಾದ ಕ್ಷೇತ್ರವೂ ಉಂಟು. ಅದೇ ನಿಗೋದಕ್ಷೇತ್ರ.

ಆ ನುಡಿಯಂತಿರಲೀ ಬಳಿ | ಕ್ಕೇನೆಂಬೆಂ ಮೂರುಲೋಕದೊಳಗೆಲ್ಲೆಡೆಯೊಳ್ ||
ಬೇನೆಯನುಣುತೆ ನಿಗೋದ | ಸ್ಥಾನದೊಳೇಕೇಂದ್ರಿಯಾತ್ಮಕಂಗಳು ಬಾಳ್ಗಂ || ೭೬ ||
ಆರುಂ ಸಾಸಿರದೊಡನೀ | ರಾರುಂ ಸೂಳೆರಡುಗಳಿಗೆಗಂ ಕಡಮೆಯೊಳಂ|
ಗಾರಾಗಿ ಸತ್ತು ಪುಟ್ಟುತೆ | ಬೇರಾಗದೆ ಹುದುಗಿ ನೋವವತಿ ಸೂಕ್ಷ್ಮಂಗಳ್ || ೭೮ ||
ಸಾಗರಮನಿತೆನಿತೆಂಬೊಡ | ದಾಗದುಮಲ್ಲಿರ್ಪ ಕಾಲಮಂ ಸಾಗರ ಸಂ |
ಖ್ಯಾಗಣಮಂ ಮೀರಿದುದೆಂ | ಬಾಗಳ್ ಜಿನಜಿನ ನಿಗೋದಮೆ ಕಡುಕಷ್ಟಂ || ೭೯ ||
ಎಂದಾದೊಡಂ ತ್ರಸತ್ವಕೆ | ಬಂದೊಡೆ ಬಹುದೊರ್ಮೆ ಬಾರದೊಡಮಿಹುದದನಿ ||
ಷ್ಟೆಂದೆನಬಾರದು ಜಿನಜಿನ | ಬೆಂದ ನಿಗೋದಕೆ ಸಮಾನ ದುರ್ಗತಿಯುಂಟೆ || ೮೦ ||
ನುಡಿವಾಗಳೆನ್ನ ಮೆಯ್ನಡ | ನಡುಗುತ್ತಿದೆ ಜಿನ ಜಿನಾರದಂತಿರಲಿ ಬಳಿ ||
ಕ್ಕೊಡನೀ ಮೂರುಂಲೋಕದ | ಕಡೆಯೆನಿಸಿದ ಸಿದ್ಧಲೋಕದಂದಮನೊರೆವೆಂ || ೮೨ ||

ನಿಗೋದದ ವಿವರಣೆಯಲ್ಲಿ ಕವಿಯ ತಳಮಳ ತಕ್ಕಮಟ್ಟಿಗೆ ಇಣಿಕಿ ನೋಡಿದೆಯೆನ್ನಬಹುದು. ಅನಂತರ ಸಿದ್ಧಲೋಕದ ಕಡೆ ಕವಿ ಮನಸ್ಸನ್ನು ಹಾಯಿಸುವನು.

ಸರ್ವಾರ್ಥಸಿದ್ಧಿಯಿಂ ಮೇ | ಲುರ್ವಿದ ಪನ್ನೆರಡು ಯೋಜನಂ ಪೋದೆಡೆಯೊಳ್ ||
ತೋರ್ಪುದೆಂಟನೆಯ ಭೂಮಿ ತ | ದುರ್ವಿಯ ಮೇಲ್ಮುಟ್ಟಿ ಸಿದ್ಧಶಿಲೆಯೆಸೆದಿರ್ಕುಂ || ೮೩ ||
ಕಡುಬಿಳಿದು ಬಟ್ಟಿತದು ಬೆ | ಳ್ಗೊಡೆಯಂತೆಸೆದಿರ್ಪುದೆಂಟುಗಾವುದ ದಟ್ಟಂ ||
ಪೊಡವಿಯೊಳಪ್ರತಿಯದು ಪೇ | ಳ್ವೆಡೆ ನಾಲ್ವತ್ತೈದು ಲಕ್ಷಯೋಜನದಗಲಂ || ೮೪ ||
ಮಿಗೆ ಸಿದ್ಧಶಿಲೆಯ ಮೇಲೀ | ಜಗಮಂ ಮುಸುಕಿರ್ದ ಮೂರು ಗಾಳಿಗಳಿರ್ಕುಂ ||
ಗಗನಮೊಂದಲ್ಲದಾ ಗಾ | ಳಿಗಳಿಂದಂ ಪೊರಗೆ ಮಿಕ್ಕ ವಸ್ತುಗಳಿಲ್ಲಂ || ೮೫ ||

ಆ ಮೂರು ಗಾಳಿಗಳೊಳು | ದ್ದಾಮದೊಳಾ ಕಡೆಯ ವಾಯುವಲದೊಳಿರ್ಪರ್ ||
ಶ್ರೀಮತ್ಸಿದ್ಧರ್ಬುದ್ಧರ್ | ಸ್ವಾಮಿಗಳತಿ ಶುದ್ಧರವರೆಯುಪಮಾತೀತರ್ || ೮೬ ||
ಕಾಯೋತ್ಸರ್ಗಂ ಪಲ್ಯಂ | ಕಾಯತಮೆಂಬೆರಡರಲ್ಲಿ ಮಿಸುಕದೆ ಮೆರೆವರ್ ||
ಶ್ರೇಯೋಲಕ್ಷ್ಮಿಯನಪ್ಪಿ ಸು | ಖಾಯತಿ ತಲೆಗೇರಿ ಪರವಶಂ ತಟ್ಟಿದವೋಲ್ || ೮೮ ||
ತಮ್ಮೊಳ್ತಾಮೊಳಪೊಕ್ಕಡ | ನಮ್ಮಮ್ಮ ಪಲಂಬರೊಂದುಗೂಡಿರ್ಪ ರಹೋ ||
ಉಮ್ಮಳಮುಬ್ಬಸಮಿಲ್ಲಂ | ಬೊಮ್ಮನೆ ರೂಪೆನಿಸಿದವರ್ಗೆ ಸಿಡಿಮಿಡಿಯುಂಟೇ || ೯೨ ||
'ಮೆಯ್ಯಳಿದು ಪರಮಚಿತ್ಕಳೆ | ಮೆಯ್ಯಾದವರೊಂದುಗೂಡಿದೊಡೆ ನೋವುಂಟೆ' || ೯೩ ||
ಪಲವುಂ ದೀಪಂಗಳ್ಸಂ | ಗಲಿಸಿ ಸಮಂತೊಂದು ಮನೆಯೊಳಿರ್ದೊಡೆ ಕಿರಣ ||
ಕ್ಕಲೆಬಲೆ ನೂಕುಂ ತಾಕುಂ | ನೆಲಸಿರ್ಕುಮೆಯಂತೆ ಸಿದ್ಧರೊಂದಾಗಿರ್ಪರ್ || ೯೪ ||
ಗಾಳಿಯೊಳಿರುತಿಹರಿರ್ದುಂ | ಗಾಳಿಯುಮಂ ಸೋಕಲಿಲ್ಲ ಸೂಕ್ಷ್ಮಮೆನಿಪ್ಪಾ ||
ಗಾಳಿಯೆ ಸ್ಥೂಲಮುಮಾಯ್ತಾ | ಗಾಳಿಗಮತಿಸೂಕ್ಷ್ಮರಾದರಚ್ಚರಿಯಲ್ತೆ || ೯೫ ||
ತನುವವರ್ಗಿಲ್ಲ ಸುಬೋಧಮೆ | ತನುವಾಗಿಹುದಿಂದ್ರಿಯಂಗಳಿಲ್ಲ ಸುಖಂ ತೆ |
ಕ್ಕನೆ ತುಂಬಿಹುದಿನ್ನೇನಂ | ದೆನಬಹುದಾ ಸಿದ್ಧರಂದಮದು ಬಿಸವಂದಂ || ೯೬ ||
ವರ್ಣಂಗಳೈದುಮಿಲ್ಲಂ | ಪೂರ್ಣಪ್ರಭೆ ಬೆಳಗುತಿಹುದು ಗಂಧರಸಂಗಳ್ ||
ವರ್ಣಿಸುವೊಡಿಲ್ಲ ದಿವ್ಯಗು | ಣಾರ್ಣವ ಮೆಸದಿರ್ಪುದವರ ಮಹಿಮೆ ವಿಚಿತ್ರಂ || ೯೭ ||
ಆಕಾರಮೆಯಹುದೊರ್ಮೆ ನಿ | ರಾಕಾರಮುಮೆನಲೆಬಹುದು ಸಿದ್ಧರ ರೂಹುಂ ||
ಏಕೆಂದೊಡರಿಕೆಗದು ತಾಂ | ಸ್ವೀಕೃತಮಾಯಿಂದ್ರಿಯಕ್ಕೆ ಸಿಲುಕದ ದೆಸೆಯಿಂ || ೯೯ ||
ತಿಳಿವೆಳ್ದಿಂಗಳ್ನೋಟಕೆ | ಪೊಳೆವುತ್ತಿದೆ ಪಿಡಿದು ತೆಗೆಯಲರಿದಂತಾ ನಿ ||
ರ್ಮಳರುಂ ಸುಜ್ಞಾನಕೆ ತಾ | ವಳವಡುವರ್ಗಮ್ಯರಲ್ಲ ಪಂಚೇಂದ್ರಿಯಕಂ || ೧೦೦ ||
ತುಂಬಿದ ಚಿದ್ಗುಣಮಂಬರ | ಮೆಂಬಂದದ ಬಯಲರೂಪು ಪುರುಷಾಕಾರಂ ||
ಎಂಬಿವು ಮೂರುಂಟವರ್ಗೆ ಚಿ | ದಂಬರ ಪುರುಷರ್ಕಳೆಂಬುದು ಸಾರ್ಥಕನಾಮಂ || ೧೦೧ ||
ತಲೆಯಿಂದಡಿಮುಟ್ಟಂ ಸು | ತ್ತಲುಮರಿವುತ ಕಾಣುತಿರ್ಪರದರಿಂ ಸಿದ್ಧರ್ ||
ಸಲೆ ಸರ್ವತೋಮುಖರ್ಮೆಂ | ಗಲ ಮೆನಿಸಿದ ಸರ್ವತೋ ವಿಲೋಚನರಾದರ್ || ೧೦೪ ||
ತ್ರಿಜಗವನೆತ್ತುವ ವೀರ್ಯಂ | ನಿಜವಾಗಿಹುದವರ್ಗೆ ಚೇಷ್ಟಿಸದೆ ತೆಪ್ಪಗಿಹರ್ ||
ತ್ರಿಜಗದ ಸುಖಕಧಿಕ ಸುಖಂ | ನಿಜವಾಗಿಹುದಿಂತುಟೆಂದು ನುಡಿಯಲಶಕ್ಯಂ || ೧೦೬ ||

ಈಗ ಭರತೇಶವೈಭವದಲ್ಲಿ ಬಣ್ಣಿಸಿರುವ ಪರಮಾತ್ಮನ ಪರಂಜ್ಯೋತಿ ರೂಪವನ್ನು ನೋಡೋಣ.

ತಳಮೇಲು ಪೊರಗೊಳಗೆನ್ನದೆ ಸರ್ವತ್ರ | ತಳತಳಿಸುವ ಚಿನ್ಮಯಾಂಗಾ ||
ಬೆಳಗೇರುತೆನ್ನಂತರಂಗದೊಳಿರು ಸುಖ | ಸುಲಭ ಚಿದಂಬರಪುರುಷಾ[1] ||
ಅರಿವು ನೋಟವೆ ನಿಜ ರೂಪಾಗಿ ಕಾಂತಿಯ | ಕರೆವ ಜ್ಯೋತಿರ್ಮಯ ರೂಪಾ ||
ಮರೆಯಾಗದೆನ್ನ ಮೆಯ್ಮರೆಯೊಳಗಿರು | ಭವ್ಯರೆರೆಯಾ ಚಿದಂಬರಪುರುಷಾ[2] ||
ಈರೈದುದಿಕ್ಕನು ಮೂರುಲೋಕವನೊಂದೆ | ಬಾರಿ ತುಂಬುವ ಘನಮಹಿಮಾ ||
ಆರುಬಲ್ಲರು ನಿನ್ನ ಘನವ ನನ್ನೊಳಗಿರು | ಧೀರ ಚಿದಂಬರಪುರುಷಾ[3] ||

೧. ಭ. ವೈ. ೧೩ನೇ ಸಂ., ಪ. ೧೭೭.
೨. ಭ. ವೈ. ೨೨ನೇ ಸಂ., ಪ. ೯೪.
೩. ಭ. ವೈ. ೨೬ನೇ ಸಂ., ಪ. ೧೦೬.

ಅಂಬರಮೆಯ್ಯಾದ ಪುರುಷ ಸುಜ್ಞಾನವೆ | ತುಂಬಿ ಮೆಯ್ಯಾದ ಸತ್ಪುರುಷಾ ||
ತಂಬೆಳಗಿನ ಮೈಯ ಪುರುಷ ನಮೋಸ್ತು ಚಿ | ದಂಬರಪುರುಷಾ ಚಿತ್ಪುರುಷಾ[1] ||
ಬಯಲಪುರುಷ ಬಯಲಾಕಾರ ಬಕ್ಕಟ | ಬಯಲರೂಪನೆ ಬಯಲಾಂಗಾ ||
ಬಯಲಾಧಾರನೆ ಮತಿದೋರು ನಿಚ್ಚ ನಿ | ರ್ವಯಲ ನಿರಂಜನಸಿದ್ಧಾ[2] ||

ಭರತೇಶವೈಭವದಲ್ಲಿ ಸಿದ್ಧಸ್ವರೂಪ ರತ್ನಾಕರನ ಪ್ರತಿಭಾಪುಂಜದಲ್ಲಡಗಿ ಕಲ್ಪನೆಯ ತೆಕ್ಕೆಯಲ್ಲೊಂದಾಗಿಹೋಗಿರುವುದಕ್ಕೂ ತ್ರಿಲೋಕಶತಕದ ಮಂಕಾದ ಬಣ್ಣನೆಗೂ ವಾಚಕ ವೃಂದವೇ ತುಲನಾತ್ಮಕವಾಗಿ ಹೋಲಿಸಿ ನೋಡಬೇಕು.

ಪ್ರಮುಖಾಂಶಗಳು:—ತ್ರಿಲೋಕಶತಕ ಅತ್ಯಂತ ಸ್ಥೂಲವಾದ ವಿವರಣೆಯಿಂದ ಕೂಡಿದ್ದರೂ ಇದರಲ್ಲಿ ಪ್ರಮುಖಾಂಶಗಳನ್ನು ತೋರೆಯದೆ ಸಂದರ್ಭೋಚಿತವಾಗಿ ಸೂಚಿಸಿರುವನು.

ಓತಂದೇ ಸಮಯಕಸಂ | ಖ್ಯಾತದ ಯೋಜನಕೆ ಪೋಪ ಸುರವಿಮಾನಂ ||
ಸೈತು ದಿವಾರಾತ್ರಿಯ ಸಂ | ಖ್ಯಾತಾಬ್ದಂ ಪೋದೊಡೊಂದು ರಜ್ಜುವೆನಿಕ್ಕುಂ || ೫ ||

ಒಂದು ಪರಮಾಣು ಮಂದಗತಿಯಿಂದ ಒಂದು ಆಕಾಶಪ್ರದೇಶದಿಂದ ಇನ್ನೊಂದು ಆಕಾಶಪ್ರದೇಶಕ್ಕೆ ಪ್ರವೇಶಿಸುವುದಕ್ಕೆ 'ಸಮಯ'ವೆನ್ನುವರು. ಕಾಲದಲ್ಲಿ 'ಸಮಯ'ವೆನ್ನುವುದು ಅತ್ಯಂತ ಸಣ್ಣ ಪ್ರಮಾಣದ್ದು; ಜೊತೆಗೆ ಇದು ಅವಿಭಾಗಿಯಾದುದು. ಅಸಂಖ್ಯಾತ ಸಮಯಗಳಿಂದ (ಜಘನ್ಯಯುಕ್ತ ಅಸಂಖ್ಯಾತಪ್ರಮಾಣ) ಒಂದು 'ಆವಲಿ'ಯಾಗುವುದು. ಸಂಖ್ಯಾತ ಆವಲಿಗಳಿಂದ ಒಂದು 'ಉಚ್ಛ್ವಾಸ'(ಪ್ರಾಣ)ವಾಗುವುದು. 'ಉಚ್ಛ್ವಾಸ'ವೆಂಬುದು ೨೮೮೦/೩೭೭೩ನೇ ಸೆಕೆಂಡಾಗುವುದು. ಅದರಿಂದ ಸಮಯ ಮತ್ತು ಆವಲಿಗಳು ಸೆಕೆಂಡಿನ ಬಹುಸೂಕ್ಷ್ಮ ಕಾಲವಿಭಾಗಗಳಾಗಿವೆ.[3] ಎರಡು ಸಾವಿರ ಹರದಾರಿಗೆ ಒಂದು ಮಹಾಯೋಜನವಾಗುವುದು.[4] ನಾಲ್ಕು ಹರದಾರಿಗೆ ಒಂದು ಸಾಮಾನ್ಯಯೋಜನವಾಗುವುದು. ಇಲ್ಲಿ ಮಹಾಯೋಜನವನ್ನೇ ಗಮನದಲ್ಲಿಟ್ಟುಕೊಂಡು 'ರಜ್ಜು'ವಿನ ಬೃಹದ್ ವಿಸ್ತಾರವನ್ನು ನಾವು ಕಲ್ಪಿಸಿಕೊಳ್ಳಬೇಕು. ತಿರ್ಯಗ್‌ಲೋಕದ[5] ಮಧ್ಯಭಾಗದ ವಿಸ್ತಾರ ಒಂದು ರಜ್ಜುವಿನಷ್ಟಿದೆ. ಸ್ಪುಟ್‌ನಿಕ್ ವೇಗವನ್ನೂ ನಾಚಿಸುವಂಥ ತ್ವರಿತಗತಿಯನ್ನು ಜೈನಸಿದ್ಧಾಂತದಲ್ಲಿ ನೋಡಬಹುದು.

ನರಕದ ಅತಿ ಶೀತ ಮತ್ತು ಅತಿ ಉಷ್ಣಗಳನ್ನು ರತ್ನಾಕರ ಸೂಚಿಸಿರುವನು.

ಇಳೆಯೊಳ್ಪಿಡೆ ನಿಡುಲೋಹಾ | ಚಳಮಾಗಳೆ ಮೇಣದಂತೆ ಕರಗುವುದೂರ್ಧ್ವ ||
ಸ್ಥಳದುಷ್ಣದಿನಾ ರಸಮಂ | ಘಳಿಲನೆ ಬಲಿಯಿಸುವ ಶಕ್ತಿ ಕೆಳಗಣ ಶೈತ್ಯಂ || ೧೩ ||

ಅತಿ ಉಷ್ಣವಾಗಿರುವ ಕಡೆ ನರಕದಲ್ಲಿ ಕಬ್ಬಿಣವನ್ನಿಟ್ಟರೂ ಮೇಣದಂತೆ ಕರಗದಿರದು. ಅದೇ ಶೈತ್ಯವಾದ ಭಾಗದಲ್ಲಿ ಕರಗಿದ ಕಬ್ಬಿಣವನ್ನು ಹಾಯಿಸಿದರೆ ಗಟ್ಟಿಯಾಗಿಬಿಡುವುದು!

---

೧. ಭ. ವೈ. ೫೫ನೇ ಸಂ., ಪ. ೧೨೨.

೨. ಭ. ವೈ. ೬೦ನೇ ಸಂ., ಪ. ೧.

೩. ಶ್ರೀ ಮಿರ್ಜಿಅಣ್ಣಾರಾಯರು, ಜೈ. ಧ., ಪು. ೩೦೫.

೪. ಶ್ರೀ ಎ. ಶಾಂತಿರಾಜ ಶಾಸ್ತ್ರಿಗಳು, ದ್ರ. ಸಂ. ಪು. ೬೨.

೫. ಮಧ್ಯಲೋಕದ ವಿಸ್ತಾರಕ್ಕೆ ತಿರ್ಯಗ್‌ಲೋಕವೆನ್ನುವರು—ದ್ರ. ಸಂ. ಪು. ೬೩.

ಜೈನಸಾಹಿತ್ಯದಲ್ಲಿ ಮಾತೆತ್ತಿದರೆ ಸಾಕು ಸಾಗರೋಪಮಕಾಲವನ್ನು ನಾವು ಕಾಣಬೇಕಾಗುವುದು. ಅಂಥ ಕಾಲಪ್ರಮಾಣದ ಸ್ವರೂಪವನ್ನು ತ್ರಿಲೋಕಶತಕದಲ್ಲಿ ಲೆಕ್ಕಾಚಾರವಾಗಿ ಕೊಟ್ಟಿರುವನು. "ಭೋಗಭೂಮಿಯ ಕುರಿ ತುಪ್ಪಟದಿಂದ(ಕೂದಲು) ಲವಣಸಮುದ್ರದ ನೀರನ್ನು ಇಪ್ಪತ್ತೈದು ಸಮಯಕ್ಕೊಂದು ಬಾರಿ ತಪ್ಪದೆ ತೆಗೆದು ಇಡೀ ಸಾಗರವನ್ನು ಆರು ಬಾರಿ ಬರಿದು ಮಾಡಿ ಭೂಮಿಗಿಡಲು ಎಷ್ಟು ಕಾಲ ಹತ್ತುವುದೋ ಅದಕ್ಕೆ ಸಾಗರೋಪಮಕಾಲವೆನ್ನುವರು."[1]

ಇಂಥ ಸಾಗರೋಪಮವೆಂದರೆ ನರಕದವರಿಗೂ ಸಗ್ಗದವರಿಗೂ ಲೆಕ್ಕವೇ ಇಲ್ಲ! ಒಂದನೇ ನರಕದಲ್ಲಿ ಒಂದು ಸಾಗರೋಪಮಕಾಲ, ಎರಡನೇ ನರಕದವರು ಮೂರು ಸಾಗರೋಪಮ ಕಾಲ, ಮೂರನೇ ನರಕವಾಸಿಗಳು ಏಳು ಸಾಗರಕಾಲ, ನಾಲ್ಕನೇ ನರಕದವರು ಹತ್ತು ಸಾಗರ ಕಾಲ, ಐದನೇ ನರಕದವರು ಹದಿನೇಳು ಸಾಗರ, ಆರನೇ ನರಕವಾಸಿಗಳು ಇಪ್ಪತ್ತೆರಡು ಸಾಗರ, ಏಳನೇ ನರಕದವರು ಮುವತ್ತಮೂರು ಸಾಗರ ಪಡಬಾರದ ಪಾಡನ್ನು ಪಟ್ಟು ನರಳುತ್ತಿರುತ್ತಾರೆ![2]

ನರಕಕ್ಕೆ ತದ್ವಿರುದ್ಧವಾದುದು ಸ್ವರ್ಗ. ಇಲ್ಲಿ ಮೇಲೆಮೇಲೆ ಹೋಗುತ್ತ ಆಯುಷ್ಯ, ಬುದ್ಧಿ ಶಕ್ತಿ, ಸುಖಾದಿಗಳು ಹೆಚ್ಚುತ್ತಾ ಹೋಗುವುದು. ನರಕದಲ್ಲಾದರೋ ಕೆಳಗೆ ಹೋಗುತ್ತಾ ನರಳಾಟ ಹೆಚ್ಚುವುದಷ್ಟೆ. ಸಗ್ಗದ ಸುಖದಲ್ಲಿ ತನ್ಮಯರಾಗಿ ಸೌಧರ್ಮ ಮತ್ತು ಈಶಾನಕಲ್ಪದವರು ಎರಡು ಸಾಗರ ವರ್ಷ ಕಳೆಯುತ್ತಾರೆ. ಸನತ್ಕುಮಾರ ಹಾಗೂ ಮಾಹೇಂದ್ರಕಲ್ಪಜರು ಏಳು ಸಾಗರವರ್ಷ ಸುಖಸಾಗರದಲ್ಲಿ ಮುಳುಗಿಹೋಗಿರುತ್ತಾರೆ. ಬ್ರಹ್ಮ ಮತ್ತು ಬ್ರಹ್ಮೋತ್ತರ ಕಲ್ಪವಾಸಿಗಳು ಹತ್ತು ಸಾಗರ ಪರ್ಯಂತ ಹಿಂದುಮುಂದನ್ನು ಮರೆತು ಭೋಗವಿಲಾಸದಲ್ಲಿ ತತ್ಪರರಾಗಿರುತ್ತಾರೆ. ಲಾಂತವ ಕಾಪಿಷ್ಠ ಕಲ್ಪಗಳಲ್ಲಿ ದೇವತೆಗಳು ಹದಿನಾಲ್ಕು ಸಾಗರಕಾಲ ಆಮೋದದಲ್ಲಿರುತ್ತಾರೆ. ಶುಕ್ರ ಮಹಾಶುಕ್ರಗಳಲ್ಲಿ ಹದಿನಾರು ಸಾಗರ ಶುಕ್ರದೆಸೆಯನ್ನನುಭವಿಸುತ್ತಿರುತ್ತಾರೆ. ಶತಾರ ಮತ್ತು ಸಹಸ್ರಾರಗಳಲ್ಲಿ ಹದಿನೆಂಟು ಸಾಗರ ಹಾಯಾಗಿರುತ್ತಾರೆ. ಆನತ-ಪ್ರಾಣತ ಕಲ್ಪಗಳಲ್ಲಿ ಇಪ್ಪತ್ತುಸಾಗರ ಬದುಕಿ ಸುಖಿಸುವರು. ಆರಣಾಚ್ಯುತ ಕಲ್ಪಗಳಲ್ಲಿ ಇಪ್ಪತ್ತೆರಡು ಸಾಗರ ಆಯುವಿರುತ್ತದೆ. ಗ್ರೈವೇಯಕವಿಮಾನದಿಂದ ಮತ್ತೆ ಒಂದೊಂದು ಸಾಗರವರ್ಷ ಹೆಚ್ಚುತ್ತ ಐದು ಅಣುತ್ತರೆಗಳಲ್ಲಿ ಅದು ಪರಮಾವಧಿಗೆ ಮುಟ್ಟಿ ೩೩ ಸಾಗರವರ್ಷ ಅಲ್ಲಿಯ ಅಹಮಿಂದ್ರರು ರಸಮೂರ್ಛೆಯಲ್ಲಿರುತ್ತಾರೆ.[3] ಅಸುರರು ಒಂದು ಸಾಗರವರ್ಷ, ಭವನವಾಸಿಗಳು, ಜ್ಯೋತಿಷ್ಕರು, ವ್ಯಂತರರು ಮತ್ತು ಭೋಗಭೂಮಿಜರು ಕೆಲವು ಪಲ್ಯಕಾಲದ ವರೆಗೆ ಬದುಕಿರುತ್ತಾರೆ.[4] ವಿದೇಹದ ಜನರಿಗೆ ಒಂದು ಪೂರ್ವಕೋಟಿ ಪರಮಾಯುಷ್ಯವಿದೆ.[5] ಪೂರ್ವಕೋಟಿಯೆಂದರೆ ೭೦೫೬೦ರ ಮುಂದೆ ಹದಿನೇಳು ಸೊನ್ನೆಗಳಿ

---

೧. ತ್ರಿ. ಶ. ೨೩ ೨. ತ್ರಿ. ಶ. ೨೪. ೩. ದೇವತೆಗಳ ಆಯುಸ್ಸಿಗೆ ತ್ರಿ. ಶ., ಪ. ೫೬-೫೮ ನೋಡುವುದು.

೪. 'ಪಲ್ಯ' ಒಂದು ಸಾಗರ ಕಾಲವನ್ನು ಹತ್ತು ಕೋಟಿ ಸಾರ್ತಿ ಕೋಟಿಯನ್ನಿಟ್ಟು ಸುಜ್ಞಾನದಿಂದ ಭಾಗಿಸಿ ಅದರಲ್ಲಿ ಒಂದು ಭಾಗವನ್ನು ತೆಗೆದುಕೊಂಡರೆ 'ಪಲ್ಯ'ವಾಗುವುದು.—ತ್ರಿ. ಶ., ಪ. ೫೯.

೫. ಎಂಭತ್ತು ನಾಲ್ಕು ಲಕ್ಷ ವರ್ಷಗಳಿಗೆ [೮೪೦೦೦೦೦] ಒಂದು 'ಪೂರ್ವಾಂಗ' (ಅಂಗ.) ಎಂಭತ್ತು ನಾಲ್ಕು ಲಕ್ಷ ಅಂಗಗಳಿಗೆ ಒಂದು 'ಪೂರ್ವ'ವಾಗುವುದು [೮೪೦೦೦೦೦ × ೮೪೦೦೦೦೦.] ಒಂದು ಕೋಟಿ

ಟ್ಟಾಗ ಬರುವ ಅದ್ಭುತ ಸಂಖ್ಯೆಯಾಗುವುದು.

'ನಿಗೋದ'ವೆಂಬುದು ನರಕಕ್ಕಿಂತಲೂ ದುಃಖಮಯವಾದ ಅವಸ್ಥೆ. ಅದಕ್ಕೋ ಏನೋ ಈ ಪ್ರದೇಶ ನರಕಗಳಿಗೆ ಬುನಾದಿಯಂತೆ ಅತ್ಯಂತ ಅಧೋಗತಿಯಾಗಿರುವುದು! ಇಲ್ಲಿ ಕೇವಲ

ಪೂರ್ವಗಳಾದರೆ ಒಂದು 'ಪೂರ್ವಕೋಟಿ'ಯಾಗುವುದು.

೮೪೦೦೦೦೦ × ೮೪೦೦೦೦೦ = ೭೦೫೬ ೦೦೦೦೦ ೦೦೦೦೦ = ಪೂರ್ವ,

ಪೂರ್ವ × ೧೦೦೦೦೦೦೦ ಅಂದರೆ ೭೦೫೬ ೦೦೦೦೦ ೦೦೦೦೦ × ೧೦೦೦೦೦೦೦ =

೭೦೫೬ ೦೦೦೦೦ ೦೦೦೦೦ ೦೦೦೦೦೦೦. —ತ್ರಿ. ಶ., ಪ. ೬೦.

ಸಾಹಾರಣೋದಯೇಣ ಣಿಗೋದ ಸರೀರಾ ಹವಂತಿ ಸಾಮಣ್ಣಾ ||
ತೇ ಪುಣ ದುವಿಹಾ ಜೀವಾ ಬಾದರಸುಹಮಾತ್ತಿವಿಣ್ಣೇಯಾ || ೧೯೦ ||

[ಯಾವ ಜೀವಿಗಳ ಶರೀರ ಸಾಧಾರಣ ನಾಮಕರ್ಮೋದದಿಂದ ನಿಗೋದರೂಪವಾಗಿ ಪರಿಣಮಿಸುವುದೋ ಅವುಗಳನ್ನು 'ಸಾಮಾನ್ಯ' ಅಥವಾ 'ಸಾಧಾರಣ'ವೆಂದು ಹೇಳುವರು. ಇವುಗಳಲ್ಲಿ 'ಬಾದರ' ಮತ್ತು 'ಸೂಕ್ಷ್ಮ'ವೆಂದು ಎರಡು ಬಗೆಯಿದೆ. ಸಾಧಾರಣ ನಾಮಕರ್ಮೋದಯದಿಂದ ಅನಂತಾನಂತ ಜೀವಿಗಳಿಗೆ ಏಕಕಾಲದಲ್ಲಿ ಆಶ್ರಯ ನೀಡುವಂಥ ದೇಹವುಂಟಾಗುವುದು. ಈ ದೇಹ ಯಾವುವೊಂದು ಮುಖ್ಯಜೀವಿಗೂ ಸೇರಿದ್ದಲ್ಲ. ಅನಂತಾನಂತ ಜೀವಿಗಳು ಈ ದೇಹದಲ್ಲೇ ಸಾಧಾರಣ ರೂಪದಲ್ಲಿ ವಾಸಮಾಡುತ್ತವೆ.]

ಸಾಹಾರಣಮಾಹಾರೋ ಸಾಹಾರಣಮಾಣ ಪಾಣಗಹಣಂ ಚ |
ಸಾಹಾರಣಜೀವಾಣಂ ಸಾಹಾರಣಲಕ್ಖಣಂ ಭಣಿಯಂ || ೧೯೧ ||

[ಇನಕಾ (ಸಾಧಾರಣ ಜೀವೋಂಕಾ) ಸಾಧಾರಣ್ (ಸಮಾನ್) ಹೀ ತೋ ಆಹಾರ್ ಹೋತಾ ಹೈ ಔರ್ ಸಾಧರಣ ಹೀ ಶ್ವಾಸೋಚ್ಛ್ವಾಸಕಾ ಗ್ರಹಣ್ ಹೋತಾ ಹೈ. ಸಾಧಾರಣ ಜೀವೋಂಕಾ ಲಕ್ಷಣ್ ಸಾಧಾರಣ ಹೀ ಪರಮಾಗಮಮೇ ಕಹಾ ಹೈ—ಸಾಥ್ ಹೀ ಉತ್ಪನ್ನ ಹೋನೇವಾಲೇ ಜಿನ್ ಅನಂತಾನಂತ್ (ಸಾಧಾರಣ) ಜೀವೋಂಕೀ ಆಹಾರಾದಿಕ್ ಪರ್ಯಾಪ್ತಿ ಔರ್ ಉನಕೇ ಕಾರ್ಯ ಸದೃಶ್ ಅಮರ್ ಸಮಾನ್ ಕಾಲಮೇ ಹೋತೇಹೋ ಉನಕೋ ಸಾಧಾರಣ್ ಕಹತೇ ಹೈ]

ಜತ್ಥೇಕ್ಕಮರ ಇ ಜೀವೋ ತತ್ಥ ದು ಮರಣಂ ಹವೇ ಅಣಂತಾಣಂ |
ಬಕ್ಕಮ ಇ ಜತ್ಥ ಏಕ್ಕೋ ಬಕ್ಕಮಣಂ ತತ್ಥ ಣಂತಾಣಂ || ೧೯೨ ||

[ಸಾಧಾರಣ್ ಜೀವೋಮೇ ಉತ್ಪತ್ತಿ ಔರ್ ಮರಣಕೀ ಅಪೇಕ್ಷಾಭೀ ಸಾದೃಶ್ಯ್ ಹೈ. ಪ್ರಥಮ್ ಸಮಯಮೇ ಉತ್ಪನ್ನ ಹೋನೇವಾಲೇ ಸಾಧಾರಣ ಜೀವೋಂಕೀ ತರಹ್ ದ್ವಿತೀಯಾದಿ ಸಮಯೋಂಮೇ ಭೀ ಉತ್ಪನ್ನ ಹೋನೇವಾಲೇ ಸಾಧಾರಣಜೀವೋಂಕಾ ಜನ್ಮ ಮರಣ್ ಸಾಥ್ ಹೀ ಹೋತಾ ಹೈ. ಯಹಾ ಇತನಾ ವಿಶೇಷ್ ಸಮಝುನಾಕಿ ಏಕ್ ಬಾದರ್ ನಿಗೋದ ಶರೀರಮೇ ಯಾ ಸೂಕ್ಷ್ಮ ನಿಗೋದ ಶರೀರಮೇ ಸಾಥ್ ಉತ್ಪನ್ನ ಹೋನೇವಾಲೇ ಅನಂತಾನಂತ್ ಸಾಧಾರಣ ಜೀವ್ ಯಾ ತೋ ಪರ್ಯಾಪ್ತಕ್ ಹೀ ಹೋತೇ ಹೈ ಯಾ ಅಪರ್ಯಾಪ್ತಕ್ ಹೀ ಹೋತೇ ಹೈ. ಕಿಂತು ಮಿಶ್ರರೂಪ್ ನಹೀ ಹೋತೇ ಕ್ಯೋಂಕಿ ಉನಕೇ ಸಮಾನ್ ಕರ್ಮೋದಯಕಾ ನಿಯಮ್ ಹೈ.]

ಖಂಧಾ ಅಸಂಖಲೋಗಾ ಅಂಡರ ಆವಾಸಪುಲವಿದೇಹಾ ವಿ |
ಹೇಟ್ಠಿಲ್ಲಜೋಣಿಗಾವೋ ಅಸಂಖಲೋಗೇಣ ಗುಣಿದಕಮಾ || ೧೯೩ ||

[ಸ್ಕಂಧೋಂಕಾ (ಸ್ಕಂಧ್ ಅಂಡರ್ ಆವಾಸ್ ಆದಿ ಪ್ರತ್ಯೇಕ ಜೀವೋಂಕೇ ಶರೀರ ವಿಶೇಷ್ ಹೈ.) ಪ್ರಮಾಣ್ ಅಸಂಖ್ಯಾತ ಲೋಕಪ್ರಮಾಣ್ ಹೈ. ಔರ್ ಅಂಡರ ಆವಾಸ್ ಪುಲವಿ ತಥಾ ದೇಹ್ ಯೇ ಕ್ರಮಸೇ ಉತ್ತರೋತ್ತರ್ ಅಸಂಖ್ಯಾತ ಲೋಕ್ ಅಸಂಖ್ಯಾತ ಲೋಕ್‌ಗುಣಿತ್ ಹೈ—ಅಪನೇ ಯೋಗ್ಯ ಅಸಂಖ್ಯಾತಕಾ ಲೋಕಕೇ ಸಮಸ್ತ ಪ್ರದೇಶೋಂಸೇ ಗುಣಾ ಕರನೇಪರ್ ಜೋಲಬ್ಧ ಆವೇ ಉತನಾ ಸಮಸ್ತ

ಏಕೇಂದ್ರಿಯ ಜೀವಿಗಳು ಮಾತ್ರ ಇವೆ. 'ಸ್ಕಂಧ' 'ಅಂಡರ' 'ಆವಾಸ' 'ಪುಳವಿ' 'ಮೂರ್ತಿ'ಗಳೆಂದು ಸೂಕ್ಷ್ಮ ನಿಗೋದ ಜೀವಿಗಳಲ್ಲಿ ಐದು ಬಗೆಯಿದೆ. ಒಂದು ಸ್ಕಂಧದಲ್ಲಿ ಅಸಂಖ್ಯಾತ ಲೋಕಪ್ರಮಾಣ ಅಂಡರ ಜೀವಿಗಳಿರುತ್ತವೆ. ಇದೇ ರೀತಿ ಅಂಡರದಲ್ಲಿ ಆವಾಸವೂ, ಆವಾಸದಲ್ಲಿ ಪುಳವಿಯೂ, ಪುಳವಿಯಲ್ಲಿ ಮೂರ್ತಿಯೂ ಏಕದೇಹವಾಗಿ ಸೇರಿಕೊಂಡು ಸಂಕಟ ಸಾಗರದಲ್ಲಿ ಮೂಡಿ ಮುಳುಗಿ ನರಳುತ್ತಿವೆ. ಈ ಅತಿಸೂಕ್ಷ್ಮ ಜೀವಿಗಳು ಎರಡು ಘಳಿಗೆಯಲ್ಲಿ ಹದಿನೆಂಟು ಸಾವಿರ ಬಾರಿ ಕಡಿಮೆಯಿಲ್ಲದೆ, ಒಟ್ಟೊಟ್ಟಿಗೆ ಸಾಯುತ್ತಾ ಹುಟ್ಟುತ್ತ ಮಿಲಿಮಿಲಿ ಒದ್ದಾಡುತ್ತಿವೆ. ನಿಗೋದದ ನರಳಾಟವನ್ನು ಕಾಲಪ್ರಮಾಣದಲ್ಲಿ ಹೇಳಬೇಕಾದರೆ ಸಾಗರ ವರ್ಷವೆಂಬುದು ಅಲ್ಲಿಯ ಕಾಲಮಾಪಕಕ್ಕೆ ತೀರ ಚಿಕ್ಕಪ್ರಮಾಣವಾಗುವುದು. (ತ್ರಿ. ಶ. ೭೬-೮೧)

ತ್ರಿಲೋಕ ಸ್ವರೂಪವನ್ನೂ ಅದರ ರಹಸ್ಯವನ್ನೂ ಇಷ್ಟೊಂದು ಸರಳವಾಗಿ ವಿವರಿಸಿರುವ ಗ್ರಂಥ ಕನ್ನಡದಲ್ಲಿ ಅಪರೂಪ, ಇಲ್ಲವೆಂದರೂ ಸರಿಯೆ. ಈ ಗ್ರಂಥದಲ್ಲಿ ಬರುವ ವಿಷಯವೆಲ್ಲ ಕಟ್ಟುನಿಟ್ಟಾದ ಸಿದ್ಧಾಂತವೆಂಬುದನ್ನು ಒಪ್ಪಿಕೊಂಡಾಗ್ಯು ಪ್ರತಿಭಾಶಾಲಿ ಇದಕ್ಕೆ ಕೈಹಾಕಿದರೆ ತಾನಾಗೆ ತ್ರಿಲೋಕ ಸಾಮಾನ್ಯ ಸ್ವರೂಪವೂ ರಸಸ್ಪರ್ಶವನ್ನು ಪಡೆದೀತು. ತ್ರಿಲೋಕಶತಕದಲ್ಲಿ ಅಲ್ಲೊಮ್ಮೆ ಇಲ್ಲೊಮ್ಮೆ ಕಾವ್ಯಾಂಶ ಇಣಿಕಿಯಾದರೂ ನೋಡಿದೆ. ಈ ಗ್ರಂಥಕರ್ತ ಕವಿಮನೋಭಾವವುಳ್ಳವನೆಂದು ಯಾರು ಬೇಕಾದರೂ ಹೇಳಬಹುದು. ಪ್ರಬುದ್ಧಮಾನಕ್ಕೆ ಬಂದಾಗ ಈ ಲೇಖಕನೇ (ರತ್ನಾಕರ) ಮೆಲ್ತರಗತಿಯ ಕವಿಯಾದಾನೆಂದು ಭವಿಷ್ಯವನ್ನೂ ನುಡಿಯಬಹುದು. ನಾನಾ ಲೋಕದ ವಿಚಿತ್ರವನ್ನೂ ರಹಸ್ಯವನ್ನೂ ಹಾಗೂ ಸೂಕ್ಷ್ಮಾಂಶಗಳನ್ನೂ ರತ್ನಾಕರ ತ್ರಿಲೋಕ ಶತಕದಲ್ಲಿ ಸಾಧ್ಯವಾದಷ್ಟೂ ತಂದಿರುವುದರಿಂದ ಕನ್ನಡ ವಿದ್ವಾಂಸರಿಗೆ ಮಹದುಪಕಾರವಾಗಿರುವುದು.

ಶಾಸ್ತ್ರ ತಾತ್ಪರ್ಯವರ್ಣನೆಯಲ್ಲಿ ಭೇದಾಭೇದ ಭಕ್ತಿಯನ್ನು ತಂದಿರುವನು[೧]. ರತ್ನಾಕರನ ಕೃತಿಗಳಲ್ಲೆಲ್ಲ ಸಂದರ್ಭೋಚಿತವಾಗಿ ಈ ಪ್ರಕರಣ ಬಂದೇ ಇದೆ. ಸ್ವಲ್ಪ ಮಟ್ಟಿಗೆ ಇಲ್ಲಿಯ ವಿವರಣೆಗೂ ಆಗಾಗ ಭರತೇಶವೈಭವದಲ್ಲಿ ಬರುವ ಭೇದಾಭೇದ ಭಕ್ತಿಯ ಬಣ್ಣನೆಗೂ ಹೋಲಿಕೆ ಕಂಡುಬರುತ್ತದೆ.

ಸ್ಕಂಧೋಂಕಾ ಪ್ರಮಾಣ್ ಹೈ. ಔರ್ ಏಕ್‌ಏಕ್ ಸ್ಕಂಧ ಮೇ ಅಸಂಖ್ಯಾತ ಲೋಕ್ ಪ್ರಮಾಣ್ ಅಂಡರ ಹೈ, ಏಕ್‌ಏಕ್ ಅಂಡರಮೇ ಅಸಂಖ್ಯಾತ್ ಲೋಕ್‌ಪ್ರಮಾಣ್ ಆವಾಸ ಹೈ, ಏಕ್‌ಏಕ್ ಆವಾಸಮೇ ಅಸಂಖ್ಯಾತ್ ಲೋಕ್ ಪ್ರಮಾಣ ಪುಲವಿ ಹೈ. ಏಕ್‌ಏಕ್ ಪುಲವಿಮೇ ಅಸಂಖ್ಯಾತ ಲೋಕ ಪ್ರಮಾಣ್ ಬಾದರ್ ನಿಗೋದಿಯಾ ಜೀವೋಂಕೇ ಶರೀರ್ ಹೈ. ಇಸಲಿಯೇ ಜಬ್ ಏಕ್ ಸ್ಕಂಧಮೇ ಅಸಂಖ್ಯಾತ ಲೋಕ್ ಪ್ರಮಾಣ್ ಅಂಡರ್ ಹೈತಬ್ ಸಮಸ್ತ ಸ್ಕಂಧೋಂಮೇ ಕಿತನೇ ಅಂಡರ್ ಹೋಗೇ? ಇಸ್ ಪ್ರಕಾರ್ ಇನಕಾ ತ್ರೈರಾಶಿಕ್‌ಕರನೇಸೇ ಅಂಡರ್ ಆವಾಸ ಪುಲವಿತಥಾ ದೇಹ್ ಇನಕಾ ಉತ್ತರೋತ್ತರ ಕ್ರಮಸೇ ಅಸಂಖ್ಯಾತ ಲೋಕ್ ಅಸಂಖ್ಯಾತ ಲೋಕ್ ಗುಣಾ ಪ್ರಮಾಣ್ ನಿಕಲತಾ ಹೈ. ಗೋ. ಸಾ., ಜೀ. ಕಾಂ., ಪು ೭೭-೭೮ (ಸಂ. ಶ್ರೀ. ಪಂ. ಗೋಪಾಲದಾಸಜೀ)]

೧. ತ್ರಿ. ಶ. ೧೦೮-೧೨೨.

ಪಂಚಾಣುತ್ತರೆಯಿಂ ಭವ | ನಾಂಚಿತಧರೆ ಮುಟ್ಟಲಿರ್ದ ಸುರರುಂ ಮಡಿವರ್ ||
ಕಿಂಚಿತ್ಸುಖಮಿದು ಛೀ ಸುಡು | ಚಂಚನ್ಮುಕ್ತಿಯೆ ಮಹಾಸುಖಂ ನಿತ್ಯಪದಂ || ೧೦೮ ||
ನರಕನಿಗೋದಂಗಳ ಮಾ | ತಿರಲತಿತರ ದುಃಖದಾಗರಂ ಕುಡುಕಷ್ಟಂ ||
ನರಖಚರ ಭೋಗಭೂಮಿಜ | ರರರೆ ವಿದೇಹಜರುಮಲ್ಪಸುಖಿಗಳ್ಮಡಿವರ್ || ೧೦೯ ||
ಕೇಡಿಲ್ಲದ ಸುಖಮಾವುದು | ನೋಡಿದೊಡಾ ಮುಕ್ತಿಯೊಂದೆ ಮತ್ತಿನವೆಲ್ಲಂ ||
ಕೇಡುಳ್ಳವದರಿನೆಲ್ಲರ್ | ಮಾಡುವುದಾ ಮುಕ್ತಿಪದಕೆ ತಕ್ಕುಜ್ಜಗಮಂ || ೧೧೦ ||

ಈ ಪದ್ಯಗಳಿಗೆ ಹೋಲುವಂಥ ಸಾಂಗತ್ಯವನ್ನು ಭರತೇಶ ವೈಭವದಲ್ಲಿ ನೋಡಬಹುದು.

ಅನಿಮಿಷಸುಖ ನಿತ್ಯವಲ್ಲ ನರಕದ ವೇ | ದನೆ ನಿತ್ಯವಲ್ಲವವೆರಡೂ ||
ಕನಸಕಾಂಬಂತೆ ಕನಸಮರೆವಂತೆ ಜೀ | ವನಭ್ರಾಂತಿಯಲ್ತೆ ಹೆಚ್ಚೇನು || ೬೭ ||
ಮರನೇರಿ ನಕ್ಕಾಡಿ ಕೆಳಿಯಿಕೆ ಬೀಳ್ವಂತೇ | ಸುರರು ಭೂತಳಕೆ ಬೀಳುವರು ||
ಧರೆಯೊಳು ಬಿದ್ದಳುತಿದ್ದು ಮೇಲಕೆ ಬಹ | ಪರಿಯೊಳು ಬಹರುನಾರಕರು || ೮೬ ||
ಸಿದ್ಧರಂತೆಲ್ಲರು ಸುಖವಿಹುದಕೆ ತಕ್ಕ ಬುದ್ಧಿಯಾ | ವುದು ನಮಗದನು ||
ಬುದ್ಧಿಗಲಿಸು ಸ್ವಾಮಿಯೆಂದು ವಿದ್ಯಾಮಣಿ | ಶುದ್ಧ ಚಿತ್ತದೊಳು ಕೇಳಿದಳು || ೪೦ ||
ಕರ್ಮವ ಕೆಡಿಸಿದರೆಲ್ಲರು ಸಿದ್ಧರಂ | ತೊರ್ಮೊದಲೊಳಗಿಹರೆಂದಾ ||
ಕರ್ಮವ ಕೆಡಿಸುವುಪಾಯ ತಾನಾವುದಾ | ಮರ್ಮವನುಸುರೆಂದಳಾಕೆ || ೪೧ ||

ಭೇದಾಭೇದ ಭಕ್ತಿಯನ್ನು ವಿವರಿಸುವಾಗಂತೂ ತ್ರಿಲೋಕಶತಕ ಹಾಗು ಭರತೇಶವೈಭವ ತೀರ ಹತ್ತಿರಕ್ಕೆ ಬರುತ್ತವೆ.

ಅವುಜ್ಜಗಮೇನೆಂದೊಡೆ | ಪಾವನಜಿನಸಿದ್ಧಭಕ್ತಿಯಾ ಭಕ್ತಿಯೆ ತಾಂ ||
ಭಾವಿಸೆ ಭೇದಮಭೇದಂ | ದ್ವೈವಿಧಮಾಗಿರ್ಕುಮರಿದು ನೆಗಳ್ದೊಡೆ ಮೋಕ್ಷಂ || ೧೧೧ ||
ಸಲೆ ಭೇದಭಕ್ತಿಯೆಂತುಟು | ಹೊಲಬರಿಯೆವು ಮತ್ತಭೇದ ಭಕ್ತಿಯದೆಂತಾ ||
ಕಲೆಯಂ ಪೇಳೆನೆ ಪೇಳ್ವೆಂ | ಹಲವಂ ಹಂಬಲಿಸದೊಲ್ದು ಲಾಲಿಪುದೆಲ್ಲರ್ || ೧೧೨ ||
ಶ್ರೀ ಸಮವಸರಣದೊಳ್ಜಿನ | ರಾಸಿದ್ಧರುದಗ್ರ ಮೋಕ್ಷದಲ್ಲಿಹರೆಂದ |
ಭ್ಯಾಸಿಸಿ ಬೇರಿಟ್ಟವರಂ | ಲೇಸಿಂ ಧ್ಯಾನಿಪುದೆ ಭೇದ ಭಕ್ತಿಯೆನಿಕ್ಕುಂ || ೧೧೩ ||
ಮತ್ತಾಜಿನರಂ ಸಿದ್ಧರ | ನಿತ್ತಲ್ತನ್ನೊಡಲೊಳಿರ್ದ ಶುದ್ಧಾತ್ಮನೊಳೇ ||
ಪತ್ತಿಸಿ ತಾಂ ಧ್ಯಾನಿಸಿದೊಡೆ | ಸುತ್ತೇನದುತಾನಭೇದ ಭಕ್ತಿಯೆನಿಕ್ಕುಂ || ೧೧೪ ||
ದೇವನ ಬೇರಿಟ್ಟೊಲವಿಂ | ಭಾವಿಸಲದು ಭೇದಭಕ್ತಿ ಬೇರಾಗದೆ ತಾಂ ||
ಭಾವಿಸಲಭೇದ ಭಕ್ತಿ ಕ | ಲಾವಿಧಮೆಂದರಿದು ನೆಗಳೆ ಮುಕ್ತಿಯದಕ್ಕುಂ || ೧೧೫ ||
ಭೇದಭಕ್ತಿಯ ಮೊದಲೊಳ | ಗಾದರಿಪುದು ಮತ್ತು ಭೇದಭಕ್ತಿಯೊಳೀ ಜ್ಞಾ ||
ನೋದಯಮಾಗಿರ್ಪುದಿದೇ | ಹಾದಿ ಸುಮೋಕ್ಷಕೆ ತಾನೆ ರತ್ನತ್ರಯಮುಂ || ೧೧೬ ||
ಜಿನರಂತೆ ಸಿದ್ಧರಂತೀ | ತನುವಿನೊಳಿರ್ದಾತ್ಮನೆಂದು ತಾಂ ಧ್ಯಾನಿಪುದೇ ||
ಜಿನಸಿದ್ಧಭಕ್ತಿಯದರಿಂ | ದನುಭವಿಸುವನದರ ಪದಮುಮಂ ಮೋಕ್ಷಮುಮಂ || ೧೧೭ ||
ಶಿಲೆಯಂ ಕಂಚುಲೆಪ್ಪವ | ನಲಸದೆ ಜಿನಮುದ್ರೆ ಮಾಡಿ ಪೂಜಿಪ ತೆರದಿಂ ||
ಚಲಿಸದೆ ಜಿನನೆಂದಾತ್ಮನ | ನೊಲೆದೀಕ್ಷಿಸೆ ಮೋಕ್ಷಮಪ್ಪುದೊಂದಚ್ಚರಿಯೇ || ೧೧೮ ||
ಮುಂಪೇಳ್ದ ಸಿದ್ಧರೆಲ್ಲರು | ಮಿಂಪಿನೊಳೀ ಧರೆಯೊಳಿರ್ದುಮೀ ಪರಿಯೊಳಗಾ ||
ತ್ಮಂ ಪಾವನನೆಂದೀಕ್ಷಿಸಿ | ಪೆಂಪೆನಿಸಿದ ಸಿದ್ಧರಾದರಿದು ಸಿದ್ಧಾಂತಂ || ೧೨೧ ||

ಲೋಕತ್ರಯಮದನರಿಯ | ಲ್ವೇಕಾದೊಡೆ ಲೋಕದಷ್ಟು ತೆರಪೆನ್ನಾತ್ಮಂ ||
ಶ್ರೀಕರನೆಂದಾತ್ಮಧ್ಯಾ | ನೈಕಾಗ್ರಣಿಯಾಗಬೇಕುಮಲ್ಲದೊಡಫಲಂ || ೧೨೨ ||

ಭೇದಾಭೇದ ಭಕ್ತಿಯನ್ನು ತುಂಬ ಸರಳವಾಗಿ, ಸಹಜವಾಗಿ ಕವಿ ಚಿತ್ರಿಸಿರುವನು. ಈಗ ಭರತೇಶವೈಭದತ್ತ ಹೊರಳುವ.

ಜಿನಸಿದ್ಧ ಭಕ್ತಿಯಿಂದಾ ಕರ್ಮ ಕೆಡುವುದಾ | ಜಿನಸಿದ್ಧ ಭಕ್ತಿನೋಳ್ಪಾಗ ||
ವಿನುತ ಭೇದಾಭೇದ ಭಕ್ತಿಯಿಂದಿರ್ತೆರ | ನನುಕರಿಸಿಹುದು ಕೇಳವನು || ೪೨ ||
ಇದಿರಿಟ್ಟು ಜಿನಸಿದ್ಧರುಗಳಪೂಜಿಪುದು ನೋ | ಳ್ಪುದು ಪೊಗಳ್ವುದು ಭೇದ ಭಕ್ತಿ ||
ಪದೆದು ತನ್ನಾತ್ಮ ರೂಪಿನೊಳಿಟ್ಟು ನೋಡಿದ | ರದು ಭೇದವಿಲ್ಲದ ಭಕ್ತಿ || ೪೩ ||
ಕಂಚಿನೊಳಗೆ ಶಿಲೆಯೊಳಗೆ ದೇವನ ನೋಡೆ | ಮಿಂಚುಗಾರಿಕೆಯ ಭಕ್ತಿಯದು ||
ಚಂಚುರಾತ್ಮನೊಳಿಟ್ಟು ನೋಡಿದರದು ನಿಗ | ಮಾಂಚಿತ ನಿರ್ಭೇದ ಭಕ್ತಿ || ೧೦೭ ||
ಪ್ರಾರಂಭದೊಳು ಭೇದಭಕ್ತಿಯ ಮಾಡಿ ಮ | ತ್ತಾರು ನಿರ್ಭೇದಭಕ್ತಿಯೊಳು ||
ಆರಾಧಿಸಿದರವರಾ ಕರ್ಮಕೆಡುವುದು | ಭೂರಿವಚನಗಳನೇನೆಂಬೆ || ೪೪ ||
ಜಿನವಾಸದೊಳಗಿದಿರಿಟ್ಟು ಜಿನೇಂದ್ರನ | ಮನವೊಲಿದರ್ಚಿಸಿದಂತೆ ||
ತನುವಾಸದೊಳಗಾತ್ಮರೂಪ ನೋಡಿದರೆಲೆ | ವನಿತೆ ನಿರ್ಭೇದ ಭಕ್ತಿಯದು[1] || ೪೬ ||
ಪುರುಷಾಕಾರನು ಮೈಯೊಳಿರ್ದುದಾಮೈಯ | ಬೆರಸದೆ ಶುದ್ಧಾತ್ಮನಿಹನು ||
ಪುರುಷಾಕಾರವನಾಕಾಶದೊಳಗೊಂದ | ಬರೆದರೋ ಎಂಬ ಭಾವದೊಳು[2] || ೧೦೦ ||

ಭೇದಾಭೇದ ಭಕ್ತಿಯನ್ನು ನಿರೂಪಿಸುವಾಗಂತು ಭರತೇಶವೈಭವ ಹಾಗು ತ್ರಿಲೋಕ ಶತಕ ಅನ್ಯೋನ್ಯವಾಗಿ ಸಾಗಿವೆ. ಎರಡು ಕಡೆಯೂ ಹದವರಿತು ಸಂಭಾಷಣಾಶೈಲಿ ಹರಿದಿರುವುದರಿಂದ ಕ್ಲಿಷ್ಟವಾಗಬಹುದಾದ ಸಿದ್ಧಾಂತ ಸರಳವೂ ಸುಂದರವೂ ಆಗಿ ಓದುಗನಲ್ಲಿ ಬೇಸರ ಬರದಂತಾಗಿದೆ. ಒಂದೇ ಹೃದಯದಿಂದ ಹೊರಟ ಭಾವನಾತರಂಗ ಎರಡು ಕವಲೊಡೆದು (ಒಂದೇ ಹೃದಯದಿಂದ ಹೊರಟರೂ ಏಕಕಾಲದಲ್ಲಿ ಹೊರಟುದಲ್ಲವೆಂಬುದನ್ನು ಮರೆಯಬಾರದು) ಎರಡು ಕಡೆಯೂ ಒಂದೇ ಅಭಿಪ್ರಾಯ ಮೂಡಿಸಿ ಈ ಎರಡು ಕೃತಿಗಳ ನಿರ್ಮಾಪಕ ಒಬ್ಬನೇ ಎಂದು 'ಭೇದಾಭೇದ ಭಕ್ತಿ' ಸಾರುತ್ತಿಲ್ಲವೆ?

ಧ್ಯಾನದ ಬಗ್ಗೆ ರತ್ನಾಕರನಿಗೆ ಬಾಲ್ಯದಿಂದಲೂ ಕುತೂಹಲ ಹಾಗು ಅಭಿರುಚಿ ಇದ್ದಿರಬೇಕು. ಧ್ಯಾನಕಲೆಯನ್ನು ಕುರಿತು ರತ್ನಾಕರನಷ್ಟು ಬಣ್ಣಿಸಿರುವ ಇನ್ನೊಬ್ಬ ಕವಿ ದೊರೆಯುವುದೇ ದುರ್ಲಭವಾಗಿದೆ. ಆಗಾಗ ಹಂಸಕಲೆಯನ್ನು ರತ್ನಾಕರ ವಿದ್ಯಾರ್ಥಿದೆಸೆಯಲ್ಲೇ ಪ್ರಯೋಗಕ್ಕಿಟ್ಟು ಉಪಾಸನೆ ಮಾಡಿದ್ದನೋ ಏನೊ! ಜೈನಾಗಮದ ಉಸಿರಾದ ದಯಾದಾಕ್ಷಿಣ್ಯದ ತಾಯ್ಬೇರಿಗೆ ಕುಟ್ಟು ಹಿಡಿದು, ಔದಾರ್ಯದ ಕೊಂಬೆ ರೆಂಬೆಗಳನ್ನು ಕಾಲಾನುಕ್ರಮದಲ್ಲಿ ಶುಷ್ಕಪಾಂಡಿತ್ಯದ ಬಂದಳಿಕೆ ಕಾಣಿಸಿಕೊಂಡು ಕುತ್ತವಾಗಿ ಕಾಡಿತು. ರತ್ನಾಕರ ದಯಾರಸವಿಹೀನ ಪಾಂಡಿತ್ಯಕ್ಕೆ ಮೊದಲಿನಿಂದಲೂ ತಿರುಗಿಬಿದ್ದು ಸುಧಾರಣಾ ಮನೋಭಾವವನ್ನು ಬೆಳಗಿಸಿಕೊಂಡ ಕ್ರಾಂತಿಕಾರಿ!

---

೧. ಭ. ವೈ. ೧೭ನೇ ಸಂ.
೨. ಭ. ವೈ. ೧ನೇ ಸಂ.

ಕೆಲರೆಲ್ಲ ಸಲ್ಲದೆಂಬರ್ | ಕೆಲರಾತ್ಮಧ್ಯಾನಮಿಲ್ಲ ಪೊಲ್ಲದಿದೆಂಬ ||
ಗೋರ್ಲಿಯದಿರಣ್ಣಾ ಮೋಕ್ಷದ | ಕಲೆಯದು ನಂಬಿದೊಡೆ ನೋಡಿರ್ಕೆ ಪ್ರಾಭೃತಮಂ || ೧೨೩ ||
'ಆಸನ್ನ ಭವ್ಯ'ರಾತ್ಮನ | ನೋಸರಿಸದೆ ಕಾಣ್ಬರಯ್ಯ ಕಾಣದೊಡಂ ದೂ ||
ರಾಸನ್ನ ಭವ್ಯರೊಪ್ಪುವ | ರೀ ಸಹಜಧ್ಯಾನಮೆಂದೊಡುರಿವರಭವ್ಯರ್ || ೧೨೪ ||
ಧ್ಯಾನಿಗೆ ಮೂರೇ ಭವಮಾ | ಧ್ಯಾನಕೊಡಂಬಟ್ಟವಂಗೆ ಹತ್ತೆಂಟು ಭವಂ ||
ತಾನೊಡನೆ ಮುಕ್ತಿಯಹುದೀ | ಧ್ಯಾನಕ್ಕೆ ಮುನಿವಂಗೆ ಮುಕ್ತಿಯಿಲ್ಲಖಿಲ ಭವಂ || ೧೨೫ ||

ತ್ರಿಲೋಕ ಶತಕದಲ್ಲಿ ಈ ರೀತಿ ಧೂರ್ತರನ್ನು ರತ್ನಾಕರ ಖಂಡಿಸಿರುವನು. ರತ್ನಾಕರನ ಶತಕದಲ್ಲಿ ವಿದ್ಯಾವಂತಧೂರ್ತರನ್ನು ಕುರಿತು ನಿರ್ದಾಕ್ಷಿಣ್ಯವಾಗಿ.... "ಶಸ್ತ್ರಿಕನಲಾ" ಎಂದು ಘೋಷಿಸಿರುವನು.

ಭರತೇಶವೈಭವದಲ್ಲೂ ಇಂಥ ಸಂದರ್ಭ ಬರದೇ ಇಲ್ಲ.

ಎಂದಿಗೂ ಮುಕ್ತರಾಗದೆ ಭವದೊಳು ಹುಟ್ಟಿ | ಹೊಂದುವ ನಿರ್ಭವ್ಯರಂಟು ||
ನಿಂದಿಸುವರು ಹಂಸಯೋಗವನರಿದದ | ನೊಂದನೆ ಭವ್ಯರೊಪ್ಪುವರು || ೧೨೦ ||
ಬಾರದು ತಮಗಾತ್ಮಯೋಗವು ಯೋಗ ಬಂ | ದಾರಾಧಿಪರನು ಜರೆವರು ||
ನಾರಿಗಿಲ್ಲೆಂದು ಗೃಹಸ್ಥರಿಗಿಲ್ಲೆಂದು | ಹೋರುವರಾಮೂರ್ಖರಬಲೆ || ೧೨೨ ||
ಬಹುಶಾಸ್ತ್ರಬೇಕು ನಿರ್ವಾಣ ಬೇಕಾಧ್ಯಾನ | ವಿಹರಣೆಗೆಂದು ಕಾಡುವರು ||
ಬಹುಶಾಸ್ತ್ರಿಯಾಗಿ ನಿರ್ವಾಣಿಯಾಗಿಯು ಧ್ಯಾನ | ರಹಿತರಾಗಿಹರು ತಾವಬಲೆ || ೧೨೪ ||
ಪರಮಾತ್ಮಯೋಗವೆ ಮುಕ್ತಿಗೆ ಬೀಜವೆಂ | ದೆರಡಿಲ್ಲದೆದೆಯೊಳು ನಂಬಿ ||
ಚರಿಸಿರೌ ಪುಣ್ಯಕೃತ್ಯದೊಳದು ಮುಕ್ತಿಯ | ಸರಣಿದೋರ್ಪುದು ನಾಳೆಯೆಂದಾ || ೯೪ ||

ಪಾಂಡಿತ್ಯ, ಆಚರಣೆಯ ಪೀಠದ ಮೇಲೆ ಮಂಡಿಸಿ ಔದಾರ್ಯದ ಮಕುಟವನ್ನು ಧರಿಸಿದಾಗ ಪಾವನವಾಗುವುದೇ ಹೊರತು ಅದು ಕೇವಲ ಒಣಪಾಂಡಿತ್ಯವಾಗಿ ಮೆರೆದಾಗ ಕತ್ತೆ ಹುಲಿ ತೊಗಲನ್ನು ಹೊದ್ದು ಸಂಚರಿಸಿದಂತಾಗುವುದು; ಬಾಯಿ ತೆರೆದರೆ ಅದರ ಬಣ್ಣ ಬಯಲಾಗದಿರದು!

ಅಪವಿತ್ರದೊಡಲೊಳಿರ್ದುಂ | ಸುಪವಿತ್ರನೆನಿಕ್ಕುಮಾತ್ಮನೆಂತೆನೆ ಪೇಳ್ವೆಂ ||
ಅಪವಿತ್ರದ ಕೆಚಲೊಳಿ | ರ್ದಪುದಾಗಿಯುಮಮೃತಮೆನಿಪ ಪಾಲಂತೆ ವಲಂ || ತ್ರಿ. ಶ.|| ೧೮೯ ||
ಒರೆಯೊಳಿರ್ದಾಯುಧದಂತೆ ಕಾರ್ಮುಗಿಲಿನ | ಮರೆಯೊಳಿಹ ಸೂರ್ಯನಂತೆ ||
ಹೊರಗೆ ಕಲ್ಮಷದ ಮೈಯಹುದೊಳಗಾತ್ಮನು | ಕರೆವುತಿಹನು ತಿಳಿವೆಳಗಾ ||
ಭ. ವೈ. ಆಸ್ಥಾ ಸಂ ೧೦೮

ಈ ಎರಡು ಪದ್ಯದಲ್ಲೂ ಎಂಥ ಹೋಲಿಕೆಯಿದೆ ನೋಡಿ.

ಕನ್ನಡ ಕವಿಗಳಿಗೆ ಒಂದೋ ಎರಡೋ ಸಂಸ್ಕೃತ ಪದ್ಯಗಳನ್ನು ಬರೆದ ಹೊರತು ಸಮಾಧಾನವಾಗದು. ಭರತೇಶವೈಭವದಲ್ಲೂ ರತ್ನಾಕರ 'ವಂದನಾಷ್ಟಕಂ' ಎಂದು ಸಂಸ್ಕೃತದಲ್ಲಿ ಎಂಟು ಪದ್ಯಗಳನ್ನು ರಚಿಸಿರುವನು[1]. ರತ್ನಾಕರ ಶತಕದಲ್ಲೂ ಒಂದು ಸಂಸ್ಕೃತ ವೃತ್ತಬಂದಿರುವುದನ್ನು ಗಮನಿಸಬಹುದು.[2] ತ್ರಿಲೋಕ ಶತಕದಲ್ಲೂ ಎರಡು ಸಂಸ್ಕೃತ ಕಂದಗಳಿವೆ.

೧. ಭ. ವೈ. ೧೮ನೇ ಸಂ. ಪ. ೮೫-೯೭ ೨. ರತ್ನಾ. ಶ. ೧೨೭

ಪ್ರಣವಸ್ವರೂಪ ತೇ ನಮ | ರಣದೂರ ನಮೋ ನಮೋ ನಮೋಸ್ತು ಸ್ವಾಹಾ ||
ಗುಣಗುಣಿಯೋಗಾಯ ನಮೋ | ಮಣಿತ್ರಯ್ಯೈಕಾರ್ಥನೇ ಚಿದಂಬರಪುರುಷಾ || ೧೨೬ ||
ಸಿದ್ಧಾಯನಮಃ ಸ್ವಾಹಾ | ಸಿದ್ಧಾಂತಾಮೃತ ಸಮುದ್ರಸಾರಾಯ ನಮಃ |
ಸಿದ್ಧಪರಮೇಷ್ಠಿನೇ ನಮಃ | ಉದ್ಧೂತಮಲಾಯತೇ ನಿರಂಜನ ಸಿದ್ಧಾ || ೧೨೭ ||

ಈ ರೀತಿ ರತ್ನಾಕರ, ನಿರಂಜನಸಿದ್ಧನಿಗೆ ಸಂಸ್ಕೃತದಲ್ಲೂ ತನ್ನ ಭಕ್ತಿಯನ್ನು ತೋರಿರುವನು. ಪಂಪಮಹಾಕವಿಯು ಸಂಸ್ಕೃತದ ವೃತ್ತಮಾಲಿಕೆಯನ್ನು ಆದಿದೇವನಿಗೆ ತೊಡಿಸದೇ ಇಲ್ಲ[1]. ವಿದ್ವಾಂಸರನ್ನು ಮೆಚ್ಚಿಸುವ ಸಲುವಾಗೊ ಏನೋ ಉಭಯ ಭಾಷಾ ವಿದ್ವಾಂಸರಾದ ಕನ್ನಡ ಕವಿಗಳು ತಮ್ಮ ಕೃತಿಗಳಲ್ಲಿ ಒಂದೆರಡಾದರು ಸಂಸ್ಕೃತ ಶ್ಲೋಕಗಳಿರಬೇಕೆಂದು ಭಾವಿಸಿದಂತಿದೆ.

ಒಬ್ಬ ಮಹನೀಯರು ಶತಕತ್ರಯಗಳಲ್ಲಾವುದೂ ಭರತೇಶವೈಭವದ ಕರ್ತೃವಾದ ರತ್ನಾಕರನದಲ್ಲವೆಂದು ಊಹಿಸಲು ಯತ್ನಿಸಿರುವರು. ಆದರೆ ಈ ಮಹನೀಯರು ಏನೋ ಹೇಳುವಾಗ ಈ ಮಾತನ್ನೆತ್ತಿಕೊಂಡು ಕೊನೆಗೆ ಹಾಗೇ ಕೈಬಿಟ್ಟು ಮುಂದಕ್ಕೆ ಹೊರಟಿರುವರು! ಎತ್ತಿದವರು ಒಂದೆರಡಾದರೂ ಕಾರಣಗಳನ್ನು ಕೊಡದೆ ಹೋದರೆ ಇದನ್ನಾದರು ಏಕೆ ಪ್ರಸ್ತಾಪಿಸಬೇಕಾಗಿತ್ತೋ ಏನೋ ನನಗಂತು ಅರ್ಥವಾಗುತ್ತಿಲ್ಲ![2] ಶತಕತ್ರಯದ ಕರ್ತೃ ಬೇರೆಯಲ್ಲ ಭರತೇಶವೈಭವದ ರಚನಾಕಾರ ಬೇರೆಯಲ್ಲ. ರತ್ನಾಕರಾರ್ಯನೇ ಪ್ರಬುದ್ಧಮಾನಕ್ಕೆ ಬಂದಮೇಲೆ ರತ್ನಾಕರಸಿದ್ಧನಾಗಿರುವನು. ಒಬ್ಬನೇ ವ್ಯಕ್ತಿಯ ಆಂತರಿಕ ವಿಕಾಸಕ್ಕನುಸರಿಸಿ ಈ ಹೆಸರುಗಳು ಬಂದಿವೆ. ರತ್ನಾಕರಾರ್ಯನೇ ಕಾವ್ಯದಲ್ಲೂ ಸಿದ್ಧನಾಗಿ ಯೋಗದಲ್ಲೂ ಸಿದ್ಧನಾಗಿ ಪ್ರಸಿದ್ಧಿಗೆ ಬಂದ ಮೇಲೆ ರತ್ನಾಕರಸಿದ್ಧನಾದನು.

ತ್ರಿಲೋಕಶತಕ ರತ್ನಾಕರನ ಚೊಚ್ಚಲಕೂಸು

"ವೇಣುಪುರಾಂಕದೊಳ್[3] ಸೃಜಿಸಿದಂ ರತ್ನಾಕರಾರ್ಯಂ ನಿಜೇಕ್ಷಣ ತಾತ್ಪರ್ಯಮಿದೀ ತ್ರಿಲೋಕಶತಕಂ"[4] ಎಂದು ಕವಿಯೇ ಹೇಳಿಕೊಂಡಿರುವನು. ಇಲ್ಲಿಯ ರತ್ನಾಕರ ಇನ್ನೂ ಯೋಗಿಯಾಗಿಲ್ಲ. ವಿದ್ಯಾರ್ಥಿದೆಸೆಯಲ್ಲೇ ಈ ಕೃತಿಯನ್ನು ರಚಿಸಿದಂತಿದೆ. ಇಲ್ಲಿನ ಶೈಲಿ ಸರಳವಾಗಿದ್ದರೂ ಹೇಳಿಕೊಳ್ಳುವಂತೆ ಆಕರ್ಷಣೀಯವಾಗಿಲ್ಲ. ಇಲ್ಲಿನ ರತ್ನಾಕರ ಕಾವ್ಯರಂಗದಲ್ಲಿ ಪಕ್ವಮಾನಸನಾದವನಲ್ಲ.

೧. ಪಂಪ, ಆ. ಪು., XVI-೬೩-೭೨

೨. ಶ್ರೀ ಆರ್. ಪಿ. ಕುಲಕರ್ಣಿ, ಬಿ. ಎ., ಎಲ್ಎಲ್. ಬಿ., ಬಿ. ಟಿ. ಅಥವ ಇವರ 'ಸಾಧನ ವಿಚಾರ, ರತ್ನಾಕರನ ಆತ್ಮಸಿದ್ಧಿ,' ಪ್ರದೀಪ ಮಾಸಿಕದಲ್ಲಿ ಪುಟ ೪೧ "ಭರತೇಶವೈಭವವನ್ನು ಬರೆದು ಪ್ರಸಿದ್ಧಿ ಪಡೆದ ರತ್ನಾಕರ ಸಿದ್ಧನೂ ಮತ್ತು ಶತಕತ್ರಯಗಳನ್ನು ರಚಿಸಿದ ಕವಿಯೂ ಬೇರೆಬೇರೆಯಿರಬಹುದೆಂದು ಊಹಿಸಲವಕಾಶವಿದೆ. ಇರಲಿ, ಪ್ರಸ್ತುತ ಲೇಖದ ಉದ್ದೇಶವು ರತ್ನಾಕರ ಸಿದ್ಧನ ಜೀವನಚರಿತ್ರೆಯಾಗಿರದೆ ಆತನ ಆತ್ಮಸಿದ್ಧಿಯ ವಿಷಯವಾಗಿರುವುದು."

೩. ವೇಣುಪುರವೆಂದರೆ ಈಗಿನ ಮೂಡುಬಿದರೆ.

೪. ತ್ರಿ. ಶ. ೧೨೮.

ತೆರಪಾದ ಶಾಸ್ತ್ರದೊಳ್ಮ | ನ್ನರುಪಿದ ಲೋಕ ಸ್ವರೂಪಮಂ ನಾನೀಗಳ್ ||
ಕಿರಿದರೊಳೆ ಸೂಚಿಸುವೆನದ | ನರಿಯಲ್ವೇಕೆಂದು ಮಂದಮತಿಗಳಲ್ಪ ಬಲರ್ || ೨ ||

ಮೂಢರಿಗಾಗಿ (ಮಂದಮತಿಗಳಿಗಾಗಿ) ರತ್ನಾಕರಾರ್ಯ ಇದನ್ನು ಬರೆದಿರುವನಂತೆ! ವಾಚಕ ವೃಂದವನ್ನು ಮಂದಮತಿಗಳೆಂದು ಕರೆದಿರುವುದನ್ನು ನೋಡಿದರೆ ರತ್ನಾಕರ ಲೋಕಾನು ಭವವನ್ನು ಪಡೆಯುವುದಕ್ಕೆ ಮೊದಲೇ ಅಂದರೆ ಪದವೀಧರಾವಸ್ಥೆಯ (Graduation) ಹೊಸದರಲ್ಲೇ ಈ ಕೃತಿಯನ್ನು ರಚಿಸಿದಂತೆ ಕಾಣುವುದು. ಉಳಿದ ಕೃತಿಗಳಲ್ಲಿ ಈ ಕವಿ ಅಪ್ಪಿತಪ್ಪಿಯಾದರು ವಾಚಕವೃಂದವನ್ನು ಅನಾವಶ್ಯಕವಾಗಿ ಮಂದಮತಿಗಳೆಂದು ಒಗರು ತುಂಬಿದ ನುಡಿಯಿಂದ ಎಲ್ಲೂ ಕರೆದಿಲ್ಲ.

ಕೇಳಿರೊ ಭವ್ಯರು ನಿಮಗೊಂದು ಸುಕಥೆಯ | ಹೇಳುವೆನತಿಮೃದುವಾಗಿ ||
ಕೇಳಿದಿರಾದರೆ ನಿಮಗಾತ್ಮಸುಖವಿಂದು | ನಾಳೆ ನಾಡಿದಿನೊಳಗಹುದು[1] ||

ಭರತೇಶವೈಭವವನ್ನು ಬರೆಯುವಾಗ ರತ್ನಾಕರನ ಹೃದಯ ಹದಗೊಂಡಿತ್ತು. ಆತನ ಕಣ್ಣಿಗೆ ಶ್ರಾವಕವೃಂದ ಭವ್ಯಾತ್ಮರಾಗಿ ಕಂಡುಬಂದರು. ಆದರೆ ತ್ರಿಲೋಕಶತಕವನ್ನು ತೆರೆಯುತ್ತಿದ್ದಂತೆ ನಾವು ಮಂದಮತಿಗಳಾಗಬೇಕಾಗುವುದಲ್ಲ! ಭರತೇಶವೈಭವವನ್ನು ಮುಟ್ಟುತ್ತಿದ್ದಂತೆ ಭವ್ಯರಾಗುವೆವು! ನಾಲಗೆ ಕುಲವನ್ನೂ ಹೇಳಬಲ್ಲದು ಅಂತೆ ವಯಸ್ಸನ್ನೂ ಹೇಳಬಲ್ಲದು.

ಕ್ಷತ್ರಿಯ ವಂಶಜನೆಂದು ಕರ್ಣಾಟ ಸು | ಕ್ಷೇತ್ರನೆಂದಣ್ಣಗಳೆಂದು ||
ಧಾತ್ರಿ ನುಡಿವುದವು ನನ್ನಸೊಮ್ಮಲ್ಲೆನ್ನ | ಗಾತ್ರದಸೊಮ್ಮೆಂಬೆ ನಾನು[2] || ೧೦೪ ||
ಸಿದ್ಧಪದಕೆ ಸೋತೆನಾಗಿ ರತ್ನಾಕರ | ಸಿದ್ಧನೆಂದೆನಲೊಲ್ವೆನೊಮ್ಮೆ ||
ಶುದ್ಧನಿಶ್ಚಯದಲ್ಲಿ ನಿಚ್ಚ ನಿರಂಜನ | ಸಿದ್ಧನೆಂದಾನಿರುತಿಹೆನು[3] || ೧೦೯ ||

ಭರತೇಶ ವೈಭವದ ರತ್ನಾಕರ ಯೋಗದಲ್ಲೂ 'ಸಿದ್ಧ'ನಾಗಿರುವನು, ಅಂತೆ ಕಾವ್ಯದಲ್ಲೂ 'ಸಿದ್ಧ'ನೆನಿಸಿರುವನು! ತ್ರಿಲೋಕ ಶತಕದ ರತ್ನಾಕರ ತನ್ನನ್ನು ತಾನೇ ಆರ್ಯನೆಂದುಕೊಂಡು ವಾಚಕರನ್ನು ಮಾತ್ರ ಮಂದಮತಿಗಳೆಂದು ನಿರ್ಧರಿಸಿಬಿಟ್ಟಿರುವನು. ಈ ರತ್ನಾಕರಾರ್ಯ ಇನ್ನೂ ಸಿದ್ಧನಾಗಿಲ್ಲ; ಯಾವುದರಲ್ಲೂ ಸಿದ್ಧನಾಗಿಲ್ಲ; ಆದರೆ ಪ್ರಸಿದ್ಧಿಗೆ ಬರಬೇಕೆಂಬ ಆತುರವೇನೋ ತುಂಬಿದೆ. ಸುಖದುಃಖದ ಕೊಲಿಮೆಯಲ್ಲಿ ಈತನ ಚೇತನ ಪುಟಗೊಳ್ಳಬೇಕು; ಈತನ ಸಂಸ್ಕಾರ ಪರಿಷ್ಕಾರಗೊಳ್ಳಬೇಕು. ಅನಂತರ ಈತನ ವಾಣಿಯೇ ದಿವ್ಯಧ್ವನಿಯ ನಾದಮಾಧುರ್ಯವನ್ನು ಅನುಕರಿಸೀತು. ಆಗ 'ಜಿನ ವಾಣಿ'ಯೇ ಕವಿವಾಣಿಯಾಗಿಳಿದು ಬಂದೀತು !

ತ್ರಿಲೋಕಶತಕ ರತ್ನಾಕರನ ಕೃತಿಗಳಲ್ಲೆಲ್ಲ ನೀರಸವಾದುದು. ಸಿದ್ಧಾಂತವನ್ನು ವಿವರಿಸುವಾಗ ನೀರಸವಾಗುವುದು ಅನಿವಾರ್ಯವೆಂದು ಕೆಲವು ವಿದ್ವಾಂಸರು ಅಭಿಪ್ರಾಯ ಪಡುವರು. ಈ ಮಾತು ಭರತೇಶವೈಭವದ ರತ್ನಾಕರ ಸಿದ್ಧನಿಗೆ ಸುತರಾಂ ಅನ್ವಯಿಸದು. ರತ್ನಾಕರಸಿದ್ಧ ಏನು ಹೇಳಿದರೂ ಕಾವ್ಯಮಯವಾಗೇ ಹೇಳುವನು. ಎಂಥ ಕ್ಲಿಷ್ಟ ಸಮಸ್ಯೆಯಾದರೂ ವಿರಸಕ್ಕೆ ಬಿಡದೆ ರತ್ನಾಕರನ ಭರತೇಶ ಸರಸದಿಂದಲೇ ಬಗೆಹರಿಸುವಂತೆ ರತ್ನಾಕರನೂ ಕೂಡ ಎಂಥ

೧. ಭ. ವೈ.   ೨. ೧ನೇ ಸಂ. ಪ. ೧೧.   ೩. ಭ. ವೈ. ೮೦ನೇ ಸಂ.

ಸಂದರ್ಭವನ್ನಾದರೂ ರಸವತ್ತಾಗಿ ರಮಣೀಯವಾಗಿ ಬಣ್ಣಿಸಿ ಅದರಲ್ಲಿ ಬೆಡಗು ಬಿನ್ನಾಣವನ್ನು ತುಂಬುವಂಥ ಅನುಪಮ ಕಲಾಕುಶಲ! 'ಸಿದ್ಧಾಂತವಾಗಲಿ ಅಧ್ಯಾತ್ಮವಾಗಲಿ ರತ್ನಾಕರನ ಕೈಸೋಕಿದಾಕ್ಷಣ ಪ್ರತಿಭಾಪೀಠವನ್ನೇರಿ ಕಲ್ಪನಾಕಿರೀಟವನ್ನು ಧರಿಸಿ ಕಂಗೊಳಿಸದಿರದು![1]' ಈ ಹೇಳಿಕೆ ಭರತೇಶ ವೈಭವವನ್ನು ಕುರಿತುದಾದರೂ ತಕ್ಕ ಮಟ್ಟಿಗೆ ರತ್ನಾಕರ ಶತಕಕ್ಕೂ ಬಹುಮಟ್ಟಿಗೆ ಅಪರಾಜಿತ ಶತಕಕ್ಕೂ ಅನ್ವಯಿಸದಿರದು. ರತ್ನಾಕರಶತಕ ಪ್ರವುಢವಾಗಿದ್ದರೂ ಅಲ್ಲಲ್ಲಿ ಮನವನ್ನು ಸೆರೆಹಿಡಿವಂಥ ರಸಮಯವಾದ ಶ್ಲೋಕಗಳಿಗೆ ಅದರಲ್ಲಿ ಕೊರತೆಯೇನಿಲ್ಲ. ಒಮ್ಮೆ ಅವನ್ನು ಶ್ರದ್ಧೆಯಿಂದ ಓದಿದರೆ ಮತ್ತೆ ಮರೆಯಬೇಕೆಂದರೂ ಸಾಧ್ಯವಾಗದಷ್ಟು ನಮ್ಮ ಮನವನ್ನು ಸೆರೆಹಿಡಿದುಬಿಡುವುವು. ಭರತೇಶ ವೈಭವದಂತೆ ನಿರಂತರವಾದ ರಸಪ್ರವಾಹ ಅಲ್ಲಿಲ್ಲದಿದ್ದರೂ ಯಾವುದೋ ಒಂದು ಅಪೂರ್ವವಾದ ಶಕ್ತಿ ಅದರಲ್ಲಿದೆ. ರತ್ನಾಕರ ಶತಕದ ಕೊನೆಕೊನೆ ಭಾಗವಂತೂ ಭಕ್ತಿರಸದಿಂದ ತುಂಬಿ ತುಳುಕಾಡಿದೆ.[2] ಅಪರಾಜಿತ ಶತಕವಂತು ಪೂರ್ಣವಾಗಿ ಕಾವ್ಯವಾಗಿ ಮೂಡಿ ಬೆಳಗುತ್ತಿದೆ; ಮೊದಲಿಂದ ಕೊನೆತನಕ ಕಣ್ಣಲ್ಲಿ ಕಣ್ಣಿಟ್ಟು ಹುಡುಕಿದರೂ ಈ ಕೃತಿಯಲ್ಲಿ ಕಾಂತಿಹೀನವಾದ ಶ್ಲೋಕ ಸಿಗುವುದೇ ದುರ್ಲಭ. ಆದರೆ ತ್ರಿಲೋಕ ಶತಕದಲ್ಲಿ ಓದುಗನ ಹೃದಯವನ್ನು ಮಿಡಿವಂಥ ಹಾಗೂ ಮನವನ್ನು ಸೆರೆಹಿಡಿವಂಥ ಕಂದಗಳು ಒಂದೆರಡಾದರೂ ಇವೆಯೆ?

ಮೂಗರು ಕಂಡ ಕನಸಿನಂಥ ಹಂಸತತ್ವವನ್ನೂ ರತ್ನಾಕರಮಹಾಕವಿ ರಸ ಕಲೆಯಾಗಿ ಭರತೇಶ ವೈಭವದ ಸಡಗರಕ್ಕೆ ಸಂಭ್ರಮವಾಗಿ ನಿರೂಪಿಸಿ, ತ್ರಿಲೋಕಶತಕದಲ್ಲೇಕೆ ಮಂಕಾಗಿ ಹೋಗಿರುವನು? ತ್ರಿಲೋಕಸ್ವರೂಪ ರಸವಸ್ತುವಾಗಲಾರದೆ? ಬಣ್ಣಿಸಬಲ್ಲ ಪ್ರತಿಭಾಶಾಲಿಗೆ ತ್ರಿಲೋಕದಲ್ಲೇನು ಕೊರತೆ? ಈ ವಸ್ತುವಿಗೆ (ತ್ರಿಲೋಕ ಸ್ವರೂಪ) ಪ್ರತಿಭಾಸಿದ್ಧರಸದಲ್ಲಿ ಒಪ್ಪವಿಟ್ಟು ಕಲ್ಪನಾ ಕರದಿಂದ ತಿದ್ದಬಲ್ಲ ವಿಶ್ವಕವಿ ಇನ್ನೂ ಹುಟ್ಟಿಬಂದಿಲ್ಲ; ಖಂಡಿತ ಅಂಥ ಮಹಾಚೇತನವೊಂದು ಬರಬೇಕಾಗಿದೆ. ಕೇವಲ ಶಾಸ್ತ್ರಕ್ಕಾಗೆ 'ತ್ರಿಲೋಕವನ್ನು' ವರದಿಯಾ ಗೊಪ್ಪಿಸಿ ಎಂತೆಂಥ ಮಹಾಕವಿಗಳೋ ಕೈತೊಳೆದುಕೊಂಡರು!

ಭರತೇಶವೈಭವದಲ್ಲಿ ಸಂಗೀತಲಹರಿ ಸಾಕಾರಗೊಂಡು ಕಲಕಲರವಗೈದು ಪ್ರವಹಿಸಿದೆ[3]. ನಾಟ್ಯದ ನಾನಾ ಭಂಗಿಗಳೆಲ್ಲ ಈ ಶಬ್ದ ಶಿಲ್ಪಿಯ ರಸಯೋಗದಂಡದಿದಿರು ಮರುಳಾಗಿ ಮೈತಳೆದು ರಾರಾಜಿಸಿವೆ![4]. ಎಲ್ಲರ ಬಳಿಯೂ ತಾನಿದ್ದು ಎಲ್ಲರನ್ನೂ ತನ್ನಂಕಿತದಲ್ಲಿಟ್ಟು ಕೊಂಡು ತೊಂಭತ್ತಾರು ಸಾವಿರ ಸುವಾಸಿನಿಯರಿಗೆ ಮನೋವಲ್ಲಭನಾಗಿ ಮೆರೆದಾಡಿದ ಭರತೇಶನ ರಾಸಲೀಲಾ ಪ್ರಸಂಗವಂತೂ ಕವಿಗೆ ಕಲ್ಪನೆಯ ಕೋಡು ಮೂಡಿದಾಗ ಏನೇನದ್ಭುತವಾದೀತು ಎಂಬುದಕ್ಕೆ ಜೀವಂತ ಸಾಕ್ಷಿಯಾಗಿದೆ[5]. ಬ್ರಹ್ಮಕಲೆಯೂ ಕೂಡ ವೀತರಾಗರಸಿಕ

೧. ಜಿ. ಬ್ರಹ್ಮಪ್ಪ 'ರತ್ನಾಕರ ಸಿದ್ಧನ ಹಂಸಕಲೆ' ಪ್ರ. ಕ. ಸಂಪು. ೪೧, ಸಂಚಿ. ೪, ಪು. ೯೨-೯೩.
೨. ರತ್ನಾ. ಶ. ಪ. ೧೨೧-೧೨೭ ನೋಡುವುದು.
೩. ಭ. ವೈ. ೫ನೇ, ಸಂ. ಪ ೫೭-೭೪ ಮತ್ತು ೧೧ನೇ ಸಂ. ಪ. ೩-೩೭.
೪. ಭ. ವೈ. ೧೨ನೇ ಸಂ. ಮತ್ತು ೧೩ನೇ ಸಂ. ನೋಡುವುದು.
೫. ಭ. ವೈ. ೧೪ನೇ ಸಂ. ಪ. ೧೪೪-೧೫೭ ಮತ್ತು ೧೫ನೇ ಸಂ. ಪ. ೨-೨೭ ನೋಡಬೇಕು.

ನಾದ ರತ್ನಾಕರನಿದಿರು ಮರುಮಾತಾಡದೆ ಕರೆದತ್ತ ರಸಕಲೆಯಾಗಿಳಿದು ಬಂದು ಪಂಚವಿಜಯಗಳಲ್ಲೂ ಮಿಂಚು ಚೆಲ್ಲಿ ನಲಿದಾಡಿದೆ. ಹಂಸಕಲೆಯನ್ನೂ ಕನ್ನಡ ಕಾವ್ಯಾವನಿಗೆ ತಂದ ಈ ಕವಿಭಗೀರಥನಿಗೆ 'ತ್ರಿಲೋಕ' ರಸವಸ್ತುವಾಗಲಾರದೆ? ಈ ನಾನಾ ಪ್ರಶ್ನೆಗಳಿಗೆ ಒಂದೇ ಉತ್ತರವೆಂದರೆ ತ್ರಿಲೋಕಶತಕವನ್ನು ಬರೆದಾಗ ರತ್ನಾಕರನಿನ್ನೂ ಕಾವ್ಯದಲ್ಲಿಸಿದ್ಧನಾಗಿರಲಿಲ್ಲ; ಯೋಗದಲ್ಲಂತೂ ಪ್ರಬುದ್ಧನಾಗಿರಲಿಲ್ಲ.

ಒಂದು ಪಕ್ಷ ರತ್ನಾಕರ 'ಸಿದ್ಧ'ನಾದನಂತರ ತ್ರಿಲೋಕಶತಕಕ್ಕೆ ಕೈಹಾಕಿದ್ದರೆ ನರಕದ ನರಳಾಟ ಹೃದಯ ವಿದ್ರಾವಕವಾಗುವಂತೆ ರೂಪಗೊಂಡು ಓದುಗರ ಕಣ್ಣಲ್ಲಿ ಕಂಬನಿ ಹನಿಸದೆ ಬಿಡುತ್ತಿರಲಿಲ್ಲ. ನಾನಾ ಸಗ್ಗದ ಕಲ್ಪವೃಕ್ಷಗಳನ್ನೂ ಕಾಮಧೇನುಗಳನ್ನೂ ಚಿಂತಾಮಣಿಗಳೊಡನೆ ಈ ಕವಿಬ್ರಹ್ಮ ಕರೆತಂದು ಕನ್ನಡ ನಂದನವನದಲ್ಲಿ ಪ್ರದರ್ಶಿಸದೆ ಬಿಡುತ್ತಿದ್ದನೆ? ಅಕೃತ್ರಿಮ ಜಿನಾಲಯ[೧]ಗಳನ್ನಾದರೂ ಕಣ್ಣಿಗೆ ಕಟ್ಟುವಂತೆ ಕಡೆದು ಕವಿತಾದೇಗುಲವನ್ನು ಪರಿಪೂರ್ಣಗೊಳಿಸದೆ ಬಿಡುತ್ತಿರಲಿಲ್ಲ; ಸಿದ್ಧಸ್ವರೂಪವನ್ನೂ ಬ್ರಹ್ಮಕಲೆಯ ಕವಚವನ್ನೂ ತೊಡಿಸಿ ಕುಣಿಸಿ ಬಿಡುತ್ತಿದ್ದನು ರತ್ನಾಕರ ಯೋಗಿಯಾಗಿದ್ದರೆ! ಭರತೇಶವೈಭವದಲ್ಲಿ ಚಕ್ರೇಶ ಸಿದ್ಧನಾಗಿ ದೇಹತ್ರಯವನ್ನು ತೊರೆದು ನಿರಾಕಾರನಾದ ಮೇಲೂ, ರತ್ನಾಕರನ ಕವಿಸಮಯದ ಬಲೆಗೆ ಸಿಕ್ಕಿ ಅನಿವಾರ್ಯವಾಗಿ ಶೃಂಗಾರಸಿದ್ಧನಾಗಿ ಮುಕ್ತ್ಯಂಗನೆಯೊಡನೆ ರಮಿಸಬೇಕಾಗುವುದು![೨] ಈ ಅಪೂರ್ವ ಸನ್ನಿವೇಶದಲ್ಲಿ ರತ್ನಾಕರ, ಬ್ರಹ್ಮಕ್ರೀಡೆಯನ್ನು ಪ್ರತಿಮಾವಿಧಾನದಲ್ಲಿ ನಿರೂಪಿಸಿ ಬಟ್ಟಬಯಲಲ್ಲೂ ಬಣ್ಣಬಣ್ಣದ ಚಿತ್ರಗಳನ್ನು ಬಿಡಿಸಿ ಕನ್ನಡ ಕಬ್ಬದ ಸಿದ್ಧಲೋಕವನ್ನು ಸೃಷ್ಟಿಸಿರುವನು !

ತ್ರಿಲೋಕಶತಕ ರತ್ನಾಕರಾರ್ಯ ಸಿದ್ಧನಾಗುವ ತನಕ ಕಾಯಲಾರದೆ ಅವಸರವಸರವಾಗಿ ಆತನ ಗಮನವನ್ನು ಸೆಳೆದುದರಿಂದ ಇಷ್ಟೊಂದು ನೀರಸವಾಗಬೇಕಾಯಿತು. ಇಲ್ಲದಿದ್ದರೆ ತ್ರಿಲೋಕಶತಕವೂ ಒಂದು ಅಪೂರ್ವ ಕೃತಿಯಾಗುತ್ತಿತ್ತೋ ಏನೋ ! ಅಂತು ರತ್ನಾಕರನ ಪ್ರತಿಭಾನೇತ್ರ ಅರಳುವುದಕ್ಕೆ ಮೊದಲೇ ಕಲ್ಪನಾಪಕ್ಷ ಬಲಿಯುವುದಕ್ಕೆ ಮುನ್ನವೇ ಈ ತ್ರಿಲೋಕಶತಕ ಜನ್ಮ ತಳೆಯಿತು. **ರತ್ನಾಕರನ ಕವಿತಾಕಲ್ಪ ವೃಕ್ಷದ ಮೊದಲ ಬೀಡಿನ ಹೀಚುಗಾಯಿ ಈ ತ್ರಿಲೋಕಶತಕ!**

ರತ್ನಾಕರನ ಪ್ರತಿಭಾ ಕುಸುಮರಥದಲ್ಲಿ ವಿರಾಜಮಾನವಾಗಿ ರಾರಾಜಿಸಿದ ಅಪೂರ್ವತತ್ವರತ್ನವೆಂದರೆ ಭೇದವಿಜ್ಞಾನವೇ! ಈ ಪ್ರತಿಭಾರಥವನ್ನು ನಿರಂಜನಸಿದ್ಧ ಮುಂದಿನಿಂದ ಎಳೆದರೆ ಚಿದಂಬರಪುರುಷ ಹಿಂದಿನಿಂದ ನೂಕಿ ಕೊಡುವನು; ಅಪರಾಜಿತ ಶ್ರೀಮಂದರರು ಆಶೀರ್ವದಿಸುವರು. ರತ್ನಾಕರನ ಕಾವ್ಯರಥ ಹೊರಟಿತೆಂದರೆ ಭೇದವಿಜ್ಞಾನವನ್ನು ಬಿತ್ತುವುದಕ್ಕಾಗೇ ಹೊರಡುವುದು. ನಿರಂಜನಸಿದ್ಧಾದಿಗಳನ್ನು ಒಮ್ಮೊಮ್ಮೆ ರತ್ನಾಕರ ಮರೆತರೂ ಮರೆತಾನು,

೧. ಯಾರೂ ನಿರ್ಮಿಸದೆ ಸಹಜವಾಗಿ ರೂಪಗೊಂಡಿರುವ ಜಿನಾಲಯಗಳು ನಂದೀಶ್ವರದಲ್ಲೂ ರುಚಕ ಪರ್ವತದಲ್ಲೂ ಭವನಲೋಕ ಹಾಗೂ ಸ್ವರ್ಗಗಳಲ್ಲೂ ಇವೆಯೆಂದು ಜೈನರ ನಂಬಿಕೆ.

೨. ಭ. ವೈ. ೭೮ನೇ ಸಂ. ಪ. ೧೧೧-೧೫೬.

ಆದರೆ ಭೇದವಿಜ್ಞಾನವನ್ನು ಖಂಡಿತ ಮರೆಯಲಾರ.[೧] ಭರತೇಶವೈಭವವೆಂಬ ತ್ರಿಭುವನ ಚೂಡಮಣಿ ತಿಲಕಕ್ಕೆ ಭೇದವಿಜ್ಞಾನವೇ ಬುನಾದಿಯಾಗಿ ನೆಲೆಗೊಂಡು ಆ ಬೃಹತ್ ಕಾವ್ಯ ದೇಗುಲವನ್ನು ಹೊತ್ತು ನಿಂತಿದೆ! ಅದೇ ಭೇದವಿಜ್ಞಾನ ಕ್ರಮೇಣ ರತ್ನಾಕರಶತಕಕ್ಕೂ ಹಬ್ಬಿ ಆಮೇಲೆ ಅಪರಾಜಿತೇಶ್ವರ ಶತಕವನ್ನೂ ಬಿಡದೆ ಆವರಿಸಿಕೊಂಡಿದೆ. ಆದರೆ ತ್ರಿಲೋಕಶತಕದಲ್ಲಿ ಭೇದವಿಜ್ಞಾನದ ಕುರುಹನ್ನಾದರೂ ಕಾಣಲಾರೆವು. ಶಾಸ್ತ್ರತಾತ್ಪರ್ಯ ವರ್ಣನೆಯಲ್ಲಿ ಈ ವಿಚಾರವನ್ನು ತರಲು ಅವಕಾಶವಿತ್ತು. ಆದರೆ ಈ ಅಪೂರ್ವ ತತ್ವರತ್ನ ರತ್ನಾಕರನ ಮೇಲೆ ಕೃಪಾಕಟಾಕ್ಷವನ್ನು ಬೀರುವುದಕ್ಕೆ ಮೊದಲೇ ತ್ರಿಲೋಕಶತಕ ಜನ್ಮಧಾರಣೆ ಮಾಡಿದುದರಿಂದ ಭೇದವಿಜ್ಞಾನದ ಅಪ್ಪುಗೆಯ ಆನಂದವನ್ನು ಸವಿಯಲಾಗಿಲ್ಲ. ಈಗ ನಮಗೆ ರತ್ನಾಕರನವೆಂದು ದೊರೆತಿರುವ ಕೃತಿಗಳಲ್ಲಿ ಮೊಟ್ಟಮೊದಲು ಹುಟ್ಟಿದ ಚೊಚ್ಚಲ ಕೂಸು ಈ ತ್ರಿಲೋಕಶತಕ.

ರತ್ನಾಕರನ ಕೃತಿಗಳು ಮತ್ತು ಕಾಲ

"....ದೇವಚಂದ್ರನ ಕಥೆಯಲ್ಲೂ ತನ್ನ ಭರತೇಶವೈಭವವನ್ನು ಪ್ರಭಾವನೆ ಮಾಡಿಸದ ಕಾರಣ ರತ್ನಾಕರ ಸಿಟ್ಟುಗೊಂಡು ಜೈನಧರ್ಮವನ್ನು ನೀಗಿ ಕೆಲಕಾಲ ವೀರಶೈವನಾಗಿದ್ದು ಅನಂತರ ಜೈನಧರ್ಮಕ್ಕೆ ಮರಳಿದ ಮೇಲೆ ತಾನೇ ಆ ಮೂರು ಶತಕಗಳನ್ನು ರಚಿಸಿದನೆಂದು ಸ್ಪಷ್ಟವಿರುವುದರಿಂದ, ಅಲ್ಲಿ ಹೇಳಿದ ಕ್ರಮದ ಪ್ರಕಾರ ಆ ಮೂರರಲ್ಲಿ ಕೊನೆಯದಾದ ತ್ರಿಲೋಕಶತಕವನ್ನು ರಚಿಸಿದ ಕ್ರಿ.ಶ. ೧೫೫೭-೫೮[೨]ಕ್ಕೆ ತಕ್ಕಷ್ಟು ಹಿಂದೆಯೆ ಆತನು ಭರತೇಶವೈಭವವನ್ನು ರಚಿಸಿರಬೇಕೆಂದು ದೃಢವಾಗುವುದು. ಅದು ಕಾರಣ ರತ್ನಾಕರನು ತನಗೆ ಶೃಂಗಾರಕವಿಯೆಂದು ಬಿರುದಿತ್ತ ಆ ಇಮ್ಮಡಿ ವೀರಭೈರವರಸನ ಆಳ್ವಿಕೆಯಲ್ಲಿ (ಕ್ರಿ.ಶ. ೧೪೯೦-೧೫೩೫) ಕ್ರಿ.ಶ. ೧೫೩೦-೧೫೩೫ರೊಳಗೆ ಭರತೇಶವೈಭವವನ್ನೂ, ಸುಮಾರು ೧೫೫೦-೬೦ರೊಳಗೆ ಆ ಮೂರು ಶತಕಗಳನ್ನೂ ಬರೆದು ಸು. ೧೫೬೦-೭೦ರೊಳಗೆ ಕಾಲವಾಗಿರಬಹುದು[೩]" ಎಂದು ರಾಷ್ಟ್ರಕವಿ ಶ್ರೀ ಗೋವಿಂದಪೈಗಳು ರತ್ನಾಕರನ ಜಾತಕದ ರೂಪರೇಷೆಯನ್ನು ಕೊಟ್ಟಿರುವರು. ದೇವಚಂದ್ರ ತನ್ನ ರಾಜಾವಳೀ ಕಥೆಯಲ್ಲಿ ಹೇಳಿರುವುದನ್ನೆಲ್ಲ ಅಕ್ಷರಶಃ ಒಪ್ಪಿಕೊಂಡು ಶ್ರೀ ಗೋವಿಂದಪೈಗಳು ಅದಕ್ಕೆ ಸರಿಹೊಂದುವಂತೆ ಸಂಶೋಧನೆ

೧. ರತ್ನಾಕರಶತಕದಲ್ಲಿ ನಿರಂಜನಸಿದ್ಧಾದಿಗಳು ಇಲ್ಲದಿದ್ದರೂ ಅಪೂರ್ವ ತತ್ವರತ್ನವಾದ ಭೇದ ವಿಜ್ಞಾನ ಮಾತ್ರ ಸೆಲೆಯೊಡೆದು ಚಿಮ್ಮಿಬಂದಿದೆ.—ರತ್ನಾ. ಶ., ಪ. ೯೦, ೯೧, ೯೨, ೯೬ ನೋಡುವುದು.

೨. ಮಣಿಶೈಲಂ ಗತಿಯಿಂದು ಶಾಲಿ ಶಕಕಾಲಂ ಸಂಧಿರಲ್ತಾಳವಾಂ |
ಗಣದೊಳ್ಪೇಣು ಪುರಾಂಕದೊಳ್ ಸೃಜಿಸಿದಂ ರತ್ನಾಕರಾರ್ಯಂ ನಿಜೇ ‖ (ಮೂಡುಬಿದರೆ)
ಕ್ಷಣ ತಾತ್ಪರ್ಯ ಮಿದೀತ್ರಿಲೋಕಶತಕಂ ತಾನೀ ಪಗಲ್ತೊಟ್ಟು ಮುಂ |
ದಣ ವೀರಾಂಗದಯೋಗಿ ಮುಟ್ಟುತಿಳೆಯೊಳ್ ಸಲ್ಲೀಲೆಯಿಂದೊಪ್ಪುಗುಂ ‖—ತ್ರಿ. ಶ. ೧೨೮.

೩. 'ರತ್ನಾಕರ ಸಿದ್ಧನ ಕಾಲನಿರ್ಣಯ', ವಿವೇಕಾಭ್ಯುದಯ, ಮಂಡಲ ೧೯, ಕಿರಣ ೧೧, ಪು. ೩೨೮-೩೩೫.

ಯನ್ನು ನಡೆಸಿರುವರೇ ವಿನಃ ರತ್ನಾಕರನ ಕೃತಿಗಳಲ್ಲಿ ಕಾಣುವ ಪ್ರತಿಭಾಗಂಗಾಪ್ರವಾಹವನ್ನಾಗಲಿ, ಕಲ್ಪನಾಂತರಂಗವನ್ನಾಗಲಿ, ಇಲ್ಲವೇ ಸಾಂಸ್ಕೃತಿಕ ಹಾಗೂ ಕಲಾತ್ಮಕ ವಿಕಾಸವನ್ನಾಗಲಿ ಗಮನಿಸಿ ಈ ಮಹನೀಯರು ಸಂಶೋಧನೆಯನ್ನು ನಡೆಸಿಲ್ಲವೆಂದೇ ಹೇಳಬಹುದು. ರತ್ನಾಕರನ ಮಾನಸಿಕ ಹಾಗೂ ಆಧ್ಯಾತ್ಮಿಕ ಬೆಳವಣಿಗೆಯನ್ನು ಅವನ ಕೃತಿಗಳಲ್ಲಿ ಇಂದಿಗೂ ನಾವು ಗುರುತಿಸಬಹುದು. ಈ ದಿಶೆಯಲ್ಲಿ ನಾವು ಪರಿಶೋಧನೆ ನಡೆಸಿದ್ದೇ ಆದರೆ ತ್ರಿಲೋಕಶತಕ ಚೊಚ್ಚಲಕೂಸಾಗದಿರದು. ಜೊತೆಗೆ ಉಳಿದ ಕೃತಿಗಳ ಕಾಲವನ್ನೂ ಸುಮಾರಾಗಿ ಕಂಡುಹಿಡಿಯಬಹುದು.

“ಶ್ರೀಮದ್ದೇವೇಂದ್ರಕೀರ್ತಿ ಯೋಗೀಶ್ವರ ಪದಾಂಭೋಜ ಭೃಂಗಾಯಮಾನ ಶೃಂಗಾರ ಕವಿ ಹಂಸರಾಜ ವಿರಚಿತಮಪ್ಪ ತ್ರಿಲೋಕಶತಕಂ ಸಮಾಪ್ತಂ” ಎಂಬ ಗದ್ಯ ಶತಕತ್ರಯದ ಒಂದೊಂದು ಶತಕದ ಕೊನೆಯಲ್ಲೂ ಕಂಡುಬರುವುದು. ತ್ರಿಲೋಕ ಶತಕವನ್ನು ರಚಿಸುವ ಕಾಲಕ್ಕಾಗಲೇ ರತ್ನಾಕರ ಶೃಂಗಾರಕವಿ ಹಂಸರಾಜನಾಗಿದ್ದನೆ? ದೇವೇಂದ್ರಕೀರ್ತಿಗಳ ಶಿಷ್ಯನಾಗಿದ್ದಿರಬಹುದೆ? ಭರತೇಶವೈಭವದ ರತ್ನಾಕರಸಿದ್ಧ ಚಾರುಕೀರ್ತಿಗಳ ಶಿಷ್ಯ ತಾನೆ?[1] ದೇವೇಂದ್ರಕೀರ್ತಿಗಳನ್ನು ಇವನು ಗುರುವಾಗಿ ಸ್ವೀಕರಿಸಿದ ಮೇಲೆ ತ್ರಿಲೋಕಶತಕವನ್ನು ರಚಿಸಿರಬಹುದೆ? ಎಂಬ ಪ್ರಶ್ನೆಗಳಿಗೆಲ್ಲ ಈಗ ಉತ್ತರ ಕೊಡಬೇಕಾಗುವುದು. ‘ಶ್ರೀಮದ್ದೇವೇಂದ್ರ.... ತ್ರಿಲೋಕಶತಕಂ ಸಮಾಪ್ತಂ’ ಈ ವಾಕ್ಯವನ್ನು ತ್ರಿಲೋಕಶತಕಕ್ಕಾಗೇ ರಚಿಸಿದ್ದಲ್ಲ. ರತ್ನಾಕರ ಶತಕಕ್ಕೆಂದೇ ರಚಿಸಿದ ಈ ವಾಕ್ಯ ಪ್ರತಿಯೆತ್ತಿದವರ ಕೃಪಾಕಟಾಕ್ಷಕ್ಕೆ ಬಿದ್ದು ಅಪರಾಜಿತಶತಕದ ಅಡಿಗೆ ಹಾರಿ ಬಂದು ಅನಂತರ ತ್ರಿಲೋಕಶತಕದ ಕೊನೆಯ ಭಾಗಕ್ಕೂ ಕುಪ್ಪಳಿಸಿದೆ. ರತ್ನಾಕರ ಶತಕದಲ್ಲಿ ಕವಿ ತನ್ನನ್ನು ‘ಶೃಂಗಾರ ಶ್ರೀಕವಿ ಹಂಸರಾಜ....ರತ್ನಾಕರ’ ಎಂದು ತಾನೇ ಕರೆದುಕೊಂಡಿರುವನು. ಆ ಶತಕದಡಿಯಲ್ಲಿ ಈ ಮಾತನ್ನೇ ಬಳಸಿರುವನು. ತ್ರಿಲೋಕಶತಕದ ಕರ್ತೃ ಕೇವಲ ರತ್ನಾಕರಾರ್ಯನೇ ಹೊರತು ಇನ್ನೂ ಶೃಂಗಾರ ಶ್ರೀಕವಿ ಹಂಸರಾಜನಾಗಿಲ್ಲ. ರತ್ನಾಕರನ ಕಾಲದಲ್ಲೋ ಅನಂತರವೋ ಈತನ ಶತಕಗಳನ್ನೆಲ್ಲ ಒಂದೆಡೆ ಸಂಗ್ರಹಿಸಿರುವರು. ಅಂದು ಮಾಡಿದ ಜೋಡುವಣೆಯ ಕ್ರಮವನ್ನೇ ರಚನಾ ಕ್ರಮವೆಂದು ದೇವಚಂದ್ರ ಭ್ರಮಿಸಿರುವನು. ಅಂದು ಜನಜನಿತವಾಗಿದ್ದ ಕವಿಗಳ ಇತಿಹಾಸವನ್ನು ದೇವಚಂದ್ರ ಸಂಗ್ರಹಿಸಿರುವನೇ ವಿನಃ ಸಂಶೋಧನೆ ನಡೆಸಿಲ್ಲ; ಎಷ್ಟಾದರೂ ಈತ ಸಂಗ್ರಹಕಾರನೇ ಹೊರತು ಸಂಶೋಧಕನಲ್ಲ. ಆಧುನಿಕ ಪರಿಶೋಧಕರೂ ದೇವಚಂದ್ರ, ಹಿಂದೆ ಎಡವಿದ ಕಡೆಯೇ ಎಡವಿದ್ದಾರೆ. ಶ್ರೀ ರಾಷ್ಟ್ರಕವಿ ಗೋವಿಂದ ಪೈಗಳು ರತ್ನಾಕರನ ಕೃತಿಗಳಲ್ಲಿ ಒಂದರಿಂದ ಇನ್ನೊಂದಕ್ಕೆ ರಚನಾಕಾಲದಲ್ಲಿರಬಹುದಾದ ಅಂತರವನ್ನು ಸೂಚಿಸಿರುವುದನ್ನು ಒಪ್ಪಬಹುದಾದರೂ, ತ್ರಿಲೋಕಶತಕವನ್ನು ಕೊನೆಯ ಕೃತಿಯೆಂದು ಭಾವಿಸಿ ಅವರು ಹಿಂದುಹಿಂದಕ್ಕೆ ಹೋಗಿರುವುದನ್ನು ಎಂದಿಗೂ ಒಪ್ಪಲಾಗದು. ತ್ರಿಲೋಕಶತಕವನ್ನೇ ರತ್ನಾಕರನ ಚೊಚ್ಚಲಕೂಸೆಂದು ಖಚಿತಪಡಿಸಿಕೊಂಡು ನಾವು ಮುಂದುಮುಂದಕ್ಕೆ ಹೋದಾಗ ಉಳಿದುದು ತನ್ನಷ್ಟಕ್ಕೆ ತಾನೇ

---

೧. ಭ. ವೈ. ೮ನೇ ಸಂ, ಪ. ೧೧೩-೧೪. (ಶ್ರವಣಬೆಳಗೊಳ ಮತ್ತು ಮೂಡುಬಿದರೆಯ ಜೈನ ಮಠಾಧಿಪತಿಗಳಿಗೆ ಚಾರುಕೀರ್ತಿಗಳೆಂದು ಈಗಲೂ ಕರೆಯುವರು.)

ಸರಿ ಹೋಗುವುದು.

ರತ್ನಾಕರ ತ್ರಿಲೋಕಶತಕವನ್ನು ಕ್ರಿ.ಶ. ೧೫೫೭ರಲ್ಲಿ ರಚಿಸಿದ್ದಾಗಿ ತಾನೇ ಹೇಳಿಕೊಂಡಿರುವನು.[1] ಇದಾದ ಮೇಲೆ ಭರತೇಶವೈಭವ ರಚಿತವಾಗಿದೆ. ಇವೆರಡರ ನಡುವೆ ಹತ್ತಾರು ವರ್ಷಗಳ ಅಂತರವಾದರೂ ಇರಬೇಕು. ರಾಜಾವಳೀ ಕಥೆಯಲ್ಲಿ ರತ್ನಾಕರನ ಪ್ರಣಯಪ್ರಪಂಚವನ್ನು ದೇವಚಂದ್ರ ರೋಮಾಂಚನಕಾರಿಯಾಗಿ ವಿವರಿಸಿರುವನು.[2] ಈ ಪ್ರಣಯಲೀಲೆ ನಡೆದುದು ನಿಜವಾಗಿದ್ದಲ್ಲಿ ತ್ರಿಲೋಕಶತಕ ರಚಿತವಾದ ನಂತರ ಭರತೇಶವೈಭವದ ರಚನಾ ಪ್ರಾರಂಭದಲ್ಲಿ ಈ ಘಟನೆ ನಡೆದಿರಬಹುದು. ಏಕೆಂದರೆ ಈ ಘಟನೆಯೇ ರತ್ನಾಕರಾರ್ಯ, ಸನ್ಯಾಸಿಯಾಗಲು ನಿಮಿತ್ತ ಕಾರಣವಾಗಿರಲಿಕ್ಕೂ ಸಾಕು. ತ್ರಿಲೋಕಶತಕ ರಚಿತವಾದ ನಂತರ ಹಲವಾರು ವರ್ಷ ಕಳೆದ ಮೇಲೆ ಜೀವನದಲ್ಲಿ ಸುಖದುಃಖಗಳ ಹೊಡೆತ ಬಿದ್ದ ನಂತರವೇ ರತ್ನಾಕರ ಆಧ್ಯಾತ್ಮಿಕ ಪ್ರಪಂಚದ ಪರಿಚಯ ಪಡೆದುಕೊಂಡು ಭರತೇಶವೈಭವವನ್ನು ರಚಿಸಿರಬೇಕು.

ಪಂಪ ಕವಿ ಆದಿಪುರಾಣವನ್ನು ಬರೆವಾಗ ನಲ್ವತ್ತರ ಹತ್ತಿರವನ್ನು ಮುಟ್ಟಿದ್ದನು.[3] ಆಧುನಿಕ ಮಹಾಕವಿ ಕುವೆಂಪುರವರು ಕನ್ನಡದಲ್ಲಿ ಪಾರಂಗತರಾಗಿ ಶ್ರೀ ರಾಮಕೃಷ್ಣ ಪರಮಹಂಸರ ಸರ್ವಧರ್ಮ ಸಮನ್ವಯ ದೃಷ್ಟಿಯ ಹಾಗೂ ಉಜ್ವಲವಾದ ಭಕ್ತಿಯ ಪ್ರಭಾವಕ್ಕೆ ಸಿಕ್ಕಿ ಸಂಸ್ಕಾರ ಸಂಪನ್ನರಾಗುತ್ತ ಒಂಭತ್ತು ವರ್ಷ ಏಕಾಂತವಾಸದ ವಲ್ಮೀಕದಲ್ಲಡಗಿ ಕಾವ್ಯಲಕ್ಷ್ಮಿಯನೊಲಿಸಬೇಕಾಯಿತು; ಅನಂತರ ಅವರ ರಸತಪಸ್ಸಿನ ಸಿದ್ಧಿಯ ರೂಪದಲ್ಲಿ ಶ್ರೀರಾಮಾಯಣ ದರ್ಶನ ಸರ್ವಾಂಗಸುಂದರವಾಗಿ ಮೈದೋರಿತು. ಹೀಗಿರುವಾಗ ಭರತೇಶವೈಭವದಂಥ ಮಹಾ ಮೇರುಕೃತಿ ಅವತರಿಸಬೇಕಾದರೆ ರತ್ನಾಕರ ಎಷ್ಟು ತಪವೆಸಗಿರಬೇಕು? ಪ್ರತಿಭೆಯ ಗೂಡಿನಲ್ಲಿ ಕಬ್ಬದ ಮೊಟ್ಟೆಗೆ ಕಲ್ಪನೆಯ ರೆಕ್ಕೆಗಳನ್ನು ಹೊದಿಸಿ ಹತ್ತಾರು ವರ್ಷ ಕಾವೀಯುತ್ತಾ ಕಾದಿರಲೇಬೇಕಲ್ಲವೆ? ಕಾವೆಲ್ಲ ಪೂರೈಸಿದ ಮೇಲೆ ನವಮಾಸ ಕಳೆದ ನಂತರ ಭರತೇಶವೈಭವ ಕಲಾ ವೈಭವದಿಂದ ರಾರಾಜಿಸಿಕೊಂಡು ಅವತರಿಸಿದೆ.[4] ಇದಾದ ನಂತರ ಅನಿರೀಕ್ಷಿತವಾಗಿ ಬಂದೆರಗಿದ ದುರ್ಘಟನೆಗಳಿಂದ ಬೇಸತ್ತು ರತ್ನಾಕರ ವೀರಶೈವನಾಗಿರಬಹುದು. ಕೆಲವು ಸೋಮೇಶ್ವರ ಶತಕದ ಓಲೆಗ್ರಂಥಗಳಲ್ಲಿ ಈ ಬಗ್ಗೆ ಉಲ್ಲೇಖವಿದೆ.

---

೧. ಮಣಿಶೈಲಂ ಗತಿಯಿಂದು ಶಾಲಿ ಶಕಕಾಲಂ ಸಂದಿರಲ್ತ್ಯೌಳವಾಂ |
ಗುಣದೊಳ್ವೇಣುಪುರಾಂಕದೊಳ್ ಸೃಜಿಸಿದಂ ರತ್ನಾಕರಾರ್ಯಂ ನಿಜೇ ‖ (ಮೂಡುಬಿದರೆ)
ಕ್ಷಣ ತಾತ್ಪರ್ಯಮಿದೀ ತ್ರಿಲೋಕಶತಕಂ ತಾನೀ ಪಗಲ್ತೊಟ್ಟು ಮುಂ |
ದಣ ವೀರಾಂಗದ ಯೋಗಿ ಮುಟ್ಟುತಿಳೆಯೊಳ್ ಸಲ್ಲೀಲೆಯಿಂದೊಪ್ಪುಗುಂ ‖—ತ್ರಿ. ಶ. ೧೨೮.

೨. ಕ. ಕ. ಚ. II, ಪು. ೨೭೬.

೩. ಪಂಪನ ಜನನ ಕ್ರಿ. ಶ. ೯೦೨ [ಆ. ಪು. I, ೩] ಪಂಪ ಆದಿಪುರಾಣವನ್ನು ರಚಿಸಿದ್ದು ಕ್ರಿ. ಶ. ೯೪೧ [ಆ. ಪು. XVI, ೭೬-೭೭.]

೪. ವೃಷಭ ಮಾಸದಿ ತೊಡಗಿತು ಕುಂಭಮಾಸ ಸ | ದ್ವಿಷಯದಿ ಕೃತಿಪೂರ್ಣವಾಯ್ತು ‖
ವೃಷಭಾಂಕ ಹಂಸನಾಥನೆ ಜಯಜಯ ಪರಮಪು | ರುಷನೆ ಚಿದಂಬರಪುರುಷಾ ‖
—ಭ. ವೈ. ೮ನೇಸಂ, ಪ. ೧೨೨.

ವರಸಮ್ಯಕ್ತ್ವ ಸುಧರ್ಮ ಜೈನಮತದೊಳ್ತಾಂ ಪುಟ್ಟಿಯಾ ದೀಕ್ಷೆಯಂ |
ಧರಿಸೀ ಸನ್ನುತ ಕಾವ್ಯಶಾಸ್ತ್ರಗಳನುಂ ನಿರ್ಮಾಣಮಂ ಮಾಡುತಂ ||
ವರರತ್ನಾಕರ ಯೋಗಿಯೆಂದು ನಿರುತಂ ವೈರಾಗ್ಯ ಬಂದೇರಲಾಂ |
ಹರದೀಕ್ಷಾ ವ್ರತನಾದೆನ್ನೆ ಹರಹರಾ ಶ್ರೀ ಚೆನ್ನಸೋಮೇಶ್ವರಾ[1] ||

ರತ್ನಾಕರನ ವೈಯಕ್ತಿಕ ಪ್ರಣಯಲೀಲೆ ಹಾಗೂ ಮತಾಂತರ ಈ ಮಹಾ ಘಟನೆಗಳನ್ನು ಕುರಿತು ಸಂಶೋಧನೆ ನಡೆಯಬೇಕಾಗಿದೆ; ಅನಂತರ ಎಷ್ಟೋ ಸಮಸ್ಯೆಗಳಿಗೆ ಪರಿಹಾರ ದೊರೆತೀತು.

ಭರತೇಶವೈಭವದ ರಚನಾಕಾಲದಲ್ಲಿ ರತ್ನಾಕರನ ಗುರು ಚಾರುತೀರ್ತಿಗಳು.[2] ಆದರೆ ರತ್ನಾಕರಶತಕದ ರಚನಾಕಾಲದಲ್ಲಿ ದೇವೇಂದ್ರಕೀರ್ತಿಗಳನ್ನು ತನ್ನ ಗುರುವೆಂದು ಹೇಳಿಕೊಂಡು ಅವರನ್ನು ಮನಃಪೂರ್ವಕ ಕೊಂಡಾಡಿರುವನು.[3] ಥಕ್ಕನೆ ಇಂಥ ಮಾರ್ಪಾಟು ಸಾಧ್ಯವಾದೀತೆ? ಏನೋ ಒಂದು ಅನಿರೀಕ್ಷಿತ ದುರ್ಘಟನೆ ನಡೆದೇ ಇಂಥ ಮಾರ್ಪಾಟಿಗೆಡೆಯಿತ್ತಿರಬಹುದು. ರತ್ನಾಕರನಿಗಾಗದ ಒಂದು ತಂಡವೇ ಇತ್ತೆಂಬುದಕ್ಕೆ ಭರತೇಶವೈಭವದಲ್ಲೇ ಸೂಚನೆ ದೊರೆಯುತ್ತದೆ.[4] ದಿಗಂಬರಮುನಿಗಳೇ ರತ್ನಾಕರನ ವಿರುದ್ಧ ನಿಂತು ಸಂಚು ನಡೆಸಿದರೆಂದಮೇಲೆ ಕೇಳಬೇಕೆ? ಜನಸಾಮಾನ್ಯರನ್ನು ಉದ್ರೇಕಗೊಳಿಸಿ ರತ್ನಾಕರನ ಮೇಲೆ ಎತ್ತಿಕಟ್ಟಿದ್ದರೂ ಕಟ್ಟಿರಬಹುದು. ಇಂಥ ವಿಷಮ ಪರಿಸ್ಥಿತಿಯಲ್ಲಿ ರತ್ನಾಕರನ ಮನದಲ್ಲಿ ಕ್ಷೋಭೆಯೆದ್ದು ಆತನ ಸಂಯಮವನ್ನು ಕಲಿಕಿರಬಹುದು. ಯತಿಯ ಮೇಲೆ ಸಮಾಜ ತಿರುಗಿಬಿದ್ದರೆ ಆತನ ಗತಿಯೇನಾಗಬೇಕು? ಒಳಗೇ ಕತಕತ ಕುದಿದು ಬೇಯುತ್ತಿರುವಾಗ ರತ್ನಾಕರನನ್ನು ವೀರಶೈವಧರ್ಮ

---

೧. ಶ್ರೀ ಎ. ಶಾಂತಿರಾಜಶಾಸ್ತ್ರಿಗಳು, ಶ. ತ್ರ., ಪೀ. IV.

೨. ದೇಶಿಗಣಾಗ್ರಣಿ ಚಾರುಕೀರ್ತ್ಯಾಚಾರ್ಯ | ಶ್ರೀ ಶುಚಿ ದೀಕ್ಷೆಯಿತ್ತಾಗ ||
ಆಶಾತಿದೂರ ಶ್ರೀಗುರು ಹಂಸನಾಥ ಪ್ರ | ಕಾಶದೊಳ್ನೆಲಸಿ ರಕ್ಷಿಸಿದಾ || ೧೧೪ ||
—ಭ. ವೈ. ೮೦ನೇ ಸಂ.

೩. ಪರಸಂತೋಷಮೆ ಸೌಖ್ಯಮೆಂಬ ಪರದುಃಖಂ ತನ್ನನೋವೆಂಬ ತಾಂ |
ಪರಮೆಂಬಂದಮನಿಂತುಟೆಂಬ ಪರಲೋಕಂ ತನ್ನನಾಡೆಂಬ ತ ||
ತ್ಪರಮಜ್ಞಾನಿ ಜಗದ್ಗುರುಂ ಮಮಗುರುಂ ದೇವೇಂದ್ರ ಕೀರ್ತಿ ವ್ರತೀ |
ಶ್ವರನಾತಂ ಪೆರನಲ್ತು ನೀನೆ ಪಲವೇಂ ರತ್ನಾಕರಾಧೀಶ್ವರಾ || ೧೦೮ ||

೪. ಈ ಕಥೆಯನು ನಾನು ಪೇಳ್ವಾಗ ಧರೆಯೊಳ | ನೇಕರು ಹರುಷವೇರಿದರು ||
ಪೋಕರು ನಾಲ್ಕೆಂಟು ಮಂದಿ ಚಿತ್ತದೊಳತಿ | ವ್ಯಾಕುಲ ಬಟ್ಟರೆಂತೆನಲು || ೯೮ ||
ಕೀರ್ತಿಯ ಬಯಸಿ ನಾನುಸುರಿತಿಲ್ಲೆನಗೆ ಸ | ತ್ಕೀರ್ತಿ ತಾನೆ ಬರುತಿಹುದು ||
ಕೀರ್ತಿಯ ಬಯಸಿ ಕಣ್ಗೆಸುರಾಗಿ ಕೆಲಬರು | ಧೂರ್ತರು ಪೇಚಾಡುತಿಹರು || ೯೯ ||
ತೊಡಗುವರ್ತಾವು ಕವಿತ್ವವ ಕಡೆಗದು | ನಡೆಯದು ಕಿವಿಗೆ ಶೋಭಿಸದು ||
ಬಿಡು ಹೊಸಕವಿತೆಯನೆಂದು ಪೂರ್ವದ ಶಾಸ್ತ್ರ | ಗಡಬಡೆ ಮಾಡುವರೊಡನೆ || ೧೦೦ ||
ಮೆಯ್ಯೊಳಿರ್ದಾತ್ಮನ ಬತ್ತಲೆಮಾಡಿ ನಾ | ನೊಯ್ಯನೀಕ್ಷಿಸಿದರೆ ತಾವು ||
ಮೆಯ್ಯ ಬತ್ತಲೆಮಾಡಿ ಮನವ ಕತ್ತಲೆಮಾಡಿ | ಹುಯ್ಯಲಿಡುತ ಸುತ್ತುತಿಹರು || ೧೦೨ ||
—ಭ. ವೈ. ೮೦ನೇ ಸಂ.

ಕೈಬೀಸಿ ಕರೆದಿರಬಹುದು.[1] ರತ್ನಾಕರನಂಥ ಮಹಾಕವಿಯನ್ನು ಕಾಡಿ, ಭವಸೇನ ಮುನಿ ಪರಂಪರೆ ಜೈನಸಂಸ್ಕೃತಿಯ ತಾಯ್ಬೇರಿಗೇ ಕುಠಾರವನ್ನು ಬೀಸಿತು.[2] ಉಂಡುರುಳಿ ಭಟ್ಟಾರಕನಂಥ ರತ್ನಾಕರನೂ ರೋಸಿಹೋಗಿ ವೀರಶೈವನಾಗಿ ತಲೆಮರೆಸಿಕೊಂಡು ತಲೆಯುಳಿಸಿಕೊಳ್ಳಬೇಕಾಯಿತು!

ರತ್ನಾಕರ ವೀರಶೈವನಾದ ನಂತರ ಹೇಗೆ ಬಾಳಿದನೋ ನಮಗೆ ತಿಳಿಯದು. ಕವಿಕರ್ಮವನ್ನು ಅಲ್ಲೂ ಮುಂದುವರಿಸಿದನೆಂದು ರಾಜಾವಳೀ ಕಥೆಯಲ್ಲಿದೆ. ರತ್ನಾಕರ ಕೇವಲ ಕವಿಯಲ್ಲ. ಜಿನಧರ್ಮದಲ್ಲಿದ್ದಾಗ್ಗೆ ಹಂಸಾನುಭವಿಯಾಗಿದ್ದನು. ಮತಾಂತರಗೊಳ್ಳುವಂಥ ವಿಷಮ ಪರಿಸ್ಥಿತಿಯೊದಗಿದಾಗ ಈತನಲ್ಲುಂಟಾದ ಮನಃಕ್ಷೋಭೆಯನ್ನು ನಾವು ಕಲ್ಪಿಸಿಕೊಳ್ಳಬೇಕು. ಕೇವಲ ಮತಾಂತರಗೊಳ್ಳುವುದರಲ್ಲೇ ಅದು ಪರ್ಯವಸಾನಗೊಳ್ಳದೆ ರತ್ನಾಕರನನ್ನು ಯೋಗಭ್ರಷ್ಟನನ್ನಾಗಿಯೂ ಮಾಡಿರಬಹುದು; ಮತ್ತೊಮ್ಮೆ ಜಿನಧರ್ಮವನ್ನು ಸ್ವೀಕರಿಸಿ ಸಾಧಕನಾಗಿ ಬಾಳಲು ಹೆಣಗಾಡಿದ ಚಿತ್ರವನ್ನು ರತ್ನಾಕರಶತಕದಲ್ಲಿ ನಾವು ಕಾಣಬಹುದು.

ಎತ್ತೆತ್ತಂ ಲತಾಂಗಿಯರ್ಸುಳಿದರತ್ತತ್ತಾಡುಗುಂ ಕಣ್ಗಳೆ |
ತ್ತೆತ್ತಂ ಕಾಮಿನಿಯರ್ಮೊಗಂದೆಗೆದರತ್ತತ್ತೊಂದುಗುಂ ಜಿಹ್ವೆ ಮ ||
ತ್ತೆತ್ತೆತ್ತಂ ಸರಿಮಿಂಡಿಯರ್ತೆಗೆದರತ್ತತ್ತೆಯ್ದುಗುಂ ಬುದ್ಧಿ ನಿ |
ಮ್ಮತ್ತಂ ಬಾರದು ಕೆಟ್ಟೆನೇವೆನಕಟಾ ರತ್ನಾಕರಾಧೀಶ್ವರಾ || ೫೯ ||
ಮದವೆದ್ದಾನೆಗೆ ಕಲ್ಲಪೊಯ್ಯುದಿನಿದೇ ಮೆಯ್ಯಿೀಟೆಗಂ ಕಜ್ಜಿಗಂ |
ಬದಿಯಂ ತೋಡುವುದೊಳ್ಳಿದಲ್ತು ಬಗೆವಂದಾತ್ಮಂಗೆ ನಾರೀರತಂ ||
ಮುದವಲ್ತಾದೊಡಮಂತದಂ ಬಿಡಲಶಕ್ಯಂ ಬಿಟ್ಟೊಡಿ ಯೌವನೋ |
ನ್ಮದದುದ್ರೇಕವಡಂಗದೇವೆನಕಟಾ ರತ್ನಾಕರಾಧೀಶ್ವರಾ || ೬೦ ||

---

೧. "....ವಿಜಯಕೀರ್ತಿಗಳೆಂಬ ಪಟ್ಟಾಚಾರ್ಯರ ಶಿಷ್ಯರಾದ ವಿಜಯಣ್ಣಗಳು ದ್ವಾದಶಾನುಪ್ರೇಕ್ಷೆಗಳಂ ಕನ್ನಡದಿಂ ಸಂಗೀತಮಾಗಿ ವೃತ್ತ ವಚನದಿಂ ಮಾಡಿ ಆನೆಯ ಮೇಲೆ ಪ್ರಭಾವನೆಯಂ ಮಾಡಿಸಲೀ ರತ್ನಾಕರಾರ್ಯಂ ಭರತೇಶ್ವರ ಚರಿತಮಂ ೮೪ಸಂಧಿಯಂ ಮಾಡಿ ಮಾತಂಗಮನೇರಿಸಿ ಮೆರೆಯಿಸವೇಳ್ಕೆಂಬುದುಂ ಪಟ್ಟಾಚಾರ್ಯರು ಇದರೊಳೆರಡು ಮೂರು ವಾಕ್ಯಂ ಪುರಾಣಕ್ಕೆ ವಿರೋಧಮಿರ್ಪುದದರಿಂದಾಗದೆಂಬುದುಂ ಅದೆ ಸಂವಾದಮಾಗಿ ಚರ್ಚಿಸಿದೊಡೆ ತನ್ನ ತಿರಸ್ಕರಿಸಿ ೭೦೦ ಶ್ರಾವಕರ ಗೃಹದೊಳ್ ಚರಿಗೆಯಂ ಮಾಡದಿರಲು ನಿಜಾನುಜೆಯಿಂದಾ ಹಾರಮಂ ಕೊಳ್ಳುತ್ತೆ ಕೋಪಮುದಯಿಸಿ ಆತ್ಮಜ್ಞಾನಿಗೆ ಜಾತಿಕುಲಮಾವುದಾದೊಡಂ ಸಮಮೆಂದು ಲಿಂಗಮಂ ಕಟ್ಟಿಕೊಂಡು ವೀರಶೈವಶಾಸ್ತ್ರಂಗಳಂ ಬಸವಪುರಾಣಂ ಮೊದಲಾಗೆ ಮಾಡಿ ಕೆಲವು ದಿನದಿಂ ಮೇಲೆ ಉಪಶಮಮಂ ತಾಳ್ದು ಸನ್ಮಾರ್ಗದೊಳ್ ನಂಬಿನಡೆದಂ...." ರಾಜಾವಳೀ ಕಥೆಯಲ್ಲಿ ರತ್ನಾಕರನ ಬಗ್ಗೆ ಇರುವ ಉಲ್ಲೇಖವನ್ನು ಕರ್ಣಾಟಕ ಕವಿ ಚರಿತೆಕಾರರು ಈ ರೀತಿ ಸಂಗ್ರಹಿಸಿರುವರು.— ಕ. ಕ. ಚ, II, ಪು. ೨೭೬.

೨. ಹರವರ ನುಡಿಯಿಲ್ಲದಾನಿರುತಿರ್ದೆನುಂ | ಡುರುಳಿ ಭಟ್ಟಾರಕರಂತೆ ||
ನೆರಪಿ ಹೊತ್ತಗೆಗಳ ಹೊರೆಗಟ್ಟಿ ಭವಸೇನ | ಗುರುಗಳಂತವರಾಡುತಿಹರು || ೧೦೨ ||
ಏನೇನು ಪರಿಯೊಳಾಡಿದರು ತವಗೆ ಕೀರ್ತಿ | ಹಾನಿಯಾಗಿಯೆ ಬಂದಿತದಕೆ ||
ಬೇನೆಬಟ್ಟೊಡನೆಮ್ಮ ಕಾವ್ಯವ ಜರೆದರ | ಜ್ಞಾನಿಗಳಲ್ಲಸಲ್ಲೆಂದು || ೧೦೪ ||
—ಭ. ವೈ. ೮೦ನೇ ಸಂ.

ತನುವೇಳ್ಕೆಂಬವನೌಷಧಕ್ಕೆಳೆಸನೇ ಪಿತ್ರೋರ್ಜಿತಂ ದೇಹ ಶೋ |
ಧನೆಯಂ ಮಾಳ್ಪವೊಲಂಗನಾ ಸುರತದಿಂ ತನ್ನಿಂದ್ರಿಯಂ ಪೋಗೆ ಯಾ ||
ವನತಾಪಂ ನಿಲುಗುಂ ನಿಲಲ್ಬರಿತೆ ಸಲ್ಗುಂ ಸದ್ಗೃಹಸ್ಥಂಗೆ ತ |
ತ್ತನು ಬೇಡೆಂಬ ಮುನೀಶ್ವರಂಗುಚಿತವೇ ರತ್ನಾಕರಾಧೀಶ್ವರಾ || ೬೧ ||

ರತ್ನಾಕರ ತನ್ನ ಚಿತ್ತಚಾಂಚಲ್ಯವನ್ನು ಮರೆಮಾಚದೆ ತೋಡಿಕೊಂಡಿರುವನು. ಗೃಹಸ್ಥನಿಗೆ ಕಾಮೋನ್ಮಾದವುಂಟಾದರೆ ಪರಿಹರಿಸಿಕೊಂಡು ಸಮಾಧಾನಚಿತ್ತನಾಗಲವಕಾಶವುಂಟು. ಆದರೆ ಮುನಿಯ ಗತಿ ಅತ್ತಲೂ ಇಲ್ಲ ಇತ್ತಲೂ ಇಲ್ಲ ಎಂಬಂತೆ ಉಭಯ ಭ್ರಷ್ಟನಾಗಬೇಕಾಗುವುದು. ಭರತೇಶವೈಭವದ ಸಂಯಮಸಾಮ್ರಾಜ್ಯವನ್ನಾಳುತ್ತಿದ್ದ ರತ್ನಾಕರನೆಲ್ಲಿ, ರತ್ನಾಕರ ಶತಕದ ಚಂಚ ಚಿತ್ತನಾದ ರತ್ನಾಕರನೆತ್ತ? ಭರತೇಶವೈಭವದ ರಚನಾಕಾಲದಲ್ಲಿ ರತ್ನಾಕರ 'ಉದ್ದಿಷ್ಟವಿರತಶ್ರಾವಕ'ನಾಗಿದ್ದನು. ಈತನ ಸಾಧನೆಗೆ ಬೆರಗಾಗಿ ಅಂದಿನ ಜನತೆ ಈತನನ್ನು 'ಸಿದ್ಧ'ನೆಂದರು; 'ಅಣ್ಣಗಳು' ಎಂದು ಗೌರವಿಸಿದರು.[೧] ದಿಗಂಬರಮುನಿಗಳೂ ಕರುಬುವಂತೆ ರತ್ನಾಕರನ ಸಾಧನೆ ಉಜ್ವಲವಾಗಿತ್ತು. ಕಾವ್ಯದಲ್ಲೂ ಯೋಗದಲ್ಲೂ ತನಗಿದ್ದ ಅಸಾಧಾರಣ ಶಕ್ತಿಯನ್ನೂ ರತ್ನಾಕರನೇ ಹೇಳಿಕೊಂಡಿರುವನು.

ಕೊಸರುವನಹುದು ರತ್ನಾಕರಸಿದ್ಧ ಗಿ | ದಸಮಾನವಹ ಕಲೆಯಲ್ಲ ||
ಸುಸಿಲ ಪ್ರಕಟವಾಗೆ ಸೊಬಗಲ್ಲವೆಂದು ಸೂ | ಚಿಸಿ ಬಿಟ್ಟೆನಂದರಿದಿಹುದು[೨] || ೧೧೩ ||
ತರುಣಿಯರೊಡಗೂಡಿ ಕರ್ಮವಳಿವ ಶಕ್ತಿ | ಭರತೇಶಗುಂಟುವಂತದನು ||
ವಿರಚಿಸೆ ದೋಷಹೊದ್ದದ ಯುಕ್ತಿ ರತ್ನಾ | ಕರ ಸಿದ್ಧಗುಂಟೊಲ್ಲದಾದ[೨] || ೧೧೪ ||

ಇಂಥ ಸಂಯಮಶಾಲಿಯ ಮಹಾಶಕ್ತಿ ರತ್ನಾಕರಶತಕದ ಕಾಲಕ್ಕೆ ಎಲ್ಲಿ ಹೋಯಿತು? ಹಿಂದಣ ಯುಕ್ತಿ ಈಗೇನಾಯಿತು? ಎಂಬ ಪ್ರಶ್ನೆ ಸಹಜದಿರದು. ಏನೋ ದುರ್ಘಟನೆ ನಡೆದು ರತ್ನಾಕರ ಯೋಗಭ್ರಷ್ಟನಾಗಿರಬಹುದೆಂದು ಊಹಿಸಬಹುದಲ್ಲವೆ? ಯೋಗರಹಸ್ಯವನ್ನರಿತವರಿಗೆ ಇಂಥ ಪತನವಾಯಿತೆಂದಾಗ ಅಚ್ಚರಿಯಾಗದು. ಹಿಂದೆ ಯೋಗಭ್ರಷ್ಟರಾದ ಮುನಿಗಳ ವಿವರ ಜೈನಪುರಾಣಗಳಲ್ಲೂ ನೋಡಲಿಕ್ಕೆ ಸಿಗುವುದು. ದಿಗಂಬರ ಮಹಾಮುನಿಯಾದ ಮಾಘ ಯೋಗಭ್ರಷ್ಟನಾಗಿ ಅಡ್ಡಹಾದಿ ಹಿಡಿದು ಬಹುಕಾಲಕ್ಕೆ ಜ್ಞಾನೋದಯವಾಗಿ ಪುನರ್ದೀಕ್ಷೆಯನ್ನು ಪಡೆದು ಮತ್ತೆ ಸಾಧನೆಯೆಸಗಿ ಆತ್ಮೋನ್ನತಿಯನ್ನು ಸಾಧಿಸಿದನು.[೩] ಜೈನ ಯೋಗವಿಜ್ಞಾನದಿಂದಲೂ ಇಂಥ ಪತನವನ್ನು ದೃಢೀಕರಿಸಬಹುದು. ಗುಣಸ್ಥಾನಗಳ ಇಚ್ಚಣಿಕೆಯನ್ನೇರಿ ಹೋಗುವಾಗ ಕಡಿದಾದೆಡೆಗಳಲ್ಲಿ ಸಾಧಕ ಮುಂದುಮುಂದಕ್ಕೆ ಹೋಗಲಾರದೆ ಹಿಂದಕ್ಕೆ ಬರಬೇಕಾಗುವುದು; ಒಮ್ಮೊಮ್ಮೆ ಕಾಲು ಜಾರಿ ಯೋಗಿ ನೆಲಕ್ಕುರುಳಿ ಹೋಗುವ ಸಂಭವವೂ ಇಲ್ಲದೆ ಇಲ್ಲ.[೪] ಷಟ್‌ಚಕ್ರಗಳ ಯೋಗಶ್ರೇಣಿಯನ್ನು ವಿವರಿಸುತ್ತ

೧. ಭ. ವೈ. ಆಂನೇ ಸಂ. ೧೦೮, ೧೯.

೨. ಭ. ವೈ. ೧೦ನೇ ಸಂ.

೩. ಶ್ರೀ ಮಿರ್ಜಿಅಣ್ಣಾರಾಯರು, ಅ. ಕ., ಪು. ೫೪.

೪. ಹನ್ನೊಂದನೆ ಗುಣಸ್ಥಾನಕ್ಕೇರಿದ ಮುನಿಯೂ ಕೆಳಗೆ ಬಿದ್ದು ಒಂದನೆ ಗುಣಸ್ಥಾನಕ್ಕೆ ಬರಬಹುದು.

ಮಹಾತಪಸ್ವಿ ಶ್ರೀ ರಾಮಕೃಷ್ಣ ಪರಮಹಂಸರು, ಗುದದಿಂದ ಮೇಲೇರಿ ಕಂಠದ ತನಕ ಹೋದಂಥ ಚೇತನವೂ ಮತ್ತೆ ನೆಲಕ್ಕುರುಳಿ ಪೂರ್ತಿ ತನ್ನ ಧ್ಯೇಯವನ್ನು ಮರೆತು ಬಿಡುವ ಸಂಭವವೂ ಉಂಟೆಂದು ಹೇಳಿರುವರು.[೧] ಇದೆಲ್ಲವನ್ನೂ ಪರಿಗಣಿಸಿದಾಗ ಹಾಗೂ ರತ್ನಾಕರ ಶತಕದಲ್ಲಿ ಚಿತ್ತಚಾಂಚಲ್ಯದಿಂದ ತಳಮಳಗೊಂಡಿರುವ ರತ್ನಾಕರ ಯೋಗಿಯನ್ನು ನೆನೆದಾಗ ಯಾವುದೋ ವಿಷಘಳಿಗೆಯಲ್ಲಿ ಕರ್ಮ ಉಲ್ಬಣವಾಗಿ ಆತನನ್ನು ಯೋಗಭ್ರಷ್ಟನನ್ನಾಗಿ ಮಾಡಿದ್ದರೂ ಮಾಡಿರಬಹುದೆಂದು ಊಹಿಸಲವಕಾಶವುಂಟು. ಹಡಗು ಮುಳುಗಿ ಲಕ್ಷಾಧೀಶ್ವರ, ಥಕ್ಕನೆ ಭಿಕ್ಷುಕನಾಗಿ ಮತ್ತೊಮ್ಮೆ ಚೇತರಿಸಿಕೊಳ್ಳಲು ಹೆಣಗಾಡುವಂತೆ ರತ್ನಾಕರನೂ ಹೆಣಗಾಡಿರುವನು.

ನೆಲಕ್ಕುರುಳಿದ್ದ ರತ್ನಾಕರನನ್ನು ಕಂಡು ಎಷ್ಟೋ ಜನ ಪರಿಹಾಸ್ಯವೆಸಗಿರಬಹುದು. ಅಂಥ ಸಂದರ್ಭದಲ್ಲಿ ಈತನ ಮೇಲೆ ಕೃಪಾದೃಷ್ಟಿಯನ್ನು ಬೀರಿ ಈತನ ಏಳುಬೀಳುಗಳನ್ನು ಸಹಾನುಭೂತಿಯಿಂದ ಕಂಡು ಕೈಹಿಡಿದೆತ್ತಿದವರೆಂದರೆ ದೇವೇಂದ್ರಕೀರ್ತಿಗಳೆ. ಅದಕ್ಕೋ ಏನೊ ಅವರನ್ನು ಜಿನೇಂದ್ರನಿಗೆ ಸಮಾನವಾದ ಸದ್ಗುರುವೆಂದು ರತ್ನಾಕರ ಕೊಂಡಾಡಿರುವನು.

ಶ್ರುತಮಂನೋಳ್ಪ ತದರ್ಥಮಂ ತಿಳಿವ ತನ್ಮರ್ಯಾದೆಯೊಳ್ಪೋಪ ಸು |
ವ್ರತಮಂ ಪಾಲಿಪ ಕಾಮಮಂತುಳಿವ ಮಾಯಾ ಜಾಡ್ಯಮಂ ಝಾಡಿಪು ||
ನ್ನತ ಕಾರುಣ್ಯದೊಳಾಳ್ವ ಜೀವಹಿತಮಂ ಪೇಳ್ವಾತನೆ ಮದ್ಗುರು |
ಶ್ರುತ ಯೋಗೀಶ್ವರನಿಂದು ನಾಳಿನ ಶಿವಂ ರತ್ನಾಕರಾಧೀಶ್ವರಾ || ೧೦೭ ||

ನೆಲಕ್ಕೆ ಬಿದ್ದಾಗ ರತ್ನಾಕರನಿಗೆ ಸಮಾಧಾನವೆಸಗಿ, ಧೈರ್ಯವಿತ್ತು ಪುನರ್ದೀಕ್ಷೆಯನ್ನು ಕೊಟ್ಟು ದೇವೇಂದ್ರಕೀರ್ತಿಗಳು ಸಾಧನೆಯ ಪಥವನ್ನು ಮತ್ತೆ ತೋರಿಸಿಕೊಟ್ಟಿರಬಹುದು. ರತ್ನಾಕರ ದೃಢಮತಿಯಾಗಿ ಕಟ್ಟುನಿಟ್ಟಾದ ಸಂಯಮವನ್ನು ಪಾಲಿಸಲು ಯತ್ನಿಸಿ ಹಿಂದೆ ಆಗಿಹೋದ ಅಚಾತುರ್ಯಗಳಿಗಾಗಿ ರತ್ನಾಕರ ಶತಕದಲ್ಲಿ ತಾನೇ ಮರುಗಿರುವನು.[೨]

ರತ್ನಾಕರ ಸ್ವಭಾವತಹ ಕ್ರಾಂತಿಕಾರಿ, ಸುಧಾರಣಾ ಮನೋಭಾವವುಳ್ಳಾತ, ಜೈನ ದರ್ಶನಕ್ಕೆ ಔದಾರ್ಯದ ಒಪ್ಪವಿಡಲು ಹೆಣಗಾಡಿದಾತ. ವೀರಶೈವ ಧರ್ಮದಲ್ಲಿ ಕೆಲಕಾಲವಾದರೂ ಈತ ಬಾಳಿರಬಹುದೆಂಬುದಕ್ಕೆ ಈತನ ಶತಕಗಳಲ್ಲಿ ವೀರಶೈವ ಧರ್ಮದ ಪ್ರಭಾವವಿರುವುದೇ ಸಾಕ್ಷಿಯಾಗಿದೆ. "ಆವನುಮಕ್ಕೆ ನಿಮ್ಮಡಿಗಳಂ ನೆನೆವಾತನೆ ನನ್ನ ಬಂಧು....ನನ್ನ ಮೆಚ್ಚಿನಾ ದೇವನ ನಚ್ಚಿದಾತನೆನಗನ್ಯನೆ ಪೇಳಪರಾಜಿತೇಶ್ವರಾ![೩]" ಈ ಮಾತು ಸಮವಸರಣದ ಔದಾರ್ಯಕ್ಕೆ ತೀರ ಹತ್ತಿರವಾದುದು. ಆದರೆ ಬರುಬರುತ್ತ ಜೈನ ಮತೀಯರಲ್ಲೂ ಜಾತಿಮದ ತಲೆಹಾಕಿ ಉಚ್ಚ ನೀಚ ಭೇದಭಾವ ಮೊಳೆತು, ಸಂಕುಚಿತ ಮನೋಭಾವ ಬೆಳೆದು ಜಿನಧರ್ಮ ಬಿಲವಾಗಲು ಮೂಲಕಾರಣವಾಯಿತು. ಮಹಾವೀರನ ದಯಾದಾಕ್ಷಿಣ್ಯವನ್ನು ರತ್ನಾಕರ, ಅನುಭವಮಂಟಪವನ್ನು ಹೊಕ್ಕು ಕಂಡುಕೊಳ್ಳಬೇಕಾಯಿತು. ಅನಂತರ ಈತ ಧೈರ್ಯವಾಗಿ

೧. ಶ್ರೀ ರಾ. ಕೃ. ಲೀ. ಪು, IV-೩೨೪.

೨. ರತ್ನಾ. ಶ. ೬೭.

೩. ಅ. ಶ. ೫೪.

ದಿವ್ಯಧ್ವನಿಯ ಸಾರವನ್ನು 'ಆವನುಮಕ್ಕೆ ನಿಮ್ಮಡಿಗಳಂ ನೆನೆವಾತನೆ ನನ್ನ ಬಂಧು' ಎಂದು ಕನ್ನಡನಾಡಿನಲ್ಲಿ ಸಾರಿದನು.

ಬಾಳಿನ ಕೊನೆಕೊನೆಗೆ ರತ್ನಾಕರ ದಿಗಂಬರಯತಿಯಾಗಿರಬಹುದು; ಅಪರಾಜಿತ ಶತಕದಲ್ಲಿ ಅಂಥ ಸೂಚನೆ ಕಂಡುಬರುವುದು.

ನಿನ್ನೊಳಗಾದ ಭಕ್ತಿಗಡ ನಿರ್ವೃತ್ತಿ ಬೇಕು ಗಡಂ ವಿಶುದ್ಧದಿಂ |
ತನ್ನಿರವುಂ ಭವತ್ಪ್ರತಿ ಗಡಾಂತುದು ದೀಕ್ಷೆಗಡಂ ಬಳಿಕ್ಕಹೋ ||
ಸನ್ನಿಗಡಂ ಬಿಸಿಲ್ಗಡ ಭಯಂಗಡ ಬಾಯ್ಸುವಿಯಾಸೆಯುಂ ಗಡಂ |
ನನ್ನ ಮನೋವಿಕಾರತೆಯನಾಡುವೆನೇನಪರಾಜಿತೇಶ್ವರಾ || ೪೩ ||

ರತ್ನಾಕರ ದಿಗಂಬರದೀಕ್ಷೆಯನ್ನು ಪಡೆದು ಕಟ್ಟುನಿಟ್ಟಾದ ಆಚರಣೆಯನ್ನು ಆಚರಿಸುವಾಗ ತನ್ನ ಉತ್ಸಾಹಕ್ಕನುಗುಣವಾಗಿ ತನ್ನ ಮನವೂ ಉತ್ಸಾಹಗೊಳ್ಳದೆ ಆಲಸ್ಯತೋರಿದಾಗ ತನ್ನ ಸಂಕಟವನ್ನು ತೋಡಿಕೊಂಡಿರುವನು. ಶತಕಗಳಲ್ಲಿ ರತ್ನಾಕರ ತೀವ್ರವಾದ ವೈರಾಗ್ಯವನ್ನು ಬೋಧಿಸಿರುವುದನ್ನು ನೋಡಿದರೆ ಈತ ಸಾಧುಪರಮೇಷ್ಠಿಯಾಗಿದ್ದರೂ ಆಗಿರಬಹುದೆಂದು ಹೇಳಲವಕಾಶವಿದೆ. ಭರತೇಶವೈಭವದಲ್ಲಿ ರತ್ನಾಕರ ರಾಗರಸಿಕವಾದ ಬಾಳ್ವೆಯನ್ನು ಬೋಧಿಸಿರುವನು. ರತ್ನಾಕರಶತಕದಲ್ಲಿ ಆತ ಸದ್ಗೃಹಸ್ಥರ ಆಚರಣೆಗೆ ವ್ರತನಿಯಮಗಳ ನಿಯಂತ್ರಣವನ್ನು ಬಲವಾಗೇ ಹಾಕಿರುವನು. ಅಪರಾಜಿತಶತಕವಂತೂ ಮುನಿಧರ್ಮವನ್ನು ವಿವರಿಸುವ ಸಲುವಾಗಿ ಬರೆದಂಥ ಗ್ರಂಥವಾಗಿದೆ. ಇಂಥ ಅನಾಗಾರ ಶತಕವನ್ನು ಬರೆಯಬೇಕಾದರೆ ರತ್ನಾಕರನೂ ಉದ್ದಿಷ್ಟವಿರತಾವಸ್ಥೆಯಿಂದ ಮೇಲೇರಿ ಸಾಧುಪರಮೇಷ್ಠಿಯ ೨೮ ಮೂಲ ಗುಣಗಳನ್ನು ಪರಿಪಾಲಿಸುತ್ತಿದ್ದನೆಂದು ಕಾಣುವುದು.

ಇರುತಿರುತಿರ್ದು ಚಿಂತಿಸಿ ಶರೀರದ ಕರ್ಮದ ರೂಪನಂತೆ ಕೊ |
ಕ್ಕರಿಸಿ ತಪೋಗ್ನಿಯಿಂ ಸುಡುವೆನೀ ಭವಬಂಧಮನೆಂದು ಧೈರ್ಯಮಂ ||
ಕುರಿಸಿ ಪರೀಷಹಂ ಬರಿಸಿ ದೇಹಮನೊಡ್ಡಿ ನಿಜಾತ್ಮ ದೃಷ್ಟಿಯೊಳ್ |
ತೆರಳದೆ ನಿಂದು ಗೆಲ್ವವನೆ ಧನ್ಯನಲಾ ಅಪರಾಜಿತೇಶ್ವರಾ || ೯೩ ||
ಒಪ್ಪಿಸಿ ದೇಹಮಂ ತಪದ ತಾಪಕೆ ತನ್ನ ನಭಸ್ವರೂಪಮಂ |
ನಪ್ಪಿರಿದಪ್ಪಿಕೊಂಡು ನಿಲೆ ಲೋಕದ ಕಣ್ಗಿದು ಯೋಗಿ ವೇಷಮೋ ||
ಲೆಪ್ಪದ ರೂಪೊ ಕಲ್ಲ ಪರಿಜೋ ಎನೆ ತೋರ್ಪಿನಮಷ್ಟಕರ್ಮಮುಂ |
ಕಪ್ಪನೆ ಕಂದಿ ಬೆಂದು ತಪನಂಬುಗವೇ ಅಪರಾಜಿತೇಶ್ವರಾ || ೯೪ ||

ಸಾಧುಪರಮೇಷ್ಠಿಯ ಗುರಿಯನ್ನೂ ಹಂಸಕಾಲಾದ್ಭುತವನ್ನೂ ರತ್ನಾಕರ ಇಲ್ಲಿ ಬಿತ್ತರಿಸಿರುವನು. ತನ್ನ ಸ್ವಾನುಭವವನ್ನೇ ಅನುಭಾವಿಯಾದ ರತ್ನಾಕರ ಅಪರಾಜಿತ ಶತಕದುದ್ದಕ್ಕೂ ಕಲಾಮಯವಾಗಿ ಚಿತ್ರಿಸಿರುವನೆಂದರೆ ಅತಿಶಯೋಕ್ತಿಯಾಗದು.

ಭರತೇಶವೈಭವದ ರಚನಾ ಕಾಲದಲ್ಲಿ ರತ್ನಾಕರನ ಪ್ರತಿಭೆಗೆ ಸರಿಮಿಗಿಲಾಗಿ ಆತನಲ್ಲಿ ಪ್ರತಿಷ್ಠೆಯೂ ಇತ್ತು.

ಅವರೊಂದು ತಿಂಗಳೋದಿದ ಶಾಸ್ತ್ರ ನನಗೊಂದು | ದಿವಸದೊಳವಗತಿಯಹದು ||
ತವೆಬಾಹ್ಯ ರಚನೆಯೊಳೇನೆಂದು ಬಿಟ್ಟನು | ಭವಿಸುತಿಹೆನು ಹಂಸನೊಳಗೆ[೧] ||

ತನ್ನನ್ನು ವಿರೋಧಿಸಿದವರನ್ನು ಈತ ಸೊಗಸಾಗಿ ವಿಡಂಬನೆ ಮಾಡಿರುವುದಲ್ಲದೆ ಮನ ಚುಚ್ಚುವಂತೆ ಅವಹೇಳನವನ್ನೂ ಮಾಡಿರುವನು. ತನಗಾಗದ ದಿಗಂಬರಯತಿಗಳನ್ನು ಭವಸೇನಮುನಿಗಳೆಂದು ಘಂಟಾಘೋಷವಾಗಿ ಸಾರಲು ಹಿಂದುಮುಂದು ನೋಡಿಲ್ಲ. ಅದರಿಂದ ಭರತೇಶವೈಭವದ ಮಹಾಕವಿ ರತ್ನಾಕರನಲ್ಲಿ ಪ್ರತಿಷ್ಠೆಗೆ ಕೊರತೆಯೇನಿರಲಿಲ್ಲ; ಉಪಾಯವಾಗಿ ದಿಗಂಬರಮುನಿಗಳ ಮನವೊಲಿಸುವುದನ್ನು ಬಿಟ್ಟು ತಿರುಗಿಬಿದ್ದು ಇಲ್ಲದ ರಂಪವನ್ನು ತಂದುಕೊಂಡನೋ ಏನೊ! ವಾಚಾಳಿಯಾದ ರತ್ನಾಕರ ಯೌವನದ ಬಿಸಿರಕ್ತ ಕುದಿದಾಗ ಇಂತಾಡಿದನೆಂದರೆ ತಪ್ಪಾಗದು.

ರತ್ನಾಕರಶತಕದ ರಚನಾಕಾಲದಲ್ಲಿ ಈ ಮಹಾಕವಿ ಸಮಾಜ ಸುಧಾರಕನಾಗಿದ್ದನು; ಪಾಷಂಡಿಗಳೊಡನೆ, ಆಷಾಢಭೂತಿಗಳೊಡನೆ, ವಿದ್ಯಾವಂತ ವೇಷಧಾರಿಗಳೊಡನೆ ವ್ಯವಹರಿಸಬೇಕಾಗಿತ್ತು. ಸಂದರ್ಭೋಚಿತವಾಗಿ ಸಾತ್ವಿಕಾಕ್ರೋಶವನ್ನು ಚೆಲ್ಲಾಡಿರುವುದನ್ನು ನಾವು ಈ ಗ್ರಂಥದಲ್ಲಿ ಕಾಣಬಹುದು. ವಿದ್ಯಾವಂತ ಧೂರ್ತರನ್ನು ಕಂಡಾಗ "....ಶಾಸ್ತ್ರಂ ಶಸ್ತ್ರಮೆ ಶಾಸ್ತ್ರಿ ಶಸ್ತ್ರಿಕನಲಾ[೨]...." ಎಂದು ವಿಡಂಬನೆ ಮಾಡಿರುವನು. ಧರ್ಮಾಂಧರಾದ ರಾಜ ಮಹಾರಾಜರಿದಿರು ನಿಂತು "ಆರಿಂದಾದುದೊ ರಾಜ್ಯಲಕ್ಷ್ಮಿ?....[೩]" ಎಂದು ಜಡಿದು ಜಂಕಿಸಿರುವನು. "....ನರಕೀಟಾದಿಗಳೇಕೆ ಗರ್ವಿಸುವರೋ?....[೪]" ಎಂದು ತಲೆತಿರುಗಿದ ಮಹಾರಾಜನನ್ನು ಕಂಡು ಬೇಸರಪಟ್ಟುಕೊಂಡಿರುವನು. "ಪಡೆಯೊಳ್ಬಲ್ಲಿದನಾದೊಡಾ ಪಡೆಯಿನೇಂ ಪಾಪಾರಿಯಂ ಗೆಲ್ವನೇ?....[೫]" ಎಂದು ರಾಜ ಮಹಾರಾಜರ ಅಷ್ಟೈಶ್ವರ್ಯದಿದಿರು ನಿರ್ಲಕ್ಷ್ಯನಾಗಿ ಓಡಾಡಿರುವನು. "....ನಾಸ್ತಿ ನಾಸ್ತಿ ಗುರುದ್ದೈವಕ್ಕೊಲ್ದು ಕೊಟ್ಟೈಸು ತಾನುಂಡುಟ್ಟೈಸು ತನತ್ತು ಮತ್ತೆ ಬರಿದ್ಯೆ ರತ್ನಾಕರಾಧೀಶ್ವರಾ![೬]" ಎಂದು ತನ್ನ ಕೊನೆಯ ತೀರ್ಮಾನವನ್ನು ನುಡಿದುಬಿಟ್ಟಿರುವನು. ಒಟ್ಟಿನಲ್ಲಿ ಸಾತ್ವಿಕ ಕೆಚ್ಚು ರತ್ನಾಕರನಲ್ಲಿ ಉಜ್ವಲಗೊಂಡಿರುವುದನ್ನು ರತ್ನಾಕರ ಶತಕದುದ್ದಕ್ಕೂ ಕಾಣಬಹುದು.

ಅಪರಾಜಿತಶತಕದ ರಚನಾ ಕಾಲದಲ್ಲಿ ರತ್ನಾಕರ ದಿಗಂಬರಯತಿಯಾಗಿದ್ದನು. ಲೋಕವನ್ನು ತನ್ನ ಕೈಲಾದಷ್ಟು ಸುಧಾರಿಸಿದ್ದಾದ ನಂತರ ಉಳಿದ ಆಯುಷ್ಯವನ್ನೆಲ್ಲ ತನ್ನ ಸುಧಾರಣೆಗಾಗಿ ಇವನು ಮೀಸಲಾಗಿಡುವನು. ಅನ್ಯರ ಗೊಡವೆಯನ್ನು ತೊರೆದು, ಮಾತನ್ನು ಆದಷ್ಟೂ ಕಡಮೆ ಮಾಡಿ ಬಹುಮಟ್ಟಿಗೆ ಅಂತರ್ಮುಖಿಯಾಗುವನು. ಅಲ್ಲಲ್ಲೆ ನೀಚರನ್ನು ಕಂಡಾಗ್ಯೂ ಹಿಂದೆ ಉರಿದುಬಿದ್ದಂತೆ ಈಗ ರತ್ನಾಕರ ಆಕ್ರೋಶಗೊಂಡು ಮೇಲೇಳುವುದಿಲ್ಲ.

ಆವನೊಳಾದೊಡಂ ಕುಮತಿ ಕಾಳ್ನಡಿ ಕೀಳ್ನಡೆ ತೋರುತಿರ್ದೊಡಾ |
ಜೀವನೆ ನೈಜವೆನ್ನದೆ ತದೀಯ ಕಷಾಯ ಗುಣಂಗಳೆಂದವಂ |

೧. ಭ. ವೈ. ೮೦-೧೦೧. ೨. ರತ್ನಾ. ಶ. ೭೪. ೩. ರತ್ನಾ. ಶ. ೭೮.
೪. ರತ್ನಾ. ಶ. ೮೧. ೫. ರತ್ನಾ. ಶ. ೭೬. ೬. ರತ್ನಾ. ಶ. ೯೪.

ಭಾವಿಸಿ ಯಾ ಕಷಾಯತತಿ ತನ್ನೊಳಗಾಗದವೊಲ್ ನಿಜಾತ್ಮನಂ |
ಕಾವುತಮಿರ್ಪವಂ ಸ್ವಪರವೇದಿಯಲಾ ಅಪರಾಜಿತೇಶ್ವರಾ || ೬೧ ||

ಜೈನದರ್ಶನದ ಉಚ್ಚತಮಾದರ್ಶವನ್ನು ಇವನು ಕಂಡುಕೊಂಡಿರುವನು; ಪ್ರತಿಯೊಂದು ಜೀವಿಯೂ ನೈಜವಾಗಿ ಸಮ್ಯಕ್ತ್ವ ಶಿರೋಮಣಿಯಾಗಿರುತ್ತದೆ; ಆದರೆ ಅನ್ಯ ಪುದ್ಗಲಗಳ ಸಹವಾಸಕ್ಕೆ ಬಿದ್ದಾಗ ಮಾತ್ರ ಅದು ತನ್ನ ನೈಜತೆಯನ್ನು ನೀಗಿಕೊಂಡು ಹುಚ್ಚು ಕುಣಿತಕ್ಕೆ ಪ್ರಾರಂಭವಿಸುವುದು. ಅಂಥ ವೇಳೆಯಲ್ಲಿ ಅದರ ಮೇಲೆ ಸಹಾನುಭೂತಿ ತೋರಬೇಕೆಂದು ರತ್ನಾಕರಯೋಗಿ ಅಪರಾಜಿತಶತಕದಲ್ಲಿ ಸಾರಿರುವನು; ಜಿನವಾಣಿಯ ಸಾರ ಈ ಮಾತಿನಲ್ಲಿ ಘನೀಭೂತವಾಗಿದೆಯೆಂದರೆ ಸುಳ್ಳಾಗದು.

ಸರ್ವಗುಣಂಗಳೊಳ್ ಸುಲಭರಾರ್ ಜಿನ ನೀಂಪೊರಗಾಗಿ ಲೋಕದೊಳ್ |
ಪರ್ವಿದ ಮಿಥ್ಯೆಯೊಳ್ವಿಷಮಕಾಲದೊಳೀ ನರಕೀಟಕಂಗಳೊಳ್ ||
ಒರ್ವರೊಳಿರ್ದುದೊಂದು ಗುಣಮಂ ಗುಣಕೋಟಿಯೆನುತ್ತೆ ಕಂಡು ತಾ |
ನುರ್ವುವವಂಗೆ ನಿನ್ನ ಗುಣಮೊಲ್ದಿರವೇ ಅಪರಾಜಿತೇಶ್ವರಾ || ೬೩ ||

ಜೀವಕೋಟಿಯನ್ನೇ ರತ್ನಾಕರ ತಾಯ್ಗುರುಳಾಗಿ ನೋಡಿರುವನು. ಮಾನವನ ಇತಿಮಿತಿಯನ್ನು ಮನಗಂಡು ದಯಾರ್ದ್ರಹೃದಯನಾಗಿ ವಿಶ್ವಾನುಕಂಪದಿಂದ ಪರಿತಪಿಸಿರುವನು. ಸದಾ ತನ್ನಲ್ಲೇ ಓಲಾಡಿಕೊಂಡು ಅಪರಾಜಿತಶತಕದ ರಚನಾಕಾಲದಲ್ಲಿ ರತ್ನಾಕರಜೋಗಿ ಅಮೃತಭಾಗಿಯಾಗಿರುವನು! ಹಂಸಾನುಭವದ ಇಂಗಡಲಲ್ಲಿ ಈತ ಮುಳುಗಿಹೋಗಿರುವನು! ರತ್ನಾಕರಯೋಗಿ ಈ ವೇಳೆಯಲ್ಲಿ ನುಡಿದುದೆಲ್ಲ ಮೋಕ್ಷಮಾರ್ಗವಾಯಿತು; ಅವನೆಲ್ಲಿ ತಂಗಿದನೋ ಆ ಸ್ಥಳ ಪಾವನತೀರ್ಥವಾಯಿತು!

ಈಗ ನಮಗೆ ರತ್ನಾಕರನವೆಂದು ದೊರೆತಿರುವ ಕೃತಿಗಳಲ್ಲಿ ಮೊಟ್ಟಮೊದಲನೆಯದು ತ್ರಿಲೋಕಶತಕವಾದರೆ, ಕಟ್ಟಕಡೆಯದು ಅಪರಾಜಿತಶತಕ. ಇವನು ಎರಡು ಸಾವಿರದ ತನಕ ಅಧ್ಯಾತ್ಮ ಗೀತೆಗಳನ್ನು ರಚಿಸಿರುವನೆಂದು ದೇವಚಂದ್ರ ಹೇಳಿರುವುದರಿಂದ ಇವನ್ನು ರತ್ನಾಕರ ತನ್ನ ಬಾಳಿನ ಕೊನೆಗಾಲದಲ್ಲಿ ಹಾಡಿರಬಹುದೆಂದು ಊಹಿಸಬಹುದು.

ತ್ರಿಲೋಕಶತಕವನ್ನು ಕ್ರಿ.ಶ. ೧೫೫೭ರಲ್ಲಿ ರತ್ನಾಕರ ರಚಿಸಿರುವನು. ಈ ವೇಳೆಗೆ ಈತ ಇಪ್ಪತ್ತೈದರ ಯುವಕನೆಂದುಕೊಂಡರೆ ತನ್ನ ಮುವತ್ತೈದರಲ್ಲಿ ಅಥವಾ ಅದನ್ನು ದಾಟಿದ ಮೇಲೆ ಭರತೇಶವೈಭವ ರಚಿಸಿರಬಹುದು. ಭರತೇಶವೈಭವ ಜನಜನಿತವಾಗಲು ಎರಡು ಮೂರು ವರ್ಷವಾದರೂ ಬೇಕು. ಅನಂತರ ಈತನಿಗೆ ಬಹಿಷ್ಕಾರ ಬಿದ್ದಿರಬಹುದು. ತನ್ನ ನಲ್ವತ್ತನೇ ವಯಸ್ಸಿನಲ್ಲಿ ರತ್ನಾಕರ ವೀರಶೈವನಾಗಿ ಒಂದೆರಡು ವರ್ಷ ಅಲ್ಲಿದ್ದು ಮತ್ತೆ ಜಿನಧರ್ಮಕ್ಕೆ ಬಂದಿರಬಹುದು. ರತ್ನಾಕರ ಜನಿಸಿದ್ದು ಕ್ರಿ.ಶ. ೧೫೩೨ರಲ್ಲೆಂದಿಟ್ಟುಕೊಂಡರೆ ಕ್ರಿ.ಶ. ೧೫೬೭ರ ನಂತರ ಭರತೇಶವೈಭವ ರಚಿತವಾಗಿದೆ. ಕ್ರಿ.ಶ. ೧೫೭೨ರ ಹೊತ್ತಿಗೆ ಈತ ವೀರಶೈವನಾಗಿರಬಹುದು. ತನ್ನ ನಲ್ವತ್ತೈದನೆ ವಯಸ್ಸಿನಲ್ಲಿ ರತ್ನಾಕರಶತಕವನ್ನು ಈತ ರಚಿಸಿರಬಹುದು; ತನ್ನ ಐಯ್ವತ್ತನೆ ವಯಸ್ಸಿನಲ್ಲಿ ಅಪರಾಜಿತಶತಕವನ್ನು ಬರೆದಿರಬಹುದು; ಅಂದರೆ ಕ್ರಿ.ಶ. ೧೫೮೨ರ ಹೊತ್ತಿಗೆ ಈ ಗ್ರಂಥ ಬೆಳಕುಕಂಡಿತೆಂದು ಹೇಳಬಹುದು. ಇದಾದ ಮೇಲೆ

ರತ್ನಾಕರ ಅಧ್ಯಾತ್ಮ ಗೀತೆಗಳನ್ನು ರಚಿಸಿ ಹದಿನಾರನೆ ಶತಮಾನದ ಕೊನೆಯನ್ನೂ ಕಂಡು ಹದಿನೇಳನೇ ಶತಮಾನದ ಉದ್ಘಾಟನೆಯನ್ನೂ ನಡೆಸಿರಬಹುದು. ರತ್ನಾಕರನ ಕೃತಿಗಳಲ್ಲೇ ಕಾಣುವ ಆತನ ಮಾನಸಿಕ ಹಾಗೂ ಆಧ್ಯಾತ್ಮಿಕ ಬೆಳವಣಿಗೆಯನ್ನೂ ಪ್ರತಿಭೆಯ ಪುರೋಭಿವೃದ್ಧಿಯನ್ನೂ ಗಮನಿಸಿ ರತ್ನಾಕರನ ಜಾತಕವನ್ನು ಊಹೆಯ ಬುನಾದಿಯ ಮೇಲೆ ನಿರ್ಮಿಸಿರುವೆನು. ಇದಕ್ಕಿಂತಲೂ ಕರಾರುವಾಕಾಗಿ ಸಂಶೋಧನೆ ನಡೆಸುವವರನ್ನು ಹೃತ್ಪೂರ್ವಕ ಸ್ವಾಗತಿಸುವುದಲ್ಲದೆ ನನ್ನ ಕಲ್ಪನೆಯ ಕಟ್ಟಡದಲ್ಲಿರುವ ಕುಂದುಕೊರತೆಗಳನ್ನು ತಿದ್ದಿಕೊಳ್ಳುವೆನು.

ಭಾಗ ನಾಲ್ಕು

ಜೈನ ಧರ್ಮದ ಸಾಮಾನ್ಯ ಸ್ವರೂಪ*

"ಕೊನೆಮೊದಲಿಲ್ಲದ ಈ ಸಂಸಾರದಲ್ಲಿ ಭವಭ್ರಮಣೆಯ ತೊಡಕಿಗೆ ಸಿಕ್ಕಿ ಕಂಗಾಲಾಗುತ್ತಿರುವ ಜೀವಕೋಟಿಯನ್ನು ಕರ್ಮಪಾಶದಿಂದ ಬಿಡಿಸಿ ನಿತ್ಯಪದವಿಯನ್ನು ಯಾವುದು ನೀಡುವುದೋ ಅದೇ ಧರ್ಮ"[೧] ಶ್ರೀಸಮಂತಭದ್ರಾಚಾರ್ಯರ ವಾಣಿಯನ್ನು ಈ ರೀತಿ ಸಂಗ್ರಹಿಸಬಹುದು.

"ಮೊದಲು ಆತ್ಮನು ತನ್ನ ರಾಗದ್ವೇಷರೂಪ ಪರಿಣತಿಯನ್ನು ತೊರೆದು ವೀತರಾಗನಾಗಬೇಕು. ಆಗ ಈ ಮಂದಿರ, ಪ್ರತಿಮೆ, ತೀರ್ಥ, ದಾನ, ಜಪ, ತಪ ಮೊದಲಾದ ಸರ್ವವಸ್ತುಗಳೂ ಅದಕ್ಕೆ ಧರ್ಮವಾಗಿ ಸೇರುತ್ತವೆ. ಆದರೆ ಎಲ್ಲಿಯವರೆಗೆ ಆತ್ಮನಿಗೆ ವೀತರಾಗತ್ವವುಂಟಾಗುವುದಿಲ್ಲವೋ, ಆತ್ಮನ ರಾಗದ್ವೇಷಗಳು ನಷ್ಟವಾಗುವುದಿಲ್ಲವೋ, ಅಲ್ಲಿಯವರೆಗೆ ಅದಕ್ಕೆ ಎಲ್ಲಿಯೂ ಧರ್ಮವು ಲಭಿಸಲಾರದು. ಇನ್ನು ಆತ್ಮನಲ್ಲಿ ಶುಭರಾಗವಿದ್ದಾಗ ಪುಣ್ಯಬಂಧವಾಗುತ್ತದೆ; ಅಶುಭರಾಗ, ದ್ವೇಷ, ಮೋಹಗಳಿದ್ದಾಗ ಪಾಪಬಂಧವಾಗುತ್ತದೆ. ಎಲ್ಲಿ ನಿಜವಾದ ಶ್ರದ್ಧೆ, ಜ್ಞಾನ ಮತ್ತು ಆಚರಣೆಗಳಿರುವುವೋ ಅಲ್ಲಿ ಧರ್ಮವಿದೆ. ಅದಕ್ಕೆ ಬಂಧದ ಅವಸ್ಥೆಯು ಮೂಲದಲ್ಲಿಯೇ ಇದೆ. ಬಂಧವಿಲ್ಲದಿರುವುದೇ ಉತ್ತಮ ಸುಖವಾಗಿದೆ. ಇಂಥ ಉತ್ತಮ ಸುಖಕ್ಕೆ ಆತ್ಮನ ಸ್ವಭಾವರೂಪವಾದ ಧರ್ಮವೇ ಕಾರಣವಾಗಿದೆ."[೨]

'ಜೈನಧರ್ಮ' ಎಂಬ ಪದದಲ್ಲಿ ಎರಡು ಶಬ್ದಗಳಿರುವುದನ್ನು ಗಮನಿಸಬೇಕು. ಈ ಮಾತಿನ ಪೂರ್ವಾರ್ಧ 'ಜೈನ', ಉತ್ತರಾರ್ಧ 'ಧರ್ಮ' ಎಂದಾಗುವುದು. ಜಿನನಾದವನು ಉಪದೇಶಿಸಿದ ಧರ್ಮವೇ **'ಜೈನಧರ್ಮ'!** ಜ್ಞಾನಾವರಣಾದಿ ಕರ್ಮಪಾಶಗಳನ್ನು ಕಿತ್ತೊಗೆದ ಚೇತನಕ್ಕೆ ಜಿನನೆನ್ನುವರು. ಕರ್ಮಗಳನ್ನು ಜಯಿಸಿ ಜಿನನಾದವನನ್ನು ಪರಮಾತ್ಮನೆನ್ನುವರು; ಸರ್ವಜ್ಞನೆನ್ನುವರು; ಇಂಥ ಪರಿಪೂರ್ಣಾವಸ್ಥೆಯಲ್ಲಿ ಬೋಧಿಸುವ ಧರ್ಮ ಖಂಡಿತವಾಗಿ ಪ್ರಾಮಾಣಿಕವಾದುದು.

ಜಿನೇಂದ್ರನ ಸ್ಯಾದ್ವಾದ, ಜಗತ್ತಿನ ನಾನಾ ವಿಚಾರಲಹರಿಯನ್ನು ಕೂಲಂಕಷವಾಗಿ ಪೃಥಕ್ಕರಿಸಿ ಅನಂತರ ಯಾವುಯಾವುದರಲ್ಲಿ ಎಷ್ಟೆಷ್ಟು ಸತ್ಯವಿದೆಯೆಂಬುದನ್ನು ನಿರ್ಧರಿಸಿ ಒಂದು ಸಮನ್ವಯ ಸೂತ್ರವನ್ನು ಎಳೆಯಬಲ್ಲದು. ಜೈನರ್ಧಮಕ್ಕೆ ವಿಚಾರ ಒಂದು ಮುಖವಾದರೆ ಆಚಾರ ಇನ್ನೊಂದು ಮುಖ; ಸ್ಯಾದ್ವಾದದ ಬುನಾದಿಯ ಮೇಲೆ ಜೈನಧರ್ಮದ ವಿಚಾರಸೌಧ

* ಈ ಪ್ರಕರಣವನ್ನು ಬರೆಯುವಾಗ ('ಜೈನಧರ್ಮದ ಸಾಮಾನ್ಯ ಸ್ವರೂಪ'ದಿಂದ 'ಭವಿಷ್ಯತ್ ಕಾಲದ ತೀರ್ಥಂಕರರು' ಪೂರ್ತ) 'ಗೋ. ಸಾ., ಜೀ. ಕಾಂ', ದ್ರ. ಸಂ, ಜೈ. ಧ. ಪ, ಜೈ. ಧ. ಪ್ರ, ಜೈ. ಧ. ದಿ, ಜೈ. ಧ, ಆ. ಪು. ಸಂ, ಈ ಗ್ರಂಥಗಳನ್ನು ವಿಶೇಷವಾಗಿ ಬಳಸಿಕೊಂಡಿರುವೆನು.

೧. ದೇಶಯಾಮಿ ಸಮೀಚೀನಂ ಧರ್ಮಂ ಕರ್ಮನಿಬರ್ಹಣಮ್ |
ಸಂಸಾರ ದುಃಖತಃ ಸತ್ವಾನ್ಯೋ ಧರತ್ಯುತ್ತಮೇ ಸುಖೇ ‖ ರ. ಕ. ಶ್ರಾ., ಪ. ೨

೨. ರ. ಕ. ಶ್ರಾ., ಪು. ೭-೯ (ಸಂ. ಶ್ರೀ ಮಿರ್ಜಿ ಅಣ್ಣಾರಾಯರು)

ನೆಲೆಗೊಂಡಿದ್ದರೆ, ಅಹಿಂಸೆಯ ಅಡಿಗಲ್ಲಿನ ಮೇಲೆ ಜೈನಾಚಾರ ಸ್ಥಾಪಿತವಾಗಿದೆ. ಯಾರ ವಿಚಾರಕ್ಕೂ ಅನ್ಯಾಯವಾಗಬಾರದು, ಯಾವ ಜೀವಕ್ಕೂ ತೊಂದರೆಯಾಗಬಾರದು—ಇದೇ ಜಿನಧರ್ಮದ ಗುರಿ.

ಧರ್ಮಕ್ಕೂ ಎರಡರ್ಥವಿದೆ; ಒಂದು ವಸ್ತುವಿನ ಸ್ವಭಾವಕ್ಕೂ ಧರ್ಮವೆನ್ನುವರು, (ಅಗ್ನಿಯ ಸ್ವಭಾವ ದಹಿಸುವಿಕೆ, ವಾಯುವಿನ ಸ್ವಭಾವ ಚಲಿಸುವಿಕೆ ಇರುವಂತೆ ಜೀವದ ಸ್ವಭಾವ ಚೈತನ್ಯವಾಗಿದೆ) ಇನ್ನೊಂದು 'ಆಚಾರ'—'ಚಾರಿತ್ರ್ಯ' ಇವಕ್ಕೂ ಧರ್ಮವೆನ್ನುವರು. ಸ್ವಭಾವರೂಪವಾದ ಧರ್ಮ, ಜಡ ಮತ್ತು ಚೇತನಗಳೆರಡರಲ್ಲಿಯೂ ಆಯಾಸಂದರ್ಭಕ್ಕನು ಗುಣವಾಗಿ ಇದ್ದೇ ಇರುತ್ತದೆ. 'ಸ್ವಭಾವ'ರಹಿತವಾದವಸ್ತು ಈ ಜಗತ್ತಿನಲ್ಲಿ ಯಾವುದೂ ಇಲ್ಲ. ಆದರೆ 'ಆಚಾರ' ರೂಪವುಳ್ಳ ಧರ್ಮವನ್ನು ಕೇವಲ ಚೈತನ್ಯವುಳ್ಳ ಆತ್ಮಗಳಲ್ಲಿ ಮಾತ್ರ ನೋಡಬಹುದು. (ಇವು ಒಂದಕ್ಕೊಂದು ಪೂರಕವಾಗಿರುವುದರಿಂದ) ಜಿನೇಂದ್ರರು ಈ ಎರಡೂ ಧರ್ಮವನ್ನು ಬೋಧಿಸಿರುವರು. "ವಸ್ತುಸ್ವಭಾವ ನಿರೂಪಣವು ಆಯಾ ಧರ್ಮದ ದರ್ಶನವೆನಿಸುವುದು. ಆ ದರ್ಶನದಿಂದ ಸಿದ್ಧಿಯ ಅರಿವುಂಟಾಗುವುದು. ಆ ಸಿದ್ಧಿಯನ್ನು ಸಂಪಾದಿಸಲಿಕ್ಕೆ ಆಚಾರರೂಪ ಧರ್ಮವು ಸಾಧನವಾಗುತ್ತದೆ. ಅದರಿಂದ ಪ್ರತಿಯೊಂದು ಧರ್ಮಕ್ಕೂ ತನ್ನದೇ ಆದ ದರ್ಶನವಿರುತ್ತದೆ. ದರ್ಶನದಲ್ಲಿ ಆತ್ಮವೆಂದರೇನು? ಪರಲೋಕವೆಂದರೇನು? ವಿಶ್ವವೆಂದರೇನು? ಪರಮಾತ್ಮನ ಸ್ವರೂಪವೆಂದರೇನು? ಇತ್ಯಾದಿ ಪ್ರಶ್ನೆಗಳ ವಿವೇಚನೆಯು ಇರುತ್ತದೆ. ಆಚಾರರೂಪೀ ಧರ್ಮದ ವಿವರಣೆಯಲ್ಲಿ ಆತ್ಮವು ಪರಮಾತ್ಮನಾಗುವ ಮಾರ್ಗವನ್ನು ತೋರಿಸುತ್ತದೆ. ಯಾವಾಗಲೂ ವಿಚಾರದ ಪರಿಣಾಮವು ಆಚಾರದ ಮೇಲೆ ಆಗುತ್ತದೆ. ಅದರಿಂದ ದರ್ಶನವು ಧರ್ಮವನ್ನು ರೂಪಿಸುತ್ತದೆ, ಅದಕ್ಕಾಗಿ ಧರ್ಮದ ವಿವೇಚನೆಯಲ್ಲಿ ದರ್ಶನ ಹಾಗೂ ಚಾರಿತ್ರ್ಯಗಳ ಸಮಾಲೋಚನೆಯು ಅವಶ್ಯವಾಗಿದೆ. ಜೈನದರ್ಶನವು ವಸ್ತುಸ್ವಭಾವ ನಿರೂಪಣೆಯಲ್ಲಿ ಅಂತರ್ಗತವಾಗುವುದು. ಅದರಿಂದ ಅದನ್ನೂ ನಾವು ಧರ್ಮವೆಂದು ತಿಳಿಯುತ್ತೇವೆ. ಏಕೆಂದರೆ ಆತ್ಮ ಪರಮಾತ್ಮರಲ್ಲಿಯ ಅಂತರದ ಅರಿವು ಉಂಟಾದಾಗಲೇ ಚಾರಿತ್ರ್ಯವನ್ನು ಅವಲಂಬಿಸಿ, ಮಾನವನು ಮೋಕ್ಷದ ಸಾಧಕನಾಗುವನು. ಅದರಿಂದ **ಜೈನಧರ್ಮವೆಂದರೆ ಜಿನದೇವನಿಂದ ಉಪದೇಶಿಸಲ್ಪಟ್ಟ ವಿಚಾರ ಹಾಗೂ ಆಚಾರವೆಂದು ತಿಳಿಯಬೇಕು.**"[೧]

"ಜೈನಧರ್ಮ ವೈಜ್ಞಾನಿಕವಾದುದು. ಪೂರ್ವಾಪರ ವಿರೋಧ ರಹಿತವಾದುದು; ಪ್ರತ್ಯಕ್ಷ ಅನುಮಾನಾದಿಗಳಿಂದ ನೋಡಿದಾಗಲು ಇದರಲ್ಲಿ ಯಾವ ದೋಷವೂ ಸಿಕ್ಕುವಂತಿಲ್ಲ; ವಸ್ತು ಸ್ವರೂಪವನ್ನು ಇದು ಯಥಾರ್ಥವಾಗಿ ನಿರೂಪಿಸುತ್ತದೆ; ಶಂಕರನಾದ ಜಿನೇಂದ್ರ ಉಪದೇಶಿಸಿರುವುದರಿಂದ ಸರ್ವಜೀವಿಗಳಿಗೂ ಇದು ಹಿತಕಾರಿಯಾದದು; ಎಲ್ಲ ಮಿಥ್ಯಾಮಾರ್ಗಗಳನ್ನೂ ಜೈನಧರ್ಮ ನಿರಾಕರಿಸುವುದು."[೨]

೧. ಶ್ರೀ ಮಿರ್ಜಿ ಅಣ್ಣಾರಾಯರು, ಜೈ. ಧ. ಪು. ೩

೨. ಆಪ್ತೋಪಜ್ಞಮನುಲ್ಲಂಘ್ಯಮದೃಷ್ಟೇಷ್ಟ ವಿರೋಧಕಮ್ |
ತತ್ವೋಪದೇಶಕೃತ್ ಸಾರ್ವಂ ಶಾಸ್ತ್ರಂ ಕಾಪಥ ಘಟ್ಟನಂ ‖ ೯. ರ. ಕ. ಶ್ರಾ. ‖

"Jainism is a Science and not a code of arbitrary rules and capricious Commandments. It does not claim to derive its authority from any non-human source, but is science-like, founded on the Knowledge of those Great Ones who have attained perfection with its aid. Scientific Validity can be claimed neither by dogmatism nor mysticism; and it is unnecessary to add that nothing but science or scientific thought can be relied upon to produce immediate, certain and unvarying results....Jainism differs from all other religions, in so far as it is a perfectly accurate, definite and exact science, free from misty and mystic ritual, unholy superstition and fear-engendering devotion. It does not ask its devotee to accept its teaching on the authority of anything other than Reason, and invites all to understand the nature of the subject before pinning their faith on it.[೧]

ಜಿನಧರ್ಮದ ಪ್ರಕಾರ ಜಗತ್ತಿನ ಪ್ರತಿಯೊಂದು ಜೀವಿಯೂ ಅವ್ಯಕ್ತಪರಮಾತ್ಮ! ಪ್ರತಿಯೊಂದು ಆತ್ಮವೂ ತನ್ನ ಸಹಜಸ್ವರೂಪವನ್ನು ಅರಿತಾಗ ಪರಮಾತ್ಮನಾಗುವುದು. ಆದರೆ ಕರ್ಮದ ದುರಾಕ್ರಮಣಕ್ಕೆ ಅರಿತೋ ಅರಿಯದೆಯೋ ತುತ್ತಾಗಿರುವ ಒಂದೊಂದು ಜೀವವೂ ತನ್ನ ಅನಂತ ಸಿರಿಯನ್ನು ಮರೆತು ಸಂಸಾರ ಸಾಗರದಲ್ಲಿ ಅಂಡಲೆಯುತ್ತಿದೆ. ಸಂಸಾರದ ಸ್ವರೂಪವನ್ನೂ ಕರ್ಮಗಳ ಮುತ್ತುಗೆಯನ್ನೂ ಜೈನಸಿದ್ಧಾಂತ ವೈಜ್ಞಾನಿಕವಾಗಿ ವಿವರಿಸಿದೆ; ಇಷ್ಟಕ್ಕೇ ಸುಮ್ಮಗಾಗದೆ ಅಪೇಕ್ಷೆಪಟ್ಟ ಜೀವಿಗಳೆಲ್ಲ ಜಿನರಾಗ ಅನುಸರಿಸಬೇಕಾದ ವೈಜ್ಞಾನಿಕ ಹಾಗೂ ಆಧ್ಯಾತ್ಮಿಕ ಮಾರ್ಗವನ್ನೂ ತೋರಿಸಿಕೊಡುತ್ತದೆ.

ಸೃಷ್ಟಿಕರ್ತನನ್ನೂ ಸ್ಥಿತಿಕರ್ತನನ್ನೂ ಮತ್ತು ಲಯಕರ್ತನನ್ನೂ ಜೈನಧರ್ಮ ಎಂದೂ ಮನ್ನಿಸಿಲ್ಲ. ಪ್ರತಿಯೊಬ್ಬನ ಏಳುಬೀಳಿಗೂ ಅವನವನೇ ಕಾರಣನೆಂಬುದನ್ನು ತರ್ಕಬದ್ಧವಾಗಿ ಜೈನ ಸಿದ್ಧಾಂತ ಸ್ಥಾಪಿಸಿದೆ. ಅಪೇಕ್ಷೆ ಪಟ್ಟವರು ಏಳಲೂ ಬಹುದು ಅಂತೆ ಬೀಳಲೂಬಹುದು. ಅವನವನ ಸೃಷ್ಟಿಗೂ (ಹುಟ್ಟು), ಸ್ಥಿತಿಗೂ ಮತ್ತು ಲಯಕ್ಕೂ ಅವನವನೇ ಬಾಧ್ಯ! ತನ್ನ ಕರ್ಮಾನುಸಾರ ಜೀವಿ ಹುಟ್ಟುವನು, ಬದುಕುವನು ಅಂತೆ ಸಾಯುವನು. ಯಾವಾಗ ಕರ್ಮದೊಡನೆ ಆತ್ಮ, ಸಖ್ಯ ಬೆಳೆಸುವುದೋ ಅಂದಿನಿಂದ ಅದರ ಜಗತ್ತು ಪ್ರಾರಂಭವಾಗುವುದು, ಎಂದು ಕರ್ಮದ ಸಹವಾಸವನ್ನು ಆತ್ಮ ಪೂರ್ಣವಾಗಿ ತ್ಯಜಿಸುವುದೋ ಅಂದೇ ಅದರ ಜಗತ್ತು (ಸಂಸಾರ) ಲಯವಾಗುವುದು. ಒಮ್ಮೆ ಕರ್ಮಗಳನ್ನೆಲ್ಲ ಜಯಿಸಿದನೆಂದರೆ ಜೀವಿ, ಜಿನನಾಗಿ ಅನಂತರ ಸಿದ್ಧನಾಗಿ ಕೊನೆಗೆ ಎಂದೂ ಸಂಸಾರಕ್ಕೆ ಸಿಕ್ಕದ ನಿಶ್ಚಿಂತನಾಗುವನು![೨]

೧. C. R. Jain, '*What is Jainism*' E. A. A. P. I.

೨. The Jainas maintain that all souls are naturally endowed with the attribute of omniscience, so that the Tirthnakaras were no exception to the rule....The Jainas accept no teaching that is not scientific. They hold that wherever there is a fact it must be of a clear and definite and certain nature...the Jainas maintain that all facts are capable of intellectual demonstration, and of being established by scientific investigation. As for the practical side of religion, the Jainas urge that nothing that is unscientific or vague can ever be relied upon for producing immediate certain and unvarying results. The Jaina term for science is 'Vastu-Svarupa' is naturally not scientific. The Jain Doctrine is known consequently, as SIDDHANTA (Established Truth) Sri C. R. Jain, '*Jaina Doctrine*' W. I. J, 28.

ಜೈನದೃಷ್ಟಿಯಿಂದ ನೋಡುವಾಗ (ವ್ಯವಹಾರ ದೃಷ್ಟಿ) ಪ್ರತಿಯೊಂದು ಜೀವಿಯೂ ತನ್ನ ಭವಭ್ರಮಣದ ಕಾರ್ಯದಲ್ಲಿ ಸೃಷ್ಟಿಕರ್ತನಾಗಿ, ಸ್ಥಿತಿಕರ್ತನಾಗಿ ವರ್ತಿಸುತ್ತಿರುವನು, ಲಯಕರ್ತನಾಗಿ ವಿಜೃಂಭಿಸುತ್ತಿರುವನು. ಈ ಮಹತ್ಕಾರ್ಯಕ್ಕಾಗಿ ಕರ್ಮಗಳ ನೆರವನ್ನೂ ಪಡೆಯುವನು. ಈ ಮೂರು ರೂಪವನ್ನೂ ಬಿಟ್ಟುಕೊಟ್ಟಾಗ (ಸೃಷ್ಟಿಕರ್ತ, ಸ್ಥಿತಿಕರ್ತ ಮತ್ತು ಲಯಕರ್ತ ಪದವಿಗಳು ಅಂದರೆ ಕರ್ಮದಿಂದ ಪಾರಾದಾಗ) ಈ ಮೂರಕ್ಕೂ ಅತೀತನಾದಾಗ ಜೀವ, ಸರ್ವಜ್ಞನಾಗಿ ನಿರಂಜನನಾಗುವನು!

ಜೀವ ಮತ್ತು ಅಜೀವ ಇವೆರಡರ ಸಖ್ಯದಿಂದ ಈ ಜಗತ್ತು ಹಾಗೂ ಜಗದ್ವ್ಯಾಪಾರ ನಡೆಯುತ್ತಿದೆ. ಇವೆರಡೂ ನಿತ್ಯವಾದ ದ್ರವ್ಯಗಳು. ಇವೆರಡರ ಸಖ್ಯಕ್ಕೂ ಬಿಡುಗಡೆಗೂ ದೇವರು ಎಂದೂ ಕೈಹಾಕುವುದಿಲ್ಲ. ಈ ಎರಡು ದ್ರವ್ಯಗಳೂ ಆಕಾಶದಲ್ಲಿ ಆಶ್ರಯವನ್ನು ಪಡೆದು ಅನಂತಕಾಲದಿಂದ 'ಧರ್ಮದ್ರವ್ಯದ' ಸಹಾಯದಿಂದ ತಿರುಗುತ್ತ, 'ಅಧರ್ಮ' ದ್ರವ್ಯದ ನೆರವಿಂದ ವಿಶ್ರಮಿಸಿಕೊಳ್ಳುತ್ತಿವೆ. ಈ ವ್ಯಾಪಾರ ನಿರಂತರವಾಗಿ ಸಾಗಿದೆ. ಜೀವ ಮತ್ತು ಅಜೀವಗಳು ಪರ್ಯಾಯ ರೂಪದಲ್ಲಿ ಮಾರ್ಪಾಟು ಹೊಂದಿದಂತೆ ಕಂಡರೂ ಇವುಗಳ ಮೂಲತಮರೂಪ ಚಿರಸ್ಥಾಯಿಯಾದುದು.[೧]

ಕಲ್ಪಕಲ್ಪದಲ್ಲೂ ತೀರ್ಥಂಕರರು ಅಜೀವದ ಸೆರೆಯಿಂದ ಪಾರಾಗಿ ಜಗದ್ವ್ಯಾಪಾರದ ರಹಸ್ಯವನ್ನೂ ಕರ್ಮದೊಡನೆ ತಾವು ನಡೆಸಿದ ಹಣಾಹಣಿಯ ಹೋರಾಟವನ್ನೂ ಭವ್ಯಕೋಟಿಗೆ[೨]

೧. The universe which we inhabit contains bodies and things which are perceived through the senses, and are characterised by colour (red, black, blue, yellow and white), taste (pungent, bitter, saline, acid and sweet), odour (pleasant or unpleasant) and tactile properties (hard, soft, light, heavy, hot, cold, smooth and rough); and sound arises from the agitation of their parts in certain characteristic ways. These bodies and things are further seen to be either endowed with consciousness or not. We thus have two kinds of substance, the conscious (*chaitanya*, also called *Jiva*). All shifting and chaging nature is reducible to these two substances whose interplay is the cause of the world-process or evolution. Now, since these substances exist in Space, and continue in Time and move about with the help of a medium of motion, the ether of modern science, and come to rest with the assistance of another kind of ether, and since the functions of expansion and continuity, as well as those of being helpful in the states of motion and rest cannot be performed except by different substance—Sri C. R. Jain, H. H. D, I, P. VII-IX.

೨. "ಯಾವ ಜೀವಿಗೆ ಸಿದ್ಧಸ್ಥಿತಿಗೇರುವ ಯೋಗ್ಯತೆಯಿರುವುದೋ ಆ ಜೀವಕ್ಕೆ 'ಭವ್ಯ'ರೆನ್ನುವರು. ಉಳಿದ ಜೀವರು ಅಭವ್ಯರು. ಅನೇಕ ಜೀವಿಗಳು ಮುಕ್ತಿಯನ್ನು ಹೊಂದಲಿಕ್ಕೆ ಯೋಗ್ಯವಿದ್ದೂ ಮುಕ್ತರಾಗಿಲ್ಲ. ಇವರನ್ನು ವಿಧವೆಯರಿಗೆ ಹೋಲಿಸಬಹುದು. ವಿಧವೆಯಾದ ಸ್ತ್ರೀಗೆ ಪುತ್ರೋತ್ಪತ್ತಿಯಾಗುವ ಶಕ್ತಿಯಿದ್ದೂ